CC-O. In Public Domain. Digitized by eGangotri

ಶ್ರೀ ಶೃಂಗೇರಿ ಜಗದ್ಗುರು

ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ

ಉಪದೇಶಾಮೃತ

ಉಪದೇಶ ಸುಧಾ

(ಭಾಗ ೧)

ಅನುವಾದ ;

ಡಾ|| ಎನ್. ಎಸ್. ದಕ್ಷಿಣಾಮೂರ್ತಿ

ಪ್ರಕಾಶಕರು ;

ಶ್ರೀ ಶಾರದಾ ಟ್ರಸ್ಟ್,

4781, "ಗೋಮತಿ" ನರಸಿಂಹರಾಜಮೊಹಲ್ಲಾ,

ಮೈಸೂರು-570 007

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪದೇಶಸುಧಾ

(ಭಾಗ ೧)

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶೃಂಗೇರಿ ಜಗದ್ಗುರು

ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸನ್ನಿಧಾನಂಗಳವರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

श्री श्री जगद्गुरु शङ्कराचार्य महासंस्थानम् दक्षिणाम्नाय श्री शारदापीठम् शृङ्गेरी

V. R. GOWRI SHANKAR, B.E., D.I.I.Sc., AMIMA.
Administrator
SRI SRINGERI MATH &
ITS PROPERTIES
SRINGERI-577 139(Karnataka)

Phone : Office : 23
Res. : 92

REF. No. 2195

Camp

Date 10-12-87

ಗುರುಭಕ್ತಾಲಂಕಾರ ಶ್ರೀ ಪಿ. ಆರ್. ಹರಿಹರನ್‌ರವರಿಗೆ ನಮಸ್ಕಾರಗಳು

ತಾವು ಕಳುಹಿಸಿದ ಪುಸ್ತಕಗಳನ್ನು ಶ್ರೀ ಶ್ರೀಗಳವರು ವೀಕ್ಷಿಸಿದರು. ಜಗದ್ಗುರು ಮಹಾಸ್ವಾಮಿಗಳವರು ಮಾಡಿರುವ ಉಪನ್ಯಾಸಗಳನ್ನು ಪುಸ್ತಕರೂಪವಾಗಿ ಹೊರತರಬೇಕೆಂಬ ತಮ್ಮ ಸಂಕಲ್ಪವು ತುಂಬಾ ಶ್ಲಾಘನೀಯವಾಗಿದೆ. ಈ ಗ್ರಂಥಗಳು ಭಕ್ತಜನರಿಗೆ ವಿಶೇಷವಾಗಿ ಉಪಕಾರಂಗಳಾಗಲೆಂದು ಶ್ರೀ ಶ್ರೀಗಳವರು ಆಶೀರ್ವದಿಸಿರುತ್ತಾರೆ.

ಇಂತು ನಮಸ್ಕಾರಗಳು,

(ಸಹಿ) V. R. Gowri Shankar

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶೃಂಗೇರಿ ಜಗದ್ಗುರು

ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ

ಉಪದೇಶಾಮೃತ

ಉಪದೇಶ ಸುಧಾ

(ಭಾಗ ೧)

ಅನುವಾದ :

ಡಾ|| ಎನ್. ಎಸ್. ದಕ್ಷಿಣಾಮೂರ್ತಿ

SRI VIDYA BHARATHI
BOOK CENTRE
Bharathi Street
SRINGERI-577 139.

ಪ್ರಕಾಶಕರು :

ಶ್ರೀ ಶಾರದಾ ಟ್ರಸ್ಟ್,

4581, "ಗೋಮತಿ" ನರಸಿಂಹರಾಜಮೊಹಲ್ಲಾ,

ಮೈಸೂರು-570 007

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪದೇಶ ಸುಧಾ (ಭಾಗ [illegible]) ಶ್ರೀ ಶೃಂಗೇರಿ ಜಗದ್ಗುರು
ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಉಪದೇಶಾಮೃತ
ಕ್ರೌನ್ ಅಷ್ಟದಳ, 116+9 ಪುಟಗಳು, 1000 ಪ್ರತಿಗಳು

© ಎಲ್ಲಾ ಹಕ್ಕುಗಳೂ ಪ್ರಕಾಶಕರದು

ಬೆಲೆ : ಐದು ರೂಪಾಯಿ

ಮುದ್ರಕರು :
ಶ್ರೀ ಶಾರದ ಮುದ್ರಣ ಪ್ರಕಾಶನಾಲಯ (ಪ್ರೈ.) ಲಿ, ಮೈಸೂರು—4

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಿಕೆ

ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶ್ರೀಶಾರದಾಪೀಠದ ಜಗದ್ಗುರುಗಳಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸನ್ನಿಧಾನದವರು ತಮಿಳು ನಾಡಿನಲ್ಲಿ ಪ್ರವಾಸ ಮಾಡುತ್ತಲಿದ್ದಾಗ, ಭಕ್ತರ ನಿವೇದನೆಯಂತೆ, ತಾವು ತಂಗಿದ್ದ ಸ್ಥಳಗಳಲ್ಲಿ ಸಾಯಂಕಾಲ ಅನುಗ್ರಹ ರೂಪವಾದ ಉಪದೇಶಾತ್ಮಕ ಉಪನ್ಯಾಸಗಳನ್ನು ಮಾಡುತ್ತಲಿದ್ದರು. ಉಪನ್ಯಾಸಗಳ ವಿಷಯಗಳಾದರೋ ನಮ್ಮ ಸನಾತನ ಧರ್ಮ ಹಾಗೂ ವೇದಾಂತಕ್ಕೆ ಸಂಬಂಧಿಸಿದವು. ಸರಳವಾದ ಭಾಷೆಯಲ್ಲಿ ಆಖ್ಯಾಯಿಕೆಗಳ ಮೂಲಕ ಗಹನವಾದ ತತ್ತ್ವಗಳನ್ನು ಜನರಿಗೆ ಮನದಟ್ಟಾಗುವಂತೆ ಪ್ರತಿಪಾದನೆ ಮಾಡುವುದು ಶ್ರೀ ಶ್ರೀ ಜಗದ್ಗುರುಗಳವರ ವೈಶಿಷ್ಟ್ಯ. ಈ ಉಪನ್ಯಾಸಗಳೆಲ್ಲವೂ ತಮಿಳುಭಾಷೆಯಲ್ಲಿ ಗ್ರಂಥರೂಪದಲ್ಲಿ ಪ್ರಕಟವಾಗಿರುತ್ತವೆ. ಈ ಉಪನ್ಯಾಸಗಳೆಲ್ಲವನ್ನೂ ಕನ್ನಡ ಭಾಷೆಯಲ್ಲಿಯೂ ತರಬೇಕೆಂಬ ನಮ್ಮ ಅಭಿಲಾಷೆಯನ್ನು ನೇರವೇರಿಸಿಕೊಟ್ಟವರು ಸನ್ಮಾನ್ಯ ಡಾ. ಎನ್. ಎಸ್. ದಕ್ಷಿಣಾಮೂರ್ತಿಯವರು. ಉಪನ್ಯಾಸಗಳನ್ನು ಕ್ರಮವಾಗಿ ಶ್ರೀ ಶಂಕರಕೃಪಾ ಮಾಸಪತ್ರಿಕೆಯಲ್ಲಿ ಪ್ರಕಟಮಾಡಿದೆವು. ಅವುಗಳನ್ನು ಒಂದು ಗ್ರಂಥರೂಪದಲ್ಲಿ ತರಬೇಕೆಂಬ ನಮ್ಮ ಆಭಿಲಾಷೆ ಕಾರ್ಯಗತವಾಗಿ. ಉಪನ್ಯಾಸ ಮಾಲೆಯ ಗ್ರಂಥದ ಮೊದಲನೆಯ ಭಾಗವನ್ನು ಓದುಗರಿಗೆ ಅರ್ಪಿಸುತ್ತಿದ್ದೇವೆ.

ಭಾಷಾಂತರ ಮಾಡಿಕೊಟ್ಟ ಡಾ|| ಎನ್. ಎಸ್. ದಕ್ಷಿಣಾಮೂರ್ತಿಯವರಿಗೆ ನಮ್ಮ ಕೃತಜ್ಞತೆಗಳು,

ಆಸ್ತಿಕರು ಈ ಗ್ರಂಥದ ಸಂಪೂರ್ಣ ಪ್ರಯೋಜನವನ್ನು ಪಡೆಯುವರೆಂದು ಆಶಿಸಲಾಗಿದೆ.

ಪ್ರಕಾಶಕರು

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯಸೂಚನೆ

೧.	ಬಾಳಿನ ದಾರಿ	....	1
೨.	ಭಕ್ತಿ	....	14
೩.	ಶ್ರೀ ಶಂಕರ ಭಗವತ್ಪಾದಾಚಾರ್ಯರು	....	35
೪,	ಧ್ಯಾನ	....	43
೫,	ಕರ್ಮ	....	67
೬.	ಮನುಷ್ಯ ಜನ್ಮವನ್ನು ವ್ಯರ್ಥಮಾಡಿಕೊಳ್ಳಬೇಡಿ	....	95

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಉಪದೇಶ

೧ ಬಾಳಿನ ದಾರಿ

ವಿಶುದ್ಧಜ್ಞಾನ ದೇಹಾಯ ತ್ರಿವೇದೀ ದಿವ್ಯಚಕ್ಷುಷೇ ।
ಶ್ರೇಯಃ ಪ್ರಾಪ್ತಿ ನಿಮಿತ್ತಾಯ ನಮಃ ಸೋಮಾರ್ಧಧಾರಿಣೇ ॥
ನಮಾಮಿ ಯಾಮಿನೀನಾಥಲೇಖಾಲಂಕೃತಕುಂತಲಾಮ್ ।
ಭವಾನೀಂ ಭವಸಂತಾಪನಿರ್ವಾಪಣಸುಧಾನದೀಮ್ ॥

ದೇವಿಯನ್ನು ಸ್ತುತಿಸುವಾಗ ಆಕೆಯ ಸ್ವರೂಪವನ್ನು ಯಾವ ವಿಧವಾಗಿ ಭಾವಿಸಬೇಕು? 'ದೇವಿಯನ್ನು ಪೂಜಿಸಿ ನಾವು ಯಾವ ವಿಧವಾದ ಫಲವನ್ನು ಪಡೆಯಬಹುದು' ಎನ್ನುವುದು ಮೇಲೆ ಹೇಳಿದ ಶ್ಲೋಕದಲ್ಲಿ ಸ್ಪಷ್ಟಪಡಿಸಲಾಗಿದೆ. ದೇವಿಗೆ ಮಾಲೆ, ಬಳೆ ಇಂತಹ ಅಲಂಕಾರಗಳು ಇದ್ದರೂ ಒಂದು ಅಲಂಕಾರ ವಿಶೇಷವಾಗಿ ಇದೆ. ಅದು ಯಾವುದು ಎನ್ನುವ ಪ್ರಶ್ನೆಗೆ ಉತ್ತರವಾಗಿ 'ಯಾಮಿನೀನಾಥ ಲೇಖಾಲಂಕೃತ ಕುಂತಲಾಮ್' ಎಂದು ಶ್ಲೋಕದಲ್ಲಿ ಇದೆ. 'ಯಾಮಿನೀನಾಥ' ಎಂದರೆ ಚಂದ್ರ. 'ಲೇಖಾ' ಎಂದರೆ ಕಲೆ. ಆದ್ದರಿಂದ 'ಯಾಮಿನೀನಾಥಲೇಖಾಲಂಕೃತ ಕುಂತಲಾಮ್' ಎನ್ನುವುದಕ್ಕೆ ಚಂದ್ರಕಲೆಯಿಂದ ಅಲಂಕೃತವಾದ ಶ್ರೀಮುಡಿಯುಳ್ಳವಳು ಎಂದು ಅರ್ಥ. ಈ ಆಭರಣದ ವಿಶೇಷವೇನು? ಈ ಪ್ರಪಂಚದದಲ್ಲಿ ಯಾರೂ ಚಂದ್ರನನ್ನು ತಲೆಯಲ್ಲಿ ಇಟ್ಟುಕೊಳ್ಳಲಾರರು. ಆದರೆ ದೇವಿ ಚಂದ್ರನನ್ನು ಹೇಗೆ ಇಟ್ಟುಕೊಂಡಿದ್ದಾಳೆ? ಚಂದ್ರ ಎಲ್ಲಿ ಇಡಲ್ಪಟ್ಟಿದ್ದಾನೆ ಎಂದು ಹೇಳುವುದರಲ್ಲಿ ಮುಖ್ಯವಾದ ಭಾವವಿದೆ. ಪರಮಶಿವನೂ ದೇವಿಯೂ ಒಟ್ಟಾಗಿ ಜ್ಞಾನ ಕಾಯರಾಗಿದ್ದಾರೆ. ಅವರಿಗೆ ಒಂದು ವಿಧವಾದ ಶರೀರ ನಿಜಕ್ಕೂ ಇಲ್ಲ, ಆದರೂ ಭಕ್ತರನ್ನು ಅನುಗ್ರಹಿಸಲು ಅವರು ಹಲವು ಶರೀರಗಳನ್ನು

Sri Vidyabharathi Book Centre, Sringeri

 CC-O. In Public Domain. Digitized by eGangotri

ಪಡೆಯುವುದುಂಟು. ಈಶ್ವರನು ಭಕ್ತನನ್ನು ಅನುಗ್ರಹಿಸಲು ಮೊದಲು ಯಾವ ಶರೀರವನ್ನು ಪಡೆದನೋ ಅದು ನಮಗೆ ಈಗ ಉಪಾಸನೆಗೆ ಸಹಾಯ ಪಡುತ್ತದೆ. ದೇವಿಯ ತಲೆಯ ಮೇಲಿರುವ ಚಂದ್ರನ ಭಾವ ಹೀಗಿರುತ್ತದೆ– ಚಂದ್ರ ಪ್ರಕಾಶವನ್ನು ಹರಡುತ್ತಾನೆ. ಅದೇ ವಿಧವಾಗಿ ಜ್ಞಾನ ಪ್ರಕಾಶ ಹರಡುತ್ತದೆ. ಆದ್ದರಿಂದ ದೇವಿ ತಲೆಯ ಮೇಲೆ ಚಂದ್ರನನ್ನು ಇಟ್ಟುಕೊಂಡಿದ್ದಾಳೆ ಎನ್ನುವುದಕ್ಕೆ ಆಕೆ ಜ್ಞಾನದಿಂದ ಕೂಡಿದ್ದಾಳೆ ಎನ್ನುವುದು ಭಾವ. ಹೀಗೆ ನಿಜವಾಗಿಯೂ ಇದ್ದರೂ ಕೂಡ ಸಗುಣೋಪಾಸನೆ ಮಾಡುವಾಗ ಆಕೆಯನ್ನು ತಲೆಯ ಮೇಲೆ ಚಂದ್ರನನ್ನು ಇಟ್ಟುಕೊಂಡಂತೆ ಸ್ಮರಿಸುವುದು ಆವಶ್ಯಕ. ಚಂದ್ರನನ್ನು ತಲೆಯ ಮೇಲೆ ಇಟ್ಟುಕೊಂಡಿರುವುದರ ಭಾವ, ತಲೆ ಶ್ರೇಷ್ಠವಾದ ಜ್ಞಾನದಿಂದ ಕೂಡಿದೆ ಎಂದು. ದೇವಿಯಂತೆಯೇ ಈಶ್ವರನೂ ಕೂಡ 'ಸೋಮಾರ್ಧಧಾರಿಣೇ' ಎಂದರೆ ತಲೆಯಲ್ಲಿ ಚಂದ್ರಕಲೆಯನ್ನು ಧರಿಸಿರುವವನು ಎಂದು ಸ್ತುತಿಸಲ್ಪಟ್ಟಿದ್ದಾನೆ.

ಶ್ಲೋಕದಲ್ಲಿ ಹೇಳಲ್ಪಟ್ಟ ದೇವಿಯ ಎರಡನೆಯ ವಿಶೇಷಣ 'ಭವಸಂತಾಪ ನಿರ್ವಾಪಣಸುಧಾನದೀಮ್' ಎನ್ನುವುದು. ಈ ಪ್ರಪಂಚದಲ್ಲಿ ನಾವು ಹೊಂದುವ ಸುಖ ಶಾಶ್ವತವಾದುದಲ್ಲ. ಅಲ್ಲದೆ, ನಾವು ಪಡೆಯುವ ಸುಖ ದುಃಖಗಳಿಂದ ಕೂಡಿರುತ್ತರುತ್ತದೆ. ದುಃಖವಿಲ್ಲದ ಸುಖ ಪ್ರಪಂಚದಲ್ಲಿಲ್ಲ. 'ಯೌವನಂ ಜರಯಾಗ್ರಸ್ತಂ' ಎಂದು ಹೇಳಲಾಗಿದೆ. ಯೌವನ ಸುಖ ಪಡೆಯುವುದಕ್ಕೆ ಒಂದು ಕಾರಣವಾಗಿದೆ. ಮುಪ್ಪು ಇದನ್ನು ಕಬಳಿಸಿಬಿಡುತ್ತದೆ. ಈ ರೀತಿ ಒಂದೊಂದು ಸುಖವೂ ತನ್ನ ಶತ್ರುವಾದ ದುಃಖದಿಂದ ನಾಶವಾಗುತ್ತದೆ. ಪರಿಶೀಲಿಸಿ ನೋಡಿದರೆ ನಾವು ಯಾವುದನ್ನು ಸುಖವೆಂದು ಭಾವಿಸುತ್ತೇವೋ ಹಾಗೂ ಯಾವುದನ್ನು ದುಃಖವೆಂದು ಭಾವಿಸುತ್ತೇವೋ ಅವೆರಡೂ ದುಃಖವೇ ಆಗುತ್ತವೆಂದು ತಿಳಿಯುತ್ತೇವೆ. ದುಃಖಗಳನ್ನು ಯಾವಾಗಲೂ ಅನುಭವಿಸಿದರೆ ನಮಗೆ ಒಂದು 'ತಾಪ' ಅಥವಾ ಬಿಸಿ ಉಂಟಾಗುತ್ತದೆ. ಇದನ್ನು ದೂರಮಾಡುವುದಕ್ಕೆ ದಾರಿ ಇದೆಯೇ? ಹೌದು ಭವಾನಿಯೇ ಆ ದಾರಿ. ಬೇಸಿಗೆಯಲ್ಲಿ ಬೇಗೆಯಿಂದಾಗಿ ನಮಗೆ ಶರೀರದಲ್ಲಿ ತಾಪ ಉಂಟಾಗುತ್ತದೆ. ನಾವು ಹೊಳೆಯಲ್ಲಿ ಸ್ನಾನ ಮಾಡಿದರೆ ದುಃಖ

Sri Vidyabharathi Book Centre, Sringeri

CC-O. In Public Domain. Digitized by eGangotri

ದೂರವಾಗಿ ಆನಂದವಾಗುತ್ತದೆ. ಅದೇ ರೀತಿ ಭವಸಾಗರದಲ್ಲಿ ತಾಪವನ್ನು ಅನುಭವಿಸುತ್ತಿರುವ ನಮಗೆ ದೇವಿ ತಾಪವನ್ನು ದೂರಮಾಡುವ ಹೊಳೆಯಂತೆ ಇದ್ದಾಳೆ. ಯಾವ ವಿಧವಾದ ಹೊಳೆಯಂತೆ ಇದ್ದಾಳೆ? 'ಸುಧಾನದೀಮ್'-ಅಮೃತದ ಹೊಳೆಯಂತೆ ಇದ್ದಾಳೆ. ಸಾಮಾನ್ಯವಾದ ಹೊಳೆಯಲ್ಲಿ ಮುಳುಗಿದರೇನೆ ನಮಗೆ ಆನಂದವಾಗುತ್ತದೆ ಎಂದ ಮೇಲೆ ಅಮೃತದ ಹೊಳೆಯಲ್ಲಿ ಮುಳುಗಿದರೆ ಆನಂದವೂ, ಶಾಂತಿಯೂ, ತೃಪ್ತಿಯೂ ನಾವು ಪಡೆಯಬಹುದು ಎನ್ನುವುದರಲ್ಲಿ ಸಂದೇಹವಾದರೂ ಇದೆಯೇ?

ದುಃಖವನ್ನು ದೂರಮಾಡಲು ಪಡೆದ ಪರವಸ್ತುವಿನ ಆಕಾರದ ಹೆಸರೇನು ಎನ್ನುವ ಪ್ರಶ್ನೆಗೆ ಉತ್ತರವಾಗಿ ಶ್ಲೋಕದಲ್ಲಿ 'ಭವಾನೀಂ'ಎಂದು ತಿಳಿಸಲಾಗಿದೆ. ಅದೇನೆಂದರೆ ಸ್ತ್ರೀ ರೂಪದಲ್ಲಿ ದರ್ಶನವನ್ನು ಕೊಡುವ ಪರವಸ್ತು ಇಲ್ಲಿ 'ಭವಾನಿ' ಎಂದು ಕರೆಯಲ್ಪಟ್ಟಿದಾಳೆ. ಆಕೆಯನ್ನು ವಂದಿಸಿ ನಾವು ತಾಪದಿಂದ ಬಿಡುಗಡೆ ಪಡೆದು ಜ್ಞಾನವನ್ನೂ, ಶಾಂತಿಯನ್ನೂ ಸುಖವನ್ನೂ ಪಡೆಯುವುದು ಆವಶ್ಯಕವೆನ್ನುವುದು ಶ್ಲೋಕದ ಭಾವ.

ವಿದ್ಯೆಯನ್ನು ಏತಕ್ಕಾಗಿ ಕಲಿಯಬೇಕು ಎನ್ನುವ ಪ್ರಶ್ನೆ ಕೆಲವರಿಗೆ ಉಂಟಾಗಬಹುದು. ಹುಲಿ. ಆನೆಯಂತಹ ಬಲವುಳ್ಳ ಪ್ರಾಣಿಗಳು ಜೀವಿಸುತ್ತವೆ. ಅವುಗಳಂತೆಯೇ ಏಕೆ ಜೀವಿಸಬಾರದು ಎಂದು ಕೂಡ ಕೆಲವರಿಗೆ ತೋರಬಹುದು. ಭಗವಂತನು ಬಲವುಳ್ಳ ಪ್ರಾಣಿಗಳನ್ನು ಸೃಷ್ಟಿಸಿದರೂ ಅವುಗಳು ವಿವೇಕಹೀನತೆಯಿಂದಾಗಿ ಭಗವಂತನನ್ನು ಪಡೆದುಕೊಳ್ಳುವ ಯೋಗ್ಯತೆಯನ್ನು ಪಡೆದಿಲ್ಲ. ಮನುಷ್ಯನೂ ಪಾಮರರಂತೆ ಜೀವಿಸಿ ಬಾಳನ್ನು ವ್ಯರ್ಥಮಾಡಿಕೊಳ್ಳಬಹುದು. ಹಾಗಲ್ಲದೆ ವಿವೇಕದಿಂದ ಬಾಳಿ ಪರವಸ್ತುವಿನ ದರ್ಶನವನ್ನು ಪಡೆದು ಜನ್ಮ ಸಮುದ್ರದಿಂದ ಬಿಡುಗಡೆ ಪಡೆಯಬಹುದು. ಈ ಶಕ್ತಿಯನ್ನು ದೇವರು ಮನುಷ್ಯನಿಗೆ ಕೊಟ್ಟಿದ್ದಾನೆ. ಪ್ರಾಣಿಗಳಿಗೂ ಬುದ್ಧಿ ಇದೆ. ಆದರೆ ಅವುಗಳ ಬುದ್ಧಿಗೆ ನಿಶ್ಚಯವಾಗಿಯೂ ಒಂದು ಎಲ್ಲೆ ಇದೆ. ಇದಕ್ಕೆ ವಿರೋಧವಾತ ಮನುಷ್ಯನ ಬುದ್ಧಿಗೆ ಎಲ್ಲೆ ಇಲ್ಲ, ಅವನು 'ನಾನು ಯಾವ ವಿಧವಾಗಿ ಬಾಳಿದರೆ ಒಳ್ಳೆಯದನ್ನು ಪಡೆಯುವೆನು' ಎಂದು ಯೋಚಿಸಿ ಅದಕ್ಕೆ ಸರಿಯಾದ ರೀತಿಯಲ್ಲಿ ಬಾಳುವ

Sri Vidyabharathi Book Centre, Sringeri

 CC-O. In Public Domain. Digitized by eGangotri

ಶಕ್ತಿಯುಳ್ಳವನು. 'ನಾನು ನಿಜಕ್ಕೂ ಯಾರು ? ಎಲ್ಲಿಂದಬಂದೆ ? ಎಲ್ಲಿಗೆ ಹೋಗುವೆನು ?' ಎಂದು ಮನುಷ್ಯನು ಯೋಚಿಸಬಲ್ಲನು. ಹೀಗೆ ಚಿಂತಿಸುವಿಕೆಯು ಅವನನ್ನು ಇತರ ಪ್ರಾಣಿಗಳಿಂದ ಬೇರ್ಪಡಿಸುವುದು. ಚಿಂತಿಸುವುದನ್ನೇ ಅಲ್ಲದೆ ಜ್ಞಾನವಂತನಾಗಿಯೂ ಪರವಸ್ತುವನ್ನು ಪಡೆಯುವ ಯೋಗ್ಯತೆಯು ಅವನಿಗೆ ಇದೆ. ಆದ್ದರಿಂದ 'ಜಂತೂನಾಂ ನರಜನ್ಮ ದುರ್ಲಭಂ' ಎಂದು ಹೇಳಲಾಗಿದೆ, ಅಂದರೆ ಜಂತುಗಳಾಗಿ ಹುಟ್ಟುವುದಕ್ಕಿಂತ ಮನುಷ್ಯಜನ್ಮ ಹೆಚ್ಚುಎಂದು. ಭಾವ. ಪ್ರಾಣಿಗಳು ತಮ್ಮ ಬುದ್ಧಿಯಿಂದ ಯಾವುದನ್ನು ಹುಡುಕುತ್ತವೆ? ಈ ಪ್ರಶ್ನೆಗೆ ವಿಶ್ರಾಂತಿ, ಆಹಾರ, ತಿರುಗುವಿಕೆ ಎಂದೇ ಉತ್ತರವಾಗುತ್ತದೆ.

ಮನುಷ್ಯನೂ ಇವುಗಳಲ್ಲಿಯೇ ತೊಡಗಿರುವವನಾದರೆ ಅವನಿಗೂ ಪ್ರಾಣಿಗಳಿಗೂ ವ್ಯತ್ಯಾಸವೇ ಇರುವುದಿಲ್ಲ. ಹಾಗಿದ್ದರೆ ಮನುಷ್ಯ ಜನ್ಮ ವ್ಯರ್ಥ ಮಾಡಿಕೊಂಡಂತೇ ಸರಿ. ಆದ್ದರಿಂದ ನಾವು ಆ ರೀತಿ ಇರಬಾರದು. ನಾವು ಜ್ಞಾನ ಪಡೆಯಲು ಖಂಡಿತ ಪ್ರಯತ್ನಪಡಬೇಕು. ಜ್ಞಾನ ಪಡೆಯುವುದು ಹೇಗೆ? ಕೆಲವರು ತಾವಾಗಿಯೇ, ಗುರುವಿನ ಉಪದೇಶವಿಲ್ಲದೆ, ವಿದ್ಯೆ ಪಡೆದಿದ್ದೇವೆಂದು ಹೇಳುತ್ತಾರೆ. ಆದರೆ ಹಾಗೆ ಮಾಡುವುದು ಸರಿಯಲ್ಲ. ನಾವು ಈಗ ಮಾತನಾಡುತ್ತೇವೆ. ನಾವು ಚಿಕ್ಕವರಾಗಿದ್ದಾಗ ನಮ್ಮ ತಾಯಿಯೋ, ತಂದೆಯೋ, ಅಲ್ಲಿದ್ದವರೋ ಮಾತನಾಡದೆ ಇದ್ದ ನಮಗ ಮಾತನಾಡಲು ಬರುತ್ತಿರಲಿಲ್ಲ. ಆದ್ದರಿಂದ ಅವರ ಮಾತುಗಳನ್ನು ಕೇಳಿಯೇ ನಾವು ಮಾತನಾಡುವುದನ್ನು ಕಲಿತುಕೊಂಡಿದ್ದೇವೆ. 'ಯಾರ ಸಹಾಯವೂ ಇಲ್ಲದೆ ನಾನು ದೊಡ್ಡ ವಿದ್ವಾಂಸನಾಗಿ ಬಿಟ್ಟೆ' ಎಂದು ಹೇಳಿಕೊಂಡರೆ ಅದು ಸುಳ್ಳೇ ಆಗುತ್ತದೆ. ನಾವು ಕಲಿಯಬೇಕಾದುವು ಅನೇಕವಿವೆ. ಹೇಗೆ?

> ಜಾತ್ಯಂಧಾ ಜಾತಿಬಧಿರಾ ಜಾತಿಮೂಕಾಶ್ಚ ತೇ ಜನಾಃ ।
> ಸಮ್ಯಗಾರಾಧಿತಾ ಯೈರ್ನ ಸಂತೋ ವಿಜ್ಞಾನ ಚಿಂತವಃ ॥

ಎಂದು ಹೇಳಲ್ಪಟ್ಟಿದೆ. ಯಾರು ಜ್ಞಾನ ಸಮುದ್ರವಾಗಿ ಪ್ರಕಾಶಿಸುವ ಮಹಾತ್ಮರ ದರ್ಶನ ಪಡೆಯಲಿಲ್ಲವೋ ಅವರ ಉಪದೇಶವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೇಳಲಿಲ್ಲವೋ, ಅವರ ಮಾತಿನಂತೆ ಬಾಳನ್ನು ತಿದ್ದುಕೊಳ್ಳಲಿಲ್ಲವೋ, ಅಂಥ ಹವರು ಹುಟ್ಟಿನಿಂದಲೇ ಕುರುಡರು; ಹುಟ್ಟಿನಿಂದಲೇ ಕಿವುಡರು; ಹುಟ್ಟಿನಿಂದಲೇ ಮೂಕರು; ಎಂದು ಅರ್ಥ. ನಾವು ಈ ರೀತಿ ಕುರುಡರಾಗಿಯೋ, ಕಿವುಡರಾಗಿಯೋ, ಮೂಕರಾಗಿಯೋ, ಇರಬಾರದು. ನಾವು ಜ್ಞಾನ ಸಮುದ್ರರಾಗಿ ಪ್ರಕಾಶಿಸುವ ಮಹಾತ್ಮರನ್ನು ಪೂಜಿಸಿ ಜ್ಞಾನ ಪಡೆಯಬೇಕು.

ಸುರಂಗದಿಂದ ವಜ್ರವನ್ನು ತೆಗೆದರೆ ಅದು ವಜ್ರವಾದರೂ ಕೂಡ ಹೊಳೆಯುವುದಿಲ್ಲ. ಅದನ್ನು ಸಾಣೆ ಹಿಡಿದರೆ ಅದು ಬಹಳವಾಗಿ ಪ್ರಕಾಶಿಸುತ್ತದೆ. ಸಾಮಾನ್ಯವಾದ ಕಲ್ಲನ್ನು ಸಾಣೆ ಹಿಡಿದರೆ ಅದು ಸವೆದು ಹೋಗುತ್ತದೆ. ಅಲ್ಲದೆ, ವಜ್ರ ಸಹಜವಾಗಿ ಸಿಕ್ಕಿದರೂ ಆದನ್ನು ಹರಿತ ಮಾಡುವವರೆಗೆ ಗಾಜನ್ನು ಕಡಿಯಲು ಅದರಿಂದ ಸಾಧ್ಯವಾಗುವುದಿಲ್ಲ. ಅದೇ ರೀತಿ ಮನುಷ್ಯನೂ ಸಹಜವಾಗಿಯೇ ಸ್ವಲ್ಪ ಮಟ್ಟಿಗೆ ಜ್ಞಾನಿ. ಶಾಸ್ತ್ರಗಳು ಮತ್ತು ಗುರುವಿನ ಉಪದೇಶದಿಂದ ವಿಶೇಷವಾಗಿ ಜ್ಞಾನ ಉಂಟಾಗುತ್ತದೆ. ಇದು ಸಾಣೆ ಹಿಡಿದ ವಜ್ರದಂತೆ ಪ್ರಕಾಶಿಸುತ್ತದೆ.

ಏಕಂ ಹಿ ಚಕ್ಷುರಮಲಂ ಸಹಜಾವಬೋಧಃ,
ವಿದ್ವದ್ಭಿರೇವ ಸಹ ಸಂವಸತಿರ್ದ್ವಿತೀಯಮ್ ।
ಯಸ್ಯಾಸ್ತಿ ನ ದ್ವಯಮಿದಂ ಸ್ಫುಟಮೇವ ಸೋಽನ್ಧಃ
ತಸ್ಯಾಪ್ಯಮಾರ್ಗಚಲನೇ ವದ ಕೋಽಪರಾಧಃ ॥

ಎಂದು ಒಬ್ಬರು ಹೇಳಿದರು. ಮನುಷ್ಯನಿಗೆ ಎರಡು ಕಣ್ಣುಗಳಿವೆ. ಅವುಗಳಲ್ಲಿ ಒಂದು ಸಾಮಾನ್ಯ ಬುದ್ಧಿಯುಳ್ಳದ್ದು. ಕೆಲವರಿಗೆ ಸಾಮಾನ್ಯ ಬುದ್ಧಿಯೇ ಇರುವುದಿಲ್ಲ. ಅವರಿಗೆ ಹೇಳಿಕೊಟ್ಟರೂ ತಿಳಿಯುವುದಿಲ್ಲ. ಹಾಗಿದ್ದರೆ ಕಷ್ಟ. 'ವಿದ್ವದ್ಭಿರೇವ ಸಹ ಸಂವಸತಿಃ ದ್ವಿತೀಯಮ್'–'ವಿದ್ವದ್ಭಿಃ' ವಿದ್ವಾಂಸರು ಅಂದರೆ ಜ್ಞಾನ ಸಮುದ್ರರಾಗಿ ಪ್ರಕಾಶಿಸುವ ಮಹಾತ್ಮರ ಸಹವಾಸವೇ ಆವಶ್ಯಕ. ಅವರನ್ನು ಸೇವಿಸಿ ಅವರು ಮಾಡುವ ಉಪದೇಶವನ್ನು ಕೇಳಿ, ಮನಸಿನಲ್ಲಿಟ್ಟುಕೊಂಡು, ಆ ರೀತಿ ನಡೆಯುತ್ತಾ ಜ್ಞಾನ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಡೆಯುವುದು ಎರಡನೆಯ ಕಣ್ಣಾಗುತ್ತದೆ. ಎರಡು ಕಣ್ಣುಗಳೂ ಮನುಷ್ಯನಿಗೆ ಬೇಕು. ಸಾಮಾನ್ಯ ಬುದ್ಧಿ ಇಲ್ಲದೆ ಇದ್ದು ಕೇವಲ ಗುರು ಹೇಳಿದ್ದನ್ನು ಕೇಳಿಕೊಂಡು ಇರಬಾರದೆ. ಎಂದರೆ ಅದಕ್ಕೆ ಒಂದು ಕಥೆ ನೆನಪಿಗೆ ಬರುತ್ತದೆ. ನಾಲ್ಕು ಮಂದಿ ಒಬ್ಬ ಗುರುವಿನ ಹತ್ತಿರ ಮಂತ್ರಶಾಸ್ತ್ರವನ್ನು ಕಲಿತುಕೊಂಡರು. ಪಾಠ ಮುಗಿದ ಮೇಲೆ, ತಮ್ಮ ತಮ್ಮ ಮನೆಗಳಿಗೆ ಹೋಗುವದಾರಿಯಲ್ಲಿ ಒಂದು ಕಾಡು ಇದ್ದಿತು. ದಾರಿಯಲ್ಲಿ ಸತ್ತು ಹೋದ ಒಂದು ಹುಲಿಯ ಶವವನ್ನು ನೋಡಿದರು. ಕೆಲವರ ಮನಸ್ಸಿನಲ್ಲಿ 'ನಾವು ಶವಕ್ಕೆ ಜೀವ ಕೊಡುವ ಸಂಜೀವಿನಿ ಮಂತ್ರವನ್ನು ಕಲಿತಿದ್ದೇವಲ್ಲಾ, ಅದನು ಪರೀಕ್ಷಿಸಬೇಕು' ಎನ್ನುವ ವಿಚಾರ ಬಂದಿತ್ತು. ಆದರೆ ನಾಲ್ಕನೆಯ ವಿದ್ಯಾರ್ಥಿಗೆ ಅದು ಅಪಾಯವನ್ನುಂಟುಮಾಡುತ್ತದೆಂದು ತೋರಿತು. ಅವನು ಪ್ರಯತ್ನ ಪಡದೆ ಇದ್ದರೂ, ಇತರರು ಅವನು ಕೊಟ್ಟ ಎಚ್ಚರಿಕೆಯನ್ನು ಗಮನಿಸಲಿಲ್ಲ. ಆದ್ದರಿಂದ ಅವನು ಸ್ವಲ್ಪ ದೂರ ಸರಿದು ಒಂದು ಮರವನ್ನು ಹತ್ತಿ ಕುಳಿತುಕೊಂಡನು. ಇತರ ಮೂರು ಮಂದಿ ತಾವು ಕಲಿತು ಕೊಂಡಿದ್ದ ಮಂತ್ರದ ಶಕ್ತಿಯನ್ನು ತಿಳಿಯುವುದಕ್ಕಾಗಿ ಹುಲಿಗೆ ಜೀವಕೊಟ್ಟರು. ಉತ್ತಮವಾದ ಕೆಲಸವನ್ನು ಮಾಡಿದರು! ಏಕೆಂದರೆ ಬದುಕಿದ ಹುಲಿ ಅವರನ್ನು ತನ್ನ ಹಸಿವು ತೀರಿಸಿ ಕೊಳ್ಳುವುದಕ್ಕಾಗಿ ಕೊಂದು ಬಿಟ್ಟಿತು. ಈ ಮೂರು ಮಂದಿ ವಿದ್ಯಾರ್ಥಿಗಳು ಗುರುವಿನ ಬಳಿ ಚೆನ್ನಾಗಿ ಮಂತ್ರಶಾಸ್ತ್ರವನ್ನು ಕಲಿತಿದ್ದರೂ ಸಾಮಾನ್ಯ ಬುದ್ಧಿ ಇಲ್ಲದ್ದರಿಂದ ಆಪತ್ತಿಗೆ ಒಳಗಾದರು.

ಇದರಿಂದ ಎರಡು ವಿಧವಾದ ಜ್ಞಾನ ಪ್ರತಿಯೊಬ್ಬನಿಗೂ ಅವಶ್ಯಕವೆಂದು ತಿಳಿಯುತ್ತದೆ. ಒಂದು ಕತ್ತಿ ಇದೆ. ಅದನ್ನು ಹರಿತ ಮಾಡದೆ ಇದ್ದರೆ ಕಡಿಯಲಾಗುವುದಿಲ್ಲ. ಅದೇ ರೀತಿ ಗುರುವಿನ ಬಳಿ ಕಲಿಯದಿದ್ದರೆ ನಮ್ಮ ವಿದ್ಯೆ ಪ್ರಕಾಶಿಸುವುದಿಲ್ಲ. ಯಾರಿಗೆ ಈ ವಿಧವಾದ ಎರಡು ಜ್ಞಾನಗಳು ಇಲ್ಲವೋ ಅವನು ಕುರುಡನಂತೆ. ಅವನು ತಪ್ಪುಮಾಡಿದರೆ ಆಶ್ಚರ್ಯ ಪಡಬೇಕಾಗಿಲ್ಲ. ನಾವು ತಪ್ಪು ಮಾಡದೆ ಬಾಳಬೇಕಾದರೆ ಎರಡು ವಿಧ ಜ್ಞಾನವನ್ನು ಪಡೆಯಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯೆಯನ್ನು ಯಾವ ವಯಸ್ಸಿನಲ್ಲಿ ಕಲಿಯಬೇಕು? ಕೆಲವರು ನಾಳೆ ಕಲಿಯೋಣ, ವಯಸ್ಸಾದ ಮೇಲೆ ವಿದ್ಯೆ ಕಲಿಯೋಣ' ಎಂದು ಮುಂದಕ್ಕೆ ಹಾಕಿಕೊಂಡೇ ಹೋದರೆ ಪ್ರಯತ್ನಗಳು ಫಲಿಸುವುದಿಲ್ಲ. ಸಂಸ್ಕೃತದಲ್ಲಿ ವಿದ್ಯೆಕಲಿಯಬೇಕಾದ ವಯಸ್ಸನ್ನು ಕುರಿತು 'ಲಾಲಯೇತ್ ಪಂಚ ವರ್ಷಾಣಿ ದಶ ವರ್ಷಾಣಿ ದಂಡಯೇತ್' ಎಂದು ಹೇಳಲಾಗಿದೆ. ಮೊದಲು ಐದು ವರ್ಷಗಳು ಮಕ್ಕಳನ್ನು ಬಹಳ ಪ್ರೀತಿಯಿಂದ ಸಾಕಬೇಕು. ಏಕೆ? ಏಕೆಂದರೆ, ಮಕ್ಕಳಿಗೆ ಶರೀರದಲ್ಲಿ ಹೆಚ್ಚಾಗಿ ಬಲವಿರುವುದಿಲ್ಲ. ಐದುವರ್ಷಗಳಾದ ಮೇಲೆ ಅವರಿಗೆ ಮಾತನಾಡುವುದಕ್ಕೂ, ಕೆಲಸಗಳನ್ನು ಮಾಡುವುದಕ್ಕೂ ಶಕ್ತಿಇರುತ್ತದೆ. ಆದಾದಮೇಲೆ ಹತ್ತುವರ್ಷಗಳು ದಶ ವರ್ಷಾಣಿ ದಂಡಯೇತ್' ಎಂದರೆ ದೊಣ್ಣೆಯಿಂದ ಹೊಡೆಯಬೇಕೆಂದಲ್ಲ. ಆದರೆ ಚೆನ್ನಾಗಿ ಉಪದೇಶಿಸಬೇಕೆಂದು ಭಾವ. ಒಬ್ಬ ಶಾಲೆಗೆ ಹೋಗುವ ವಿದ್ಯಾರ್ಥಿ ಬೆಳಗ್ಗೆ ಐದು ಘಂಟೆಯಾದ ಮೇಲೆ ಮಲಗಿರಲು ಇಷ್ಟ ಪಟ್ಟರೆ ತಂದೆ ಅವನನ್ನು 'ನೀನು ಚೆನ್ನಾಗಿ ಓದಿಕೊಳ್ಳಬೇಕು ಈ ವಿಧವಾಗಿ ಕಾಲಹರಣ ಮಾಡಬಾರದೆಂದು ತಿಳಿಯ ಹೇಳಿ ಎಬ್ಬಿಸಬೇಕು ಅದೇ ರೀತಿ ವಿದ್ಯಾಭ್ಯಾಸ ಮಾಡುವ ಜಾಗದಲ್ಲೂ ಗುರು ವಿದ್ಯಾರ್ಥಿಯನ್ನು ಚೆನ್ನಾಗಿ ಗಮನವಿಟ್ಟು ಕಲಿಯುವಂತೆ ಮಾಡಬೇಕು, ಹೀಗೆ ಮಾಡುವುದೇ ಶಿಕ್ಷೆಯಾಗುತ್ತದೆ.

ಮೇಲೆ ಹೇಳಿದಂತೆ ನಾವು ಓದಿದರೆ ವಿದ್ಯೆಯನ್ನು ಚೆನ್ನಾಗಿ ಪಡೆಯ ಬಹುದು. ವಿದ್ಯೆಯಲ್ಲೂ ಅನೇಕ ವಿಧವಿದೆ. ಲೌಕಿಕ ವಿದ್ಯೆ, ವೈದಿಕ್ಕ ವಿದ್ಯೆ ಮತ್ತು ಆಧ್ಯಾತ್ಮಿಕ ವಿದ್ಯಾ ಎಂದು ವಿಭಾಗ ಮಾಡುತ್ತಾರೆ. ಭಗ ವಂತನು ಗೀತೆಯಲ್ಲಿ 'ಅಧ್ಯಾತ್ಮವಿದ್ಯಾ ವಿದ್ಯಾನಾಂ' ಎಂದು ಹೇಳಿದ್ದಾರೆ. ಅಂದರೆ ಅನೇಕ ವಿದ್ಯೆಗಳಲ್ಲಿ ಶ್ರೇಷ್ಠವಾದುದು ಅಧ್ಯಾತ್ಮ ವಿದ್ಯೆ. 'ನಾವು ಶ್ರೇಷ್ಠವಾದ ವಿದ್ಯೆಯನ್ನಲ್ಲವೇ ಕಲಿತುಕೊಳ್ಳಬೇಕು. ಆದ್ದರಿಂದ ಆಧ್ಯಾತ್ಮ ವಿದ್ಯೆ ಕಲಿಯೋಣ' ಎಂದರೆ ಅದಕ್ಕೆ ಬೇಕಾದ ಯೋಗ್ಯತೆಗಳೆಲ್ಲವನೂ ಪಡೆದ ನಾವು ಹಾಗೆ ಕಲಿಯಬಹುದು. ಆದರೆ ಅದು ಕಷ್ಟ.

'ಪರೀಕ್ಷ್ಯ ಲೋಕಾನ್ ಕರ್ಮಚಿತಾನ್', ಎಂದು ಉಪದೇಶದಲ್ಲಿ ಹೇಳಲಾಗಿದೆ. ಅಂದರೆ ಲೋಕವನ್ನು ಮನಸ್ಸಿನಲ್ಲಿ ಪರೀಕ್ಷಿಸಿ ನಂತರ ಎಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನೂ ಬಿಟ್ಟು ಬಿಡಬೇಕೆಂದು ಅರ್ಥ. ನಾವು ಈ ರೀತಿ ಪರೀಕ್ಷೆ ಮಾಡದೆ ಬಿಟ್ಟು ಬಿಟ್ಟೆವೆಂದರೆ, ಬಿಟ್ಟಿದ್ದು ಫಲವನ್ನು ಕೊಡುವುದಿಲ್ಲ. ಏಕೆಂದರೆ ಮನಸ್ಸು ಪಕ್ವವಾಗಿರುವುದಿಲ್ಲ. ಉದಾಹರಣೆಗೆ ಆಸೆಯುಳ್ಳವನು ಸಂನ್ಯಾಸವನ್ನು ತೆಗೆದುಕೊಳ್ಳಬಹುದು. ಆದರೂ ಅವನು ಸಂಸ್ಕಾರಗಳ ಬಲದಿಂದಾಗಿ ಸಂನ್ಯಾಸವನ್ನು ತೆಗೆದುಕೊಂಡ ಮೇಲೂ ಹೋಟಲಿಗೆ ಹೋಗಿ ಊಟ ಮಾಡಬಹುದೆ? ಹಾಗೆ ಸಂನ್ಯಾಸ ತೆಗೆದು ಕೊಂಡರೆ ಏನು ಪ್ರಯೋಜನ ?

ಆದ್ದರಿಂದ ಮೊದಲು ಲೌಕಿಕ ವಿದ್ಯೆ ಕಲಿಯಬೇಕು. ಲೌಕಿಕವಾದ ವಿದ್ಯೆ ಎಂದರೇನು ? ನಾವು ಹೇಗೆ ನಡೆದುಕೊಂಡರೆ ಪ್ರಪಂಚಕ್ಕೆ ಒಪ್ಪಿಗೆಯಾಗುತ್ತದೋ, ನಾವು ಹೇಗೆ ನಡೆದು ಕೊಂಡರೆ ಪ್ರಪಂಚಕ್ಕೆ ಕಷ್ಟ ಕೊಟ್ಟಂತೆ ಆಗುವುದಿಲ್ಲವೋ, ಅದೇ ಲೌಕಿಕವಾದ ವಿದ್ಯೆ. ಉದಾಹರಣೆಗೆ ನಾವು ಒಂದು ಮನೆಯನ್ನೇ ಕಟ್ಟಿಸಬಹುದು, ಹಣವನ್ನೇ ಸಂಪಾದಿಸಬಹುದು ರಾಜ್ಯವನ್ನಾಳಬಹುದು, ತಪ್ಪು ಮಾಡಿದವರನ್ನು ಶಿಕ್ಷಿಸುವ ಸಂದರ್ಭ ಬರಬಹುದು. ಹೀಗಿರತಕ್ಕಂತಹ ವಿಷಯಗಳಲ್ಲಿ ಅವುಗಳಿಗೆ ತಕ್ಕಂತೆ ನಡೆದುಕೊಳ್ಳುವ ಬುದ್ಧಿ ಇಲ್ಲದಿದ್ದರೆ ಹೇಗೆ ಕೆಲಸಗಳನ್ನು ಮಾಡುವುದು ? ಆದ್ದರಿಂದಲೇ ನಮ್ಮ ಪೂರ್ವಿಕರು ಅರ್ಥಶಾಸ್ತ್ರ, ದಂಡನೀತಿಯಂಥವುಗಳನ್ನು ಹೇಳಿಕೊಟ್ಟಿದ್ದಾರೆ, ಇಲ್ಲಿ ಮೇಲೆ ಹೇಳಿದ ಲೌಕಿಕ ವಿದ್ಯೆ ಮಾತ್ರ ನಮಗೆ ಸಾಕಾಗುವುದಿಲ್ಲ. ನಾವು ಕೆಲವೊಮ್ಮೆ ನೋಡುತ್ತೇವೆ, ನಾವು ಮಾಡುವುದು ಒಂದೂ ನಡೆಯುವುದಿಲ್ಲ. ನಾವು ಮಾಡುವ ಪ್ರಯತ್ನಗಳು ಉತ್ತಮವಾದರೂ ಅವುಗಳು ಫಲಿಸುವುದಿಲ್ಲ. ಇದಕ್ಕೆ ಕಾರಣವೇನೆಂದರೆ 'ದೈವಕೃಪೆ' ಇಲ್ಲ ಎನ್ನುವುದು. ಆ ಭಗವಂತನ ದಯೆ ಪಡೆಯಲು ನಾವು ಕೆಲವು ಅರ್ಚನೆ ಕೆಲಸಗಳನ್ನು ಮಾಡಬೇಕು. ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡುವುದು, ಮನೆಯಲ್ಲಿಯೇ ವಿಷ್ಣುಸಹಸ್ರನಾಮವನ್ನೋ ಶಿವಸಹಸ್ರನಾಮವನ್ನೋ ಪಾರಾಯಣ ಮಾಡುವುದು ಇಂಥವುಗಳನ್ನೂ ಮಾಡಬಹುದು. ಹೆಚ್ಚು ಬುದ್ಧಿಯುಳ್ಳವರು ಕೆಲವರು ಸಂಧ್ಯಾವಂದನೆಯನ್ನೂ, ವಿಶೇಷವಾಗಿ ಹೋಮ ಮೊದಲಾದವುಗಳನ್ನೂ ಮಾಡುವರು. ಇವುಗಳೆಲ್ಲ ವೈದಿಕವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯೆ. ಇದು 'ಇಹ ಪರ' ವಾದ ಸುಖ-ಶಾಂತಿಗಳನ್ನು ಕೊಡುವುದಾಗಿ ಇರುವುದು. ಲೌಕಿಕವಿದ್ಯೆ ಕೇವಲ ಇಹ ಫಲ ನೀಡತಕ್ಕದ್ದು.

ಆಧ್ಯಾತ್ಮಿಕ ವಿದ್ಯೆಯೆನ್ನುವುದು 'ನಾವು ಇಷ್ಟೆಲ್ಲಾ ಮಾಡುತ್ತಿದ್ದೇವಲ್ಲಾ, ನಾವು ಎಷ್ಟು ದಿನಗಳು ಇರುವೆವು ? ನಾವು ಶಾಶ್ವತವೇ ? ಅಥವಾ ಶಾಶ್ವತವಲ್ಲವೇ ? ಶಾಶ್ವತವಾದರೆ ನಾವು ಸಾಯುವುದಾದರೂ ಏಕೆ ? ಸತ್ತ ಮೇಲೆ ನಮ್ಮ ರೂಪ ಹೇಗಿರುತ್ತದೆ ? ಹುಟ್ಟು ಸಾವು ಇಲ್ಲದೆ ನಾವು ಶಾಶ್ವತವಾಗಿರುವುದಕ್ಕೆ ಯಾವ ತತ್ವವನ್ನು ತಿಳಿಯಬೇಕು ? ಇವೆಲ್ಲ ಸೇರುವಂತಹುದು. ಇವುಗಳೆಲ್ಲವನ್ನೂ ಪಡೆಯುವುದಕ್ಕೆ ಮನುಷ್ಯನ ಜನ್ಮ ಉಪಯೋಗವಾದುದರಿಂದ ಮನುಷ್ಯ ಜನ್ಮ ಶ್ರೇಷ್ಠವಾದುದು. ಆದರೆ ನಾವು ವಿದ್ಯೆ ಕಲಿಯಬೇಕು ಎನ್ನುವುದು ಬಹಳ ಮುಖ್ಯವಾದುದು. ನಮ್ಮ ಹತ್ತಿರ ಬಹಳವಾಗಿ ಔಷಧಗಳು ಇರಬಹುದು. ಇವುಗಳಲ್ಲಿ ಯಾವುದಕ್ಕೆ ಯಾವುದನ್ನು ಉಪಯೋಗಿಸಿದರೆ ಫಲ ಶ್ರೇಷ್ಠವಾಗಿರುತ್ತದೆ ಎನ್ನುವ ಯೋಚನೆಬೇಕು. ಅದನ್ನು ಬೇರೆ ಕೆಲಸಕ್ಕೆ ಉಪಯೋಗಿಸಿದರೆ ಅಸಹಾಯವಾಗಬಹುದು. ಅದೇ ರೀತಿ ವಿದ್ಯೆಯ ವಿಷಯವೂಕೂಡ. ಅಲ್ಲದೆ, ವಿದ್ಯೆ ಕಲಿತವನಿಗೆ ' ವಿನಯ ' ಎಂದು ಹೇಳಲಾಗುವ ಸಂಯಮ ಅಥವಾ ಗುಣ ಇರಬೇಕು. ' ಶೀಲ ' ಎನ್ನುವುದು ಬೇಕು, ಇವೆರಡೂ ಇಲ್ಲದ ವಿದ್ಯೆ ವಿದ್ಯೆಯಲ್ಲ ಎಂದು ಒಬ್ಬರು ಹೇಳುತ್ತಾರೆ.

ವಿದ್ಯೆಯಿಂದ ನಾವು ಪಡೆದಿರಬೇಕಾದುವು ಯಾವುವು ಎನ್ನುವುದಕ್ಕೆ ಗೌತಮ ಮಹರ್ಷಿಗಳು ' ದಯಾ ಸರ್ವಭೂತೇಷು, ಕ್ಷಾಂತಿಃ' ಅನಸೂಯಾ, ಶೌಚಂ, ಅನಾಯಸಃ, ಮಂಗಲಂ, ಅಕಾರ್ಪಣ್ಯಂ, ಅಸ್ಪೃಹಾ, ಎಂದು ಹೇಳುತ್ತಾರೆ.

ಭಗವಂತನು ವೈಕುಂಠದಿಂದ ಕೆಳಗಿಳಿದು ಹಲವು ವಿಧವಾದ ಅವತಾರಗಳನ್ನು ಮಾಡಿದುದು ಅವನಿಗೆ ಸಂಬಂಧಿಸಿದಂತೆ ಅವಶ್ಯಕವಿಲ್ಲದಿದ್ದರೂ, ಶ್ರಮಪಟ್ಟು ಜನರಿಗೆ ಒಳ್ಳೆಯದನ್ನು ಮಾಡಬೇಕೆಂಬ ಒಂದೇ ವಿಚಾರದಿಂದ

Sri Vidyabharathi Book Centre, Sringeri

 CC-O. In Public Domain. Digitized by eGangotri

ಕೂಡಿದವನಾಗಿ ಕರುಣೆಯಿಂದ ಅವತಾರ ಮಾಡಿದನು. ಭಗವಂತನು ನಮಗೆ ಇತರರು ಕಷ್ಟ ಕೊಡುವಾಗ ಅದನ್ನು ದೂರಮಾಡುವ ಶಕ್ತಿಯನ್ನು ಕೊಟ್ಟಿದ್ದಾನೆ. ನಾವು ಆ ಶಕ್ತಿಯನ್ನು ನಮಗೆ 'ದಯೆ' 'ಅಥವಾ' ಕರುಣೆ ಇದ್ದರೆ ಮಾತ್ರ ಉಪಯೋಗಿಸುತ್ತೇವೆ. ದಯೆ ಎಂದರೇನು ? ಇತರರು ಕಷ್ಟ ಕೊಡುವಾಗ ಅದನ್ನು ದೂರ ಮಾಡಬೇಕೆಂಬ ವಿಚಾರ ಉಂಟಾದರೆ ಅದೇ ದಯೆ. ಬೇರೆ ರೀತಿಯಲ್ಲಿದ್ದರೆ ಅವನನ್ನು 'ದಯೆ ಇಲ್ಲದವನು' ಎಂದು ಹೇಳುತ್ತಾರೆ. ಮನುಷ್ಯನ ಶ್ರೇಷ್ಠವಾದ ಗುಣ ದಯೆ, ಹಾಗಿರುವ ದಯೆ ಎನ್ನುವ ಕರುಣೆಯನ್ನು ನಮ್ಮಲ್ಲಿ ವೃದ್ಧಿಪಡಿಸಿಕೊಳ್ಳಬೇಕು. ಕೆಲವರಿಗೆ ಸಹಜವಾಗಿಯೇ ವಿಶೇಷವಾಗಿ ಕರುಣೆ ಇರುತ್ತದೆ. ಕೆಲವರಿಗೆ ಒಳ್ಳೆಯವರ ಸಹವಾಸದಿಂದ ಅವರಂತೆ ತಾವು ಇರಬೇಕೆನ್ನುವ ಭಾವನೆ ಉಂಟಾಗಿರುವುದರಿಂದ ದಯೆ ಉಂಟಾಗುತ್ತದೆ. ಆದ್ದರಿಂದ ನಾವು ದಯೆಯನ್ನು ಹೆಚ್ಚಿಸಿಕೊಳ್ಳಬೇಕು. ಶಾಲೆಯಲ್ಲಿ ಓದಿನಲ್ಲಿ ಹಿಂದಿರುವ ಹುಡುಗರ ಮೇಲೆ ದಯೆತೋರಿ. ತನಗೆ ತಿಳಿದಷ್ಟು ಅವರಿಗೆ ಹೇಳಿಕೊಟ್ಟು ಅವರನ್ನು ಮುಂದಕ್ಕೆ ತರಬೇಕಾದುದು ಒಂದು ಶ್ರೇಷ್ಠವಾದ ಗುಣವಾಗುತ್ತದೆ. ಅದು ಕರುಣೆಯಾಗುತ್ತದೆ. ಅದನ್ನು ನೀವು ಕಲಿತು ಬಾಳಿನಲ್ಲಿ ಆಚರಣೆಗೆ ತರಬೇಕು. ಶಾಲೆಯ ವಿದ್ಯಾರ್ಥಿಗಳ ವಿಷಯವಾಗಿಯೇ ಅಲ್ಲದೆ 'ಸರ್ವಭೂತೇಷು' ಎಂದು ಹೇಳಿರುವುದರಿಂದ ಇತರರ ವಿಷಯವಾಗಿಯೂ ಅದೇ ರೀತಿ ಕರುಣೆಯುಳ್ಳವರಾಗಿ ಇರಬೇಕು.

ಅನಂತರ 'ಕ್ಷಾಂತಿಃ' ಎನ್ನುವ ಗುಣ. ತನಗೆ ಹಿಡಿಸದ ಮಾತುಗಳನ್ನು ಯಾರಾದರೂ ಆಡಿದರೆ, ತನಗೆ ಹಿಡಿಸದ ಕೆಲಸವನ್ನು ಯಾರಾದರೂ ಮಾಡಿದರೆ, ಮನುಷ್ಯನು ಅಂಥಹವರನ್ನು ಹೊಡೆಯಲು ಹೋಗುತ್ತಾನೆ. ಇದಕ್ಕೆ ಶಕ್ತಿ ಇಲ್ಲದೆಹೋದರೆ ಬೇರೆ ಕೆಲಸಗಳನ್ನು ಮಾಡುತ್ತಾನೆ. ತಾನು ಎದುರಿಗೆ ನಿಲ್ಲದೆ ಮರೆಯಲ್ಲಿದ್ದು ಮಾಡುತ್ತಾನೆ. 'ಅವನು ಮಾಡಿದ, ಆದ್ದರಿಂದ ನಾನೂ ಮಾಡುತ್ತೇನೆ' ಎಂದು ಜವಾಬು ಹೇಳುತ್ತಾನೆ. ಇದು ಒಳ್ಳೆಯ ಮನುಷ್ಯನ ಲಕ್ಷಣವಲ್ಲ. ತನ್ನ ಬಗ್ಗೆ ಯಾರಾದರೂ ಕ್ಷುದ್ರವಾಗಿ ಮಾತನಾಡಿದರೆ ಕ್ಷುದ್ರವಾಗಿ ಏನಾದರೂ ಮಾಡಿದರೆ, ಒಳ್ಳೆಯ ಮನುಷನಾದವನು ಇದರಿಂದ ಏನಾಗುತ್ತದೆ ? ಅವನಿಗೆ ನಾಳೆ ಬುದ್ಧಿಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದುಕೊಂಡು ಕ್ಷಮಿಸಿಬಿಡುತ್ತಾನೆ. ಕ್ಷುದ್ರವಾಗಿ ನಡೆದುಕೊಂಡವನು ಇವನ ಒಳ್ಳೆಯತನವನ್ನು ನೋಡಿ ಕ್ಷಮೆ ಕೇಳಿಕೊಳ್ಳುವ ಸ್ಥಿತಿಯೂ ಬಂದುಬಿಡುತ್ತದೆ. ಆದ್ದರಿಂದ ನಾವು ಕ್ಷಾಂತಿಃ ಎಂದು ಹೇಳಲ್ಪಟ್ಟ ಈ ಗುಣವನ್ನು ಬೆಳಸಿಕೊಳ್ಳಬೇಕು,

ಅನಂತರದ ಗುಣ 'ಅನಸೂಯ' ಎನ್ನುವುದು ಮನುಷ್ಯನು ತಾನು ಗುಣವಂತನಾಗಿ ಇಲ್ಲದಿದ್ದರೂ ಇನ್ನೊಬ್ಬ ಗಣವಂತನನ್ನು ಕಂಡು ಅವನ ಗುಣಗಳ ಬಗ್ಗೆ ಸರಿಯಾಗಿ ಯೋಚಿಸದೆ ಅದರಲ್ಲಿ ಕೊರತೆಯನ್ನು ನೋಡಿ ಅದನ್ನು ಬಹಿರಂಗಪಡಿಸುವುದು ಸಹಜ. ಒಬ್ಬನು ಚೆನ್ನಾಗಿ ಓದುತ್ತಾನೆ ಎಂದರೆ ಇನ್ನೊಬ್ಬ ಓದದೆ ಇರುವ ಹುಡುಗ, ಇವನಿಗೆ ಅನೇಕ ಸಲ ಓದಿದರೇನೆ ಬರುತ್ತೆ. ಆದ್ದರಿಂದಲೇ ಓದುತ್ತಾನೆ, ಇಲ್ಲದೆ ಇದ್ದರೆ ನಾನೂ ಓದುತ್ತೇನೆ. ಇನ್ನುಮೇಲೆ ಓದುತ್ತೇನೆ ಎನ್ನುತ್ತಾನೆ. ಆದರೆ ಅವನು ಹೇಳುವಂತೆ ಮಾಡುವುದಿಲ್ಲ. ಓದಿನಲ್ಲಿ ತನ್ನ ಸೋಮಾರಿತನವನ್ನು ಮರೆಸುವುದಕ್ಕಾಗಿ ಇನ್ನೊಬ್ಬ ಚೆನ್ನಾಗಿ ಓದುವುದನ್ನೇ ಕೊರತೆಯಾಗಿ ಎಣಿಸಿ 'ಅವನು ರಾತ್ರಿ ಹಗಲು ಓದಿದರೂ ಪ್ರಯೋಜನವಿಲ್ಲ' ಎನ್ನುತ್ತಾನೆ. ಯಾವ ಗುಣವಿದೆಯೋ ಅದನ್ನೇ ನಾವು ಹೇಳಬೇಕೇ ವಿನಹ ಸುಮ್ಮನೆ 'ದೋಷಾರೋಪಣೆ, (ವ್ಯರ್ಥವಾಗಿ ತಪ್ಪು ಪ್ರಕಟಿಸುವುದು) ಮಾಡಬಾರದು.

ಅನಂತರದ ಗುಣ 'ಶೌಚಮ್' ಎನ್ನಲಾಗುವ ಶುದ್ಧತೆ. ಮನುಷ್ಯನಿಗೆ ಮುಖ್ಯವಾದುದು ಶೌಚವೆನ್ನುವ ದೊಡ್ಡಗುಣ. ಶೌಚವೆಂದರೇನು ? ನಮ್ಮ ಎದುರಿಗೆ ಒಬ್ಬನು ಬಾಯಲ್ಲಿ ಬೆಟ್ಟು ಇಟ್ಟುಕೊಂಡು ಅನಂತರ ನಮ್ಮನ್ನು ಮುಟ್ಟಿದರೆ ನಮಗೆ ಬೇಸರವಾಗುತ್ತದೆ, 'ಅವನು ನಮ್ಮನ್ನು ಮುಟ್ಟಿದನಲ್ಲಾ ಎಂದು ನಮಗೆ ತೋರಿದರೂ ಅದು ಅವನಿಗೆ ಸಹಜವಾಗಿರುತ್ತದೆ. ಇದೇ ರೀತಿ ತಿಂಗಳುಗಟ್ಟಲೆ ಸ್ನಾನಮಾಡದೆ ಇರುವವನು ಹತ್ತಿರಕ್ಕೆ ಬಂದರೆ ನಾವು ಮೂಗು ಮುಚ್ಚಿಕೊಳ್ಳಬೇಕಾಗಬಹುದು, ಅದರೆ ಅಭ್ಯಾಸವಾಗಿರುವ ಅವನಿಗೆ ಏನೂ ತಿಳಿಯುವುದಿಲ್ಲ. ಕೆಲವರು ಬಟ್ಟೆಗಳನ್ನು ಒಗೆದು ಉಟ್ಟುಕೊಳ್ಳುವುದು ಪಾಪವಾಗುವುದೆ (!!) ಎಂದು ಹೇಳಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ತಿಂಗಳಿಗೋ ವರ್ಷಕ್ಕೋ ಒಮ್ಮೆ ಬಟ್ಟೆಗಳನ್ನು ಒಗೆದರೆ, ಆ ಬಟ್ಟೆಗಳನ್ನು ನೋಡಿದರೇನೆ ಸಂಕಟವಾಗುತ್ತದೆ. ನಾವು ಎಂಜಲು ಮಾಡಬಾರದು, ಎಂಜಲು ಮೂಲಕ ಒಬ್ಬರಿಂದ ಇನ್ನೊಬ್ಬರಿಗೆ ವ್ಯಾಧಿಗಳು ಉಂಟಾಗುತ್ತವೆ. ಪ್ರತಿದಿನವೂ ಸ್ನಾನಮಾಡಿ ಒಗೆದ ಬಟ್ಟೆಗಳನ್ನು ಉಟ್ಟುಕೊಳ್ಳ ಬೇಕು. ಇದೇ ಶೌಚ.

'ಅನಾಯಾಸಃ' ಅಥವಾ ಸೋಮಾರಿತನವಿಲ್ಲದಿರುವಿಕೆ ಎನ್ನುವುದು ಇದಾದಮೇಲೆ ಕೆಲವರು ' ಬೆಳಗ್ಗೆ ' ಓದುವುದಕ್ಕೆ ಹೇಳಿದರೆ ' ಬಹಳಕಷ್ಟ ಎನ್ನುತ್ತಾರೆ. ' ಮಧ್ಯಾಹ್ನ ' ಎಂದರೆ ' ನನಗೇನೂ ಆಗಲೇಇಲ್ಲ' ಎನ್ನುತ್ತಾರೆ ' ಚಿಕ್ಕಕೆಲಸವಾದರೂ, ದೊಡ್ಡಕೆಲಸವಾದರೂ ' ಬಹಳ ಕಷ್ಟ ' ಎನ್ನುತ್ತಾರೆ, ನಿಜಕ್ಕೂ ' ಕಷ್ಟ ' ಎನ್ನುವುದು ಒಂದೂ ಇಲ್ಲ. ' ನಾವು ಮಾಡಬಹುದು ' ಎನ್ನುವ ನಿಶ್ಚಯಕ್ಕೆ ಬಂದು, ಉತ್ಸಾಹದಿಂದ ತೊಡಗುವುದು ಮನುಷ್ಯನ ಕರ್ತವ್ಯ. ಆದ್ದರಿಂದ ಆಯಾಸಕ್ಕೆ (ಸೋಮಾರಿತನಕ್ಕೆ) ಅವಕಾಶಕೊಡಕೂಡದು.

'ಮಂಗಲ' ವೆನ್ನುವುದು ಇದಾದ ಮೇಲಿನ ಗುಣ. ಕೆಲವರು ಯಾವಾಗಲೂ ಕೆಳಮಟ್ಟದ ಶಬ್ದಗಳನ್ನೇ ಬಳಸುತ್ತಾರೆ. ನಾವು ಯಾರಾದರು ದೊಡ್ಡವರೊಡನೆ ಮಾತನಾಡುವಾಗ ಅವರಿಗೆ ತಕ್ಕಂತೆ, ವಯಸ್ಸಾಗಿರುವವ ರಾದರೆ 'ಬನ್ನಿ' ಎನ್ನುವುದಕ್ಕೆ ಬದಲು 'ದಯಮಾಡಿ' ಎಂದರೆ ಅವರಿಗೆ ಬಹಳ ಸಂತೋಷವಾಗಿ ನಮ್ಮ ಮೇಲೆ ಪ್ರೀತಿ ಹೆಚ್ಚಾಗುತ್ತದೆ. 'ಆಸನ ವನ್ನು ಅಲಂಕರಿಸಿ' ಎಂದರೆ ಮಂಗಳವಾದ ಮಾತು. 'ಅಲ್ಲಿ ಹೋಗಿ ಕೂತು ಕೋ'ಎಂದರೆ ಸಾಧರಣವಾದ ಮಾತು. ಮಂಗಳವಾದ ಮುಖಭಾವವೂ ಇರಬೇಕು. ಇದನ್ನು ನಾವು ಕಲಿಯಬೇಕು.

ಅನಂತರ 'ಅಕಾರ್ಪಣ್ಯ'. ಮನುಷ್ಯನಲ್ಲಿ ಕಾಮ, ಕ್ರೋಧ, ಲೋಭ ಮುಂತಾದ ಕೆಟ್ಟ ಗುಣಗಳು ಇರುತ್ತವೆ. ಒಬ್ಬೊಬ್ಬರಿಗೆ ಶಕ್ತಿ ಇಲ್ಲದೆ ಹೋಗುವುದರಿಂದ ಕಾಮ- ಕ್ರೋಧಗಳು ತಾವಾಗಿಯೇ ಬಳದೆ ಇದ್ದ ರೂ ಲೋಭವನ್ನು ಗೆಲ್ಲುವುದು ಸ್ವಲ್ಪ ಕಠಿಣವಾಗುತ್ತದೆ. ಎಷ್ಟು ವಯ ಸ್ಸಾದರೂ ಇನ್ನೂ ಹಣವನ್ನು ಸೇರಿಸಬೇಕೆಂಬ ವಿಚಾರ ಲೋಭವಾಗುತ್ತದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಜೇನು ನೊಣಗಳು ಎಷ್ಟು ಸೇರಿಸಿದರೂ ಯಾರೊ ಜೇನುಗೂಡಿನಿಂದ ಜೇನು ತುಪ್ಪವನ್ನೆಲ್ಲ ತೆಗೆದುಕೊಂಡು ಹೋಗುವ ಹಾಗೆ, ನಾವು ಏಕೆ ಸೇರಿಸಿಟ್ಟ ಅದನ್ನು ಯಾರೋ ತೆಗೆದುಕೊಂಡು ಹೋಗುವಂತೆಬೇಮಾಡಬೇಕು? ಒಬ್ಬ ಬಡವ ಬೇಕಾಗಿದೆಯೆಂದು ಕೇಳಿದರೆ ಅದು ಸರಿಯೆಂದು ನಮಗೆ ತೋರಿದರೆ ಸಾಧ್ಯವಾದ ಮಟ್ಟಿಗೆ ಸಹಾಯ ಮಾಡಬಹುದೇ ವಿನಹ ಲೋಭಿಯಾಗಬಾರದು. ಇದೇ 'ಅಕಾರ್ಪಣ್ಯ' ವೆಂದು ಹೇಳಲ್ಪಟ್ಟಿದೆ.

ಆನಾದ ಮೇಲೆ 'ಅಸ್ಪೃಹಾ' ಆಸೆಗಳು ಹೆಚ್ಚಾಗುತ್ತಾ ಹೆಚ್ಚಾಗುತ್ತಾ ತಪ್ಪುಗಳನ್ನು ಮಾಡುವನು. ಹೊಟ್ಟೆಗೆ ಇಲ್ಲದವನು ಕಳ್ಳತನ ಮಾಡುವುದಕ್ಕಿಂತಲೂ ಹಣವುಳ್ಳವನು ಕಳ್ಳತನ ಮಾಡುವುದೇ ಹೆಚ್ಚು. ಏಕೆಂದರೆ ಅವನಿಗೆ ಆಸೆ ಹೆಚ್ಚು. ಆಸೆಗಳನ್ನು ಒಂದು ಮಿತಿಯಲ್ಲಿಟ್ಟುಕೊಂಡು ನಾವು ವ್ಯವಹರಿಸಿದರೆ ನಾವು ದೋಷರಹಿತರಾಗುತ್ತೇವೆ. ಎಲ್ಲ ಪಾಪಗಳಿಗೂ ಮೂಲ ಸ್ಥಾನವಾದ ಆಸೆಯನ್ನು ನಾವು ನಿಗ್ರಹಿಸಿ ನಾವು ಶ್ರೇಯಸ್ಸನ್ನು ಪಡೆಯಬೇಕು.

ವಿದ್ಯೆಯಿಂದ ನಾವು ಈ ಎಂಟು ಗುಣಗಳನ್ನು ಖಂಡಿತವಾಗಿಯೂ ಪಡೆಯಬೇಕು. ವಿದ್ಯೆ ಕಲಿತೂ ಈ ಗುಣಗಳನ್ನು ನಾವು ಪಡೆಯದೆ ಹೋದರೆ ಕತ್ತಿ ಅಥವಾ ಚಾಕುವನ್ನು ಇಟ್ಟುಕೊಂಡು ತರಕಾರಿಯನ್ನು ಕತ್ತರಿಸದೆ ನಮ್ಮ ಶರೀರದ ಅಂಗಗಳನ್ನೇ ಕತ್ತರಿಸಿಕೊಂಡಂತೆಯೇ ಸರಿ. ಈ ರೀತಿ ನಾವು ನಮ್ಮ ಬಾಳನ್ನು ಹಾಳು ಮಾಡಿಕೊಳ್ಳಬಾರದು ಆದ್ದರಿಂದ ಆ ನಿಗ್ರಹ, ಗುಣ ಮೊದಲಾದವುಗಳನ್ನು ನಮ್ಮ ದೃಢನಿಶ್ಚಯವಾಗಿ ಸ್ವೀಕರಿಸಿ ವಿದ್ಯಾವಂತರಾಗಿದ್ದರೆ ಮಾತ್ರ ದೇಶದ ಒಳ್ಳೆಯ ನಾಗರೀಕರಾಗಿರಬಲ್ಲೆವು. ಇತರರಿಗೂ ದಾರಿ ತೋರಿಸಬಹುದು, ಶ್ರೇಯಸ್ಸು ಪಡೆಯಬಹುದು.

ನೀವೆಲ್ಲರೂ ಗುಣ-ಶೀಲಗಳನ್ನು ಪಡೆದು ಬಾಳಬೇಕೆಂದು ನಾವು ಪ್ರಾರ್ಥಿಸುತ್ತೇವೆ. ಈಶ್ವರನು ನಿಮಗೆಲ್ಲರಿಗೂ ಒಳ್ಳೆಯದನ್ನು ಮಾಡಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

೨ ಭಕ್ತಿ

ತ್ರಯೀವೇದ್ಯಂ ಹೃದ್ಯಂ ತ್ರಿಪುರಹರಮಾದ್ಯಂ ತ್ರಿನಯನಂ
ಜಟಾಭಾರೋದಾರಂ ಚಲದುರಗಹಾರಂ ಮೃಗಧರಮ್ ।
ಮಹಾದೇವಂ ದೇವಂ ಮಯಿ ಸದಯಭಾವಂ ಪಶುಪತಿಂ
ಚಿದಾಲಂಬಂ ಸಾಂಬಂ ಶಿವಮತಿವಿಡಂಬಂ ಹೃದಿ ಭಜೇ ॥

ಜ್ಞಾನವನ್ನು ಪಡೆಯಲು ಮೂರು ಮಾರ್ಗಗಳು ಹೇಳಲ್ಪಟ್ಟಿವೆ. ತೀವ್ರವಾದ ವೈರಾಗ್ಯವಿರುವುದರಿಂದ ಯಾರ ಮನಸ್ಸು ತಮ್ಮ ವಶದಲ್ಲಿರುವುದೋ ಅವರು ಜ್ಞಾನಮಾರ್ಗವನ್ನು ಅವಲಂಬಿಸಬಹುದು. ಕೆಲವರಿಗೆ ಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಕರ್ಮಗಳ ಬಗ್ಗೆ ಹೆಚ್ಚು ತಿಳುವಳಿಕೆ, ಆ ಕರ್ಮಗಳ ವಿಷಯದಲ್ಲಿ ಹೆಚ್ಚು ಶ್ರದ್ಧೆ ಇರುತ್ತದೆ. ಇಂಥಹವರು ಕರ್ಮಮಾರ್ಗದಲ್ಲಿ ನಡೆಯಬಹುದು. ಮತ್ತೆ ಕೆಲವರಿಗೆ ಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಕರ್ಮಗಳ ಬಗ್ಗೆ ಹೆಚ್ಚಾಗಿ ತಿಳುವಳಿಕೆಯಾಗಲಿ ಮೇಲ್ಮಟ್ಟದ ವೈರಾಗ್ಯವಾಗಲಿ ಇಲ್ಲದೆ ಹೋದರೆ ಅಂಥಹವರಿಗೆ ಏನು ದಾರಿ ? ಇದಕ್ಕೆ ‘ ನೀನು ಭಗವಂತನನ್ನು ಭಜಿಸುತ್ತಾ ಇರು. ಅದು ನಿನಗೆ ಉತ್ತಮವಾದ ದಾರಿಯಾಗುತ್ತದೆ ’ ಎಂದು ನಮ್ಮ ಹಿಂದಿನವರು ಹೇಳಿದ್ದಾರೆ.

‘ ಜ್ಞಾನಂ ಕರ್ಮ ಚ ಭಕ್ತಿಶ್ಚ ನೋಪಾಯೋನ್ಯೋಽಸ್ತಿ ಕುತ್ರಚಿತ್। ’ ಎಂದು ಇದೆ. ಜ್ಞಾನಮಾರ್ಗ, ಕರ್ಮಮಾರ್ಗ, ಭಕ್ತಿಮಾರ್ಗ ಎಂದು ಮೂರು ಮಾರ್ಗಗಳಿವೆ. ಈ ಮೂರು ಮಾರ್ಗಗಳನ್ನು ಬಿಟ್ಟು ಬೇರೆ ಯಾವ ಮಾರ್ಗವೂ ಇಲ್ಲ. ಇದೇ ಸಾರಾಂಶ. ಎಲ್ಲಾ ವಿಧವಾದ ಬಂಧಗಳಿಂದ ಬಿಡುಗಡೆ ಪಡೆದು ಪರವಸ್ತುವನ್ನು ಅರಿತ ಜೀವನ್ಮುಕ್ತರೂ ಸಗುಣ ಪರಮೇಶ್ವರನನ್ನು ಆರಾಧಿಸುವುದು ಉಂಟೆಂದು ಭಾಗವತದಲ್ಲಿ ಹೇಳಿದೆ.

ಆತ್ಮಾರಾಮಾಶ್ಚ ಮುನಯೋ ನಿರ್ಗ್ರಂಥಾ ಅಪ್ಯುರುಕ್ರಮೇ ।
ಕುರ್ವಂತ್ಯಹೈತುಕೀಂ ಭಕ್ತಿಂ ಇತ್ಥಂ ಭೂತಗುಣೋ ಹರಿಃ ॥

ಭಗವಂತನ ಗುಣಗಳು ಹೇಗಿರುವುವು ಎಂದರೆ ಯಾರು ನಿರ್ಗುಣ ಪರಮವಸ್ತುವಿನ ವಾಸ್ತವಿಕವಾದ ಸ್ವರೂಪವನ್ನು ತಿಳಿದವರಾಗಿದ್ದಾರೋ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಥಹವರು ಕೂಡ ಸಗುಣ ಪರಮೇಶ್ವರನ ಸ್ವರೂಪವನ್ನು ಆರಾಧಿಸು ತ್ತಾರೆಂದು ಹೇಳಲ್ಪಟ್ಟಿದೆ. ಏಕೆಂದರೆ ಭಗವಂತನ ಆ ಕಲ್ಯಾಣ ಗುಣಗಳು ಇಂಥಹವು. ಯಾರಾದರೂ ಅವನನ್ನು ಬಿಟ್ಟು ಬಿಡಲು ಇಷ್ಟ ಪಟ್ಟರೂ ಅದು ಬೇಡವೆಂದು ತೋರುತ್ತದೆ.

ತ್ವಯಿ ಜನಾರ್ದನ ಭಕ್ತಿರಚಂಚಲಾ ಯದಿ ಭವೇತಫಲಪ್ರವಣಾ ಮಮ ।

ಅಭಿಲಷಾಮ್ಯಪವರ್ಗ ಪರಾಙ್ಮುಖಃ ಪುನರಪೀಹ ಶರೀರ ಪರಿ ಗ್ರಹಮ್ ॥

ಮೋಕ್ಷ ಲಾಭವಾದವನಿಗೆ ಶರೀರವೆನ್ನುವುದು ಇರುವುದಿಲ್ಲ. ಅನಂತ ವಾದ ಚೈತನ್ಯ ಸ್ವರೂಪನಾಗಿ ಅವನಿರುತ್ತಾನೆ. ಆಗ ಅವನು ಆನಂದ ರೂಪನಾಗಿರುತ್ತಾನೆಂದು ಶಾಸ್ತ್ರ ಹೇಳುತ್ತಿದ್ದರೂ ಭಕ್ತರಿಗೆ ಭಗವದ್ಭಕ್ತಿ ಯಿಂದ ಉಂಟಾದ ಆನಂದವನ್ನು ಅನಭವಿಸಿ, ಅನುಭವಿಸಿ ಏನೆಂದು ತೋರು ತ್ತದೆ ಎನ್ನುವುದನ್ನು ಕುರಿತು. 'ತ್ವಯಿ ಜನಾರ್ದನ ಭಕ್ತಿರಚಂಚಲಾ' ಯದಿ ಭವೇತಫಲಪ್ರವಣಾ ಮಮ' ಎಂದು ಹೇಳಲ್ಪಟ್ಟಿದೆ.

'ಎಲೈ ಭಗವಂತನೇ ! ನಿನ್ನ ಮೇಲೆ ಅಚಂಚಲವಾದ ಭಕ್ತಿ ಇದ್ದರೆ ಮಾತ್ರ ಸಾಕು. 'ಯಾವ ಫಲವನ್ನು ಇಷ್ಟಪಟ್ಟು ನಾನು ಭಕ್ತಿಯನ್ನು ಮಾಡುವಂತಾಗದಿರಲಿ' ಒಂದು ಫಲಾಪೇಕ್ಷೆಯೂ ಇಲ್ಲದೆ ನಾನು ನಿನಗಾಗಿ ಎಂದೇ ಭಕ್ತಿ ಮಾಡುತ್ತೇನೆ. ಎಂದರೆ ಅಭಿಲಷಾಮ್ಯಪವರ್ಗಪರಾಙ್ಮುಖಃ ಪುನ್ರೈಪೀಹ ಶರೀರ ಪರಿಗ್ರಹಮ್' 'ಮೋಕ್ಷವೆನ್ನುವುದೂ ಬೇಡ. (ಮತ್ತೆ ನಿನಗೆ ಏನು ಬೇಕು?) ಮತ್ತೆ ಮತ್ತೆ ನನಗೆ ಶರೀರ ಉಂಟಾಗುತ್ತಾ ನಿನಗೆ ಸೇವೆಮಾಡುತ್ತಾ ಹೋದರೆ ಅಷ್ಟೇ ನನಗೆ ಸಾಕು.'

ಭಕ್ತಿಮಾರ್ಗದಲ್ಲಿರುವವನಿಗೆ ಯಾವಾಗಲೂ ಆನಂದವಿದ್ದೇ ಇರು ತ್ತದೆ. ಆದರೆ ಜ್ಞಾನಮಾರ್ಗದಲ್ಲಿರುವವರಿಗೆ ಸಾಧನೆ ಮಾಡುವ ಕಾಲ ದಲ್ಲಿ ಆನಂದವಾಗಿರುವುದಿಲ್ಲ. ಯಾವಾಗಲೂ ಅವರು ಇಂದ್ರಿಯಗಳನ್ನೂ ಮನಸ್ಸನ್ನೂ ತಮ್ಮ ವಶದಲ್ಲಿಟ್ಟುಕೊಂಡಿರಬೇಕು. ಆದರೆ ಇವುಗಳನ್ನು ನಿಗ್ರಹಿಸುವುದು ಕಷ್ಟವಾದುದೇ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ' ಎಂದಲ್ಲವೇ ಭಗವಂತನು ಹೇಳಿರುವುದು ! ಆ ಅವ್ಯಕ್ತವಾದ ಪರವಸ್ತುವನ್ನು ಚಿಂತಿಸುವುದು ಕಷ್ಟ. ಹೀಗಿದ್ದರೂ ಜ್ಞಾನಮಾರ್ಗದಲ್ಲಿ ನಡೆಯುವವನು ಪ್ರಯತ್ನಿಸುತ್ತಾ ಮನಸ್ಸನ್ನು ದೃಢಪಡಿಸಿಕೊಂಡು ಮುಂದುವರೆಯಬೇಕು. ಆದರೆ ಭಗವಂತನ ಆರಾಧನೆ ಹಾಗಲ್ಲ. ಭಗವಂತನ ಲೀಲೆಗಳು ಮನಸ್ಸನ್ನು ಆಕರ್ಷಿಸಿ ಅದನ್ನು ಸ್ಥಿರಪಡಿಸುತ್ತವೆ.

ಮಧುಸೂದನ ಸರಸ್ವತಿಯವರು ಅದ್ವೈತಮಾರ್ಗದಲ್ಲಿ ಬಹಳ ಸಿದ್ಧರು. ಅವರು ಶುದ್ಧವಾದ ಚೈತನ್ಯವನ್ನು ಬಿಟ್ಟು ಬೇರೆ ಯಾವುದೂ ಸತ್ಯವಾಗಿಯೂ ಇಲ್ಲವೆನ್ನುವುದನ್ನು ಸ್ಪಷ್ಟಪಡಿಸುವ 'ಅದ್ವೈತ ಸಿದ್ಧಿ' ಎನ್ನುವ ಗ್ರಂಥವನ್ನು ಬರೆದಿದ್ದಾರೆ. ಅಂಥಹವರು ಕೂಡ ಒಂದು ಕಡೆ ಏನು ಹೇಳಿದ್ದಾರೆ ಎನ್ನುವುದು ಗಮನಾರ್ಹ. 'ನಿರ್ಗುಣವಾಗಿಯೂ, ನಿಷ್ಕಲವಾಗಿಯೂ, ಆನಂದವಾಗಿಯೂ ಇರುವ ಯಾವುದೋ ಚೈತನ್ಯವನ್ನುಯೋಗಿಗಳು ಧ್ಯಾನದಲ್ಲಿ ಕಾಣುತ್ತಾರೆ. ಅದನ್ನು ಅವರು ನೋಡಲಿ ಹೀಗೆಂದು ಹೇಳಿ,

> 'ಅಸ್ಮಾಕಂ ತು ತದೇವ ಲೋಚನ ಚಮತ್ಕಾರಾಯ
> ಭೂಯಾಚ್ಚಿರಮ್
> ಕಾಲಿಂದೀಪುಲಿನೇಷು ತತ್ಕಿಮಪಿ ಯನ್ನೀಲಂ ಮಹೋ ತಾವತಿ'॥

ಎಂದು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. 'ನಮ್ಮ ಕಣ್ಣುಗಳಿಗೆ ಯಮುನಾ ದಡದಲ್ಲಿ ಆಟವಾಡುತ್ತಿರುವ ಶ್ಯಾಮಲ ಗಾತ್ರನಾದ ಕೃಷ್ಣನು ಯಾವಾಗಲೂ ಕಾಣುತ್ತಾನೆ' ಎನ್ನುವುದು ತಾತ್ಪರ್ಯ.

ಸಗುಣೋಪಾಸನೆ ಮಾಡುವವರಿಗೆ, ಭಗವಂತನ ಭಕ್ತಿಮಾರ್ಗದಲ್ಲಿರುವವರಿಗೆ ಆನಂದವೆನ್ನುವುದು ಯಾವಾಗಲೂ ಇರುತ್ತದೆ. ಮನಸ್ಸು ದೃಢವಿಲ್ಲದಿರುವರಿಗೆ ಭಗವದ್ಭಕ್ತಿಯಿಂದ ತಾನಾಗಿಯೇ ಮನಸ್ಸು ಸ್ಥಿರವಾಗಿ ಆ ನಿರ್ಗುಣವಾದ ಆತ್ಮಸಾಕ್ಷಾತ್ಕಾರ ಭಗವಂತನ ದಯೆಯಿಂದ ತಾನಾಗಿಯೇ ಆಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

'ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮ ಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥

ಎಂದು ಗೀತೆಯಲ್ಲಿ ಭಗವಂತನು ತಿಳಿಸಿದ್ದಾನೆ. ಭಗವಂತನು ಭಕ್ತನ ಮೇಲೆ ಅನುಗ್ರಹಿಸಿ ಹೃದಯದಲ್ಲಿ ಆಸೀನನಾದನೆಂದರೆ ಭಗವಂತನು ತಾನಾಗಿ ಜ್ಞಾನ ದೀಪವನ್ನು ಪ್ರಕಾಶಿಸಿ ಅಜ್ಞಾನವನ್ನು ನಾಶಮಾಡುತ್ತಾನೆ. ಇದು ಭಗವಂತನ ಅಭಿಪ್ರಾಯ. ಭಕ್ತಿಯ ಹಿರಿಮೆ ಇಂಥಹದು.

ಭಕ್ತಿ ಎನ್ನುವುದು ಏನು ಎನ್ನುವುದಕ್ಕೆ 'ಸಾತ್ವಸ್ಮಿನ್ ಪರಮ ಪ್ರೇಮರೂಪಾ'–ಅದು ಭಗವಂತನ ವಿಷಯದಲ್ಲಿ ಶ್ರೇಷ್ಠವಾದ ಪ್ರೇಮರೂಪ ಎಂದು ನಾರದರು ಹೇಳಿದರು.

ಶಾಂಡಿಲ್ಯರು ಒಬ್ಬ ಮಹರ್ಷಿ. ಅವರು ಭಕ್ತಿಯನ್ನು ಕುರಿತು ಒಂದು ಗ್ರಂಥವನ್ನು ಬರೆದಿದ್ದಾರೆ. 'ಈ ಭಕ್ತಿ ಎಲ್ಲರೂ ಮಾಡುತ್ತಿರುವ ವಿಷಯ. ಆದರೆ ಇದಕ್ಕೆ ಆಧಾರ ಬೇರೆ ಬೇರೆಯಾಗಿರುವುದರಿಂದ ಯಾವುದೋ ರೂಪದಲ್ಲಿ ಅದುಬದಲಾಗುತ್ತದೆ ಎನ್ನುವ ಅಭಿಪ್ರಾಯವನ್ನು ಅವರು ತಿಳಿಸಿದ್ದಾರೆ. ಮನುಷ್ಯನಾಗಿ ಹುಟ್ಟಿದ ಪ್ರತಿಯೊಬ್ಬನೂ ಯಾವುದಾದರೂ ಒಂದು ವಿಷಯದಲ್ಲಿ ಪ್ರೀತಿ ಇಟ್ಟುಕೊಂಡವನಾಗಿಯೇ ಬಾಳುತ್ತಾನೆ ಹೊರತು ಒಂದರಲ್ಲೂ ಪ್ರೀತಿ ಇಲ್ಲದೆ ಬಾಳುವುದಿಲ್ಲ.

'ಬಾಲಸ್ತಾವತ್ ಕ್ರೀಡಾ ಸಕ್ತ-
ಸ್ತರುಣಸ್ತಾವತ್ತರುಣೀ ಸಕ್ತಃ ।
ವೃದ್ಧಸ್ತಾವಚ್ಚಿಂತಾಸಕ್ತಃ ॥

ಎನ್ನುವಂತೆ ಎಲ್ಲರಿಗೂ ಪ್ರಿಯವಾಗಿರುವಂಥಹ ಒಂದು ವಸ್ತು ಇರುತ್ತದೆ. 'ಬಾಲಸ್ತಾವತ್ ಕ್ರೀಡಾಸಕ್ತಃ' – ಮಕ್ಕಳಿಗೆ ಯಾವಾಗಲೂ ಆಡುವುದೆಂದರೆ ಇಷ್ಟ. ಶರೀರಕ್ಕೆ ಆಹಾರವೂ ಬೇಡ. ಆಟದಲ್ಲಿ ಅಷ್ಟು ಆಸಕ್ತಿ. ಇದು ಇಲ್ಲದಿದ್ದರೆ ಮಕ್ಕಳ ಬೆಳವಣಿಗೆ ಕೆಟ್ಟುಹೋಗುತ್ತದೆ, ಆದ್ದರಿಂದಲೇ ಮಕ್ಕಳು [illegible] ದಿಲ್ಲ. ತರುಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ತಾವತ್ತರುಣೀಸಕ್ತಃ' – ಯೌವನದಲ್ಲಿ ಹೆಣ್ಣು ಇಂಥಹವುಗಳ ಮೇಲೆ ಆಸಕ್ತಿ ಇರುವುದುಂಟು. 'ವೃದ್ಧಸ್ತಾವಚ್ಚಿಂತಾ ಸಕ್ತಃ'– ಮುಪ್ಪಿನಲ್ಲಿ ಚಿಂತೆ ಇರುವುದು ಸಹಜ. 'ಅದು ಹಾಗೆ ಆಗಲಿಲ್ಲ, ಇದು ಹೀಗೆ ಆಗಲಿಲ್ಲ. ಅದು ಆಗಲಿಲ್ಲ. ಇದು ಆಗಲಿಲ್ಲ.' ಎಂದು ಚಿಂತೆ ಮಾಡುತ್ತಿರುವುದೇ ವಯಸ್ಸಾದವರಿಗೆ ಇಷ್ಟ. ಹಾಗೆ ಚಿಂತೆ ಇಲ್ಲದೆ ಅವರು ಇರಲಾರರು.

ಹೀಗೆ ಮನುಷ್ಯನ ಜೀವನದಲ್ಲಿ ಯಾವುದಾದರೂ ವಿಷಯದಲ್ಲಿ ಪ್ರೇಮವಿರುತ್ತದೆ. ಎಲ್ಲವನ್ನೂ ಬಿಟ್ಟುಬಿಟ್ಟು ಕಾವಿ ಬಟ್ಟೆ ಧರಿಸಿದ ಸಂನ್ಯಾಸಿಗಳಾಗಿರುವವರಿಗೆ ಯಾವ ವಿಷಯದಲ್ಲಿ ಪ್ರೇಮ ಎಂದರೆ ಅವರಿಗೆ ಆತ್ಮವನ್ನು ಪಡೆಯಬೇಕೆನ್ನುವ ವಿಷಯದಲ್ಲಿ ಪ್ರೇಮ. ಪ್ರಿಯವಾಗಿರುವ ಈ ಆತ್ಮ ಒಂದಿರುವಾಗ ಯಾವುದಕ್ಕಾಗಿ ಸಾವಿರಾರು ವಿಷಯಗಳಲ್ಲಿ ಪ್ರೀತಿಯನ್ನಿಟ್ಟುಕೊಳ್ಳಬೇಕು ? ಇದು ಒಂದು ಸಾಕು ಎಂದು ಸ್ಥಿರವಾಗಿದ್ದು ಇದರ ಸಾಕ್ಷಾತ್ಕಾರ ಪಡೆಯಬೇಕೆಂದು ಸಂನ್ಯಾಸಿಗಳೂ ಪ್ರೇಮ ಇಟ್ಟುಕೊಂಡೇ ಇದ್ದಾರೆ. 'ಆದ್ದರಿಂದ ಪ್ರೇಮವಿಲ್ಲದೆ ಯಾರೂ ಇಲ್ಲ. ಮನುಷ್ಯನಿಗೆ ಯಾವುದಾದರೂ ಒಂದು ವಿಷಯದಲ್ಲಿ ಪ್ರೇಮ ಇದ್ದೇ ಇರುತ್ತದೆ. ಮಕ್ಕಳು-ಮರಿ ಇಲ್ಲದವನು ಒಂದು ಬೆಕ್ಕನ್ನೋ. ನಾಯಿಯನ್ನೋ ಸಾಕುತ್ತಾನೆ. ಹಿಂದಿನಕಾಲದಲ್ಲಿ ಹಸುವನ್ನು ಸಾಕುವುದು ಪುಣ್ಯವೆಂದುಕೊಂಡು ಸಾಕುತ್ತಿದ್ದರು. ಈಗಲೋ. ನಾಯಿ, ಬೆಕ್ಕು ಇವುಗಳಾದರೆ ಯಾವಾಗಲೂ ಪಕ್ಕದಲ್ಲಿಯೇ ಇಟ್ಟುಕೊಳ್ಳಬಹುದೆಂದು ಕೊಂಡು ಸಾಕುತ್ತಾರೆ. ಏಕೆಂದರೆ. ಮನುಷ್ಯನಿಗೆ ಯಾವುದಾದರೂ ಒಂದು ಚೈತನ್ಯದಲ್ಲಿ ವಿಶ್ವಾಸವಿರುತ್ತದೆ. ಆ ವಿಶ್ವಾಸವೇ ಪ್ರೇಮ. ಆ ಪ್ರೇಮ ಸ್ವಾಭಾವಿಕವಾದುದರಿಂದ ಋಷಿಗಳು 'ಇವನು ಈ ರೀತಿ ಪ್ರೀತಿ ಇಟ್ಟುಕೊಂಡಿದ್ದಾನಲ್ಲಾ, ಇದು ಇವನ ಸ್ವಭಾವವಾಗಿದೆ. ಇವನಿಗೆ ಒಂದು ಒಳ್ಳೆಯ ದಾರಿ ತೋರಿಸಬೇಕು' ಎಂದುಕೊಂಡರು. ತಾಮ್ರಪರ್ಣಿ ನದಿಯಲ್ಲಿ ಎಷ್ಟೋ ನೀರು ಹರಿಯುತ್ತಿದ್ದರೂ ಎಲ್ಲಾ ಸಮುದ್ರಕ್ಕೆ ಸೇರುತ್ತಿತ್ತು. ಇಂಜಿನಿಯರುಗಳು ಏನು ಮಾಡಿದರು ! ದಾರಿಯಲ್ಲೇ ಸೇತುವೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಟ್ಟಿದರೆ ಎಷ್ಟೋ ಉಪಯೋಗವಾಗುತ್ತದೆಂದು ಯೋಚಿಸಿದರು. ಅದೇ ರೀತಿ ನಮ್ಮ ಋಷಿಗಳು, 'ನೀನು ಒಂದು ವಿಷಯದಲ್ಲಿ ತಾನೆ ಮುಖ್ಯವಾಗಿ ಪ್ರೇಮವನ್ನಿಟ್ಟುಕೊಳ್ಳುವೆ. ಅದನ್ನು ನೀನು ಭಗವಂತನ ವಿಷಯ ದಲ್ಲಿಟ್ಟುಕೊಳ್ಳು. ಹಾಗೆ ಅದನ್ನು ಭಗವಂತನ ಕಡೆಗೆ ತಿರುಗಿಸಿಬಿಡು. ಹಾಗೆ ತಿರುಗಿಸಿ ಬಿಟ್ಟರೆ, ಭಗವಂತನ ವಿಷಯುವಾಗಿ ಮನಸ್ಸು ಆಗಿ ಬಿಟ್ಟರೆ ಯಾವಾಗಲೂ ಮನಸ್ಸಿನಲ್ಲಿ ಸಚ್ಚಿಂತನೆ, ಸತ್ಕಥನ ಎನ್ನುವಂತೆ ಭಗವಂತನ ಪಾದಾರವಿಂದಗಳಲ್ಲಿ ಮನಸ್ಸು ತಾನಾಗಿಯೇ ಬಂದು ಬಿಡುತ್ತದೆ. ಅವನಲ್ಲಿ ಉತ್ತಮವಾದ ಪ್ರೇಮ ಉಂಟಾಗಿ ಎಂದೂ ಅದನ್ನು ಬಿಡಲಾಗುವುದಿಲ್ಲ. ಆದ್ದರಿಂದ ನಾರದರು,

'ಸಾತ್ವಸ್ಮಿನ್ ಪರಮಪ್ರೇಮರೂಪಾ'

–'ಭಕ್ತಿ ಎನ್ನುವುದು ಪರವಸ್ತುವಿನ ವಿಷಯದಲ್ಲಿ ಉತ್ತಮವಾದ ಪ್ರೇಮರೂಪ' ಎಂದು ಹೇಳಿದರು. ಈ ಭಕ್ತಿಗೆ 'ಪರಮ ಪ್ರೇಮ ರೂಪಾ' ಎನ್ನುವ ಹೆಸರು ಏಕೆ ಬಂದಿದೆ ಎನ್ನುವುದನ್ನು ಯೋಚಿಸೋಣ. ಯಾವುದೋ ಸಂಕಟ ಬಂದ ಸಮಯದಲ್ಲಿ 'ವೆಂಕಟರಮಣ' ಎಂದು ಹೇಳುತ್ತಾರೆ. ಸಂಕಟ ಹೋದ ಮೇಲೆ 'ವೆಂಕಟರಮಣ' ಮರೆತು ಹೋಗುತ್ತದೆ. ಅಂಥಹ ಭಕ್ತಿಯುಳ್ಳ ಭಕ್ತನನ್ನು ಕುರಿತು ಪ್ರಹ್ಲಾದನು, 'ನ ಸ ಭೃತ್ಯ: ಸ ವೈ ವಣಿಕ್' ಎಂದಿದ್ದಾನೆ. ಅಂದರೆ, ಯಾರಾದರೂ ಭಗವಂತನ ಮೇಲೆ ಯಾವುದಾದರೂ ಕಷ್ಟ ದೂರವಾಗುವವರೆಗೋ, ಬೇರೆ ಯಾವುದಾದರೂ ಕಾರಣದಿಂದಲೋ ಪ್ರೀತಿ ಇಟ್ಟುಕೊಂಡಿದ್ದರೆ ಅವನು ಭಗವಂತನೊಡನೆ ವ್ಯಾಪಾರ ಮಾಡುವ ಒಬ್ಬ ವ್ಯಾಪಾರಿಯೇ ಆಗುತ್ತಾನೆ ಹೊರತು ಭಗವಂತನ ನಿಜವಾದ ದಾಸನಲ್ಲ. ವ್ಯಾಪಾರಿ ಏನು ಮಾಡು ತ್ತಾನೆ ? ಹಣ ಕೊಟ್ಟರೆ ಸಾಮಾನು ಕೊಡುತ್ತಾನೆ. ಅದೇ ರೀತಿ ನಾವೂ ಭಕ್ತಿ ಎನ್ನುವ ಹಣವನ್ನು ಕೊಟ್ಟು ಭಗವಂತನ ಹತ್ತಿರ ಸಾಮಾನು ಕೊಳ್ಳಲು ಹೋದರೆ ನಾವು ವ್ಯಾಪಾರಿಗಳೇ- ಹಾಗೇ ಆಗಬಾರದು. ಭಕ್ತಿ ಯಾವುದಕ್ಕೆ ಮಾಡುವುದು ? ಭಗವಂತನಿಗಾಗಿಯೇ ಭಕ್ತಿ ಮಾಡಬೇಕು. ಅದರಿಂದಲೇ ನಾರದರು ಭಕ್ತಿಯನ್ನು 'ಪ್ರೇಮರೂಪಾ' ಎಂದಿದ್ದಾರೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಆತ್ಮನ ಮೇಲೆ ಎಲ್ಲರಿಗೂ ಪರಮಪ್ರೇಮವಿರುತ್ತದೆ. ಏಕೆಂದರೆ 'ನಾನು ನನಗೆ ಪ್ರಿಯನಲ್ಲದೆ ಮತ್ತೊಬ್ಬನೇ ನನಗೆ ಪ್ರಿಯ? ನಾನು ಯಾವಾಗಲೂ ನನಗೆ ಪ್ರಿಯನೇ. ನಾನು ನನಗೆ ಅಪ್ರಿಯನಾಗಿರುವುದೇ ಇಲ್ಲ' ಎಂದೇ ಯಾರಾದರೂ ಹೇಳುತ್ತಾರೆ.

ಹಿರಣ್ಯ ಕಶಿಪುವಿನ ವಧೆಯಾಯಿತು. ಅದಾದ ಮೇಲೆ ನೃಸಿಂಹಸ್ವಾಮಿ ಪ್ರಹ್ಲಾದನನ್ನು ಕುರಿತು 'ನಿನ್ನ ಮನಸಿನಲ್ಲಿ ಇಷ್ಟವೇನೋ ಅದನ್ನು ವರವಾಗಿ ಕೇಳು' ಎಂದನು. ಆಗ ಬೇರೆ ಯಾವುದನ್ನೂ ವರವಾಗಿ ಕೇಳದೆ ಪ್ರಹ್ಲಾದನು,

'ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ ।
ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಽಪಸರ್ಪತು' ॥

'ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ' --ಲೌಕಿಕ ವಸ್ತುಗಳಲ್ಲಿ ಪ್ರೀತಿ ಇಟ್ಟುಕೊಂಡಿರುವವರಿಗೆ, ಅವುಗಳನ್ನು ಬಿಟ್ಟರೆ ಬೇರೆ ಯಾವುದರ ಬಗ್ಗೆಯೂ ಚಿಂತೆಯೇ ಇರುವುದಿಲ್ಲ; ಒಬ್ಬನಿಗೆ ಒಂದು ಮಗುವಿನ ಮೇಲೆ ಹೆಚ್ಚಾಗಿ ಪ್ರೀತಿ ಇರುತ್ತದೆ. ಹಾಗಿರುವಾಗ ಆ ಮಗು ಯಾವುದಾದರೂ ಕಾರಣದಿಂದ ಮರಣವನ್ನು ಪಡೆದರೆ ಬೇರೆ ಯಾವುದಾದರೂ ಒಳ್ಳೆಯ ಜನ್ಮವನ್ನು ಪಡೆಯಬಹುದು. ಆದರೆ ಜೀವಿಸುವ ಇವನು 'ಮಗುಹೋಗಿ ಬಿಟ್ಟಿತು. ನಾನು ಹೋಗಲಿಲ್ಲವಲ್ಲಾ' ಎಂದು ವ್ಯಥೆಪಡುತ್ತಿರುತ್ತಾನೆ. ವಸ್ತುಗಳ ಮೇಲೆ ಪ್ರೀತಿ ಇಟ್ಟುಕೊಂಡಿರುವವರು ಯಾವುದಾದರೂ ವಿಷಯದಲ್ಲಿ ದೃಢವಾದ ಪ್ರೇಮ ಉಂಟಾದರೆ ಅವರು ಅದರಲ್ಲೇ ಹುಚ್ಚರಾಗಿರುವಂತೆ ಆಗಿ ಬಿಡುತ್ತಾರೆ.

'ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಽಪಸರ್ಪತು' 'ಪಾಮರ ಜನರಲ್ಲಿ ಇಹ ವಸ್ತುಗಳಲ್ಲಿ ಆಸೆ ಎನ್ನುವ ಪ್ರೇಮ ಇರುವಂತೆ? ನಿನ್ನ ವಿಷಯವಾಗಿ ಪ್ರೇಮ ನನ್ನ ಹೃದಯದಿಂದ ಎಂದೂ ಹೋಗದಿರಲಿ 'ಎಂದು ಪ್ರಹ್ಲಾದನು ಪ್ರಾರ್ಥಿಸಿದನು. ಅದೇ 'ಪರಮಪ್ರೇಮರೂಪಾ' ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳಲ್ಪಟ್ಟ ಭಕ್ತಿಯೆಂದು ಹೇಳುತ್ತೇವೆ. ಆದರೆ, ಸಾಮಾನ್ಯವಾಗಿ ನಾವು ಭಜನೆ ಮಾಡುವುದನ್ನೂ, ದೈವಿಕ ಕಥೆ ಓದುವುದನ್ನೂ ಭಕ್ತಿ ಎನ್ನುತ್ತೇವೆ. ಇವುಗಳೆಲ್ಲವೂ ಭಕ್ತಿಗೆ ಸಾಧನವಾಗಿರುವುದರಿಂದ, ಇವುಗಳನ್ನು ಭಕ್ತಿಯೆಂಧೇ ಹೇಳಬಹುದು. ಎಲ್ಲರೂ ಜೀವನ್ಮುಕ್ತರಲ್ಲ. ಆದರೂ, ಜೀವನ್ಮುಕ್ತನಾಗಲು ಯಾರಾದರೂ ಸಾಧನೆಮಾಡುತ್ತಿದ್ದರೆ ಅವನನ್ನು, 'ಏನಪ್ಪಾ ! ದೊಡ್ಡ ಜ್ಞಾನಿ' ಎನ್ನುತ್ತೇವೆ. ಜ್ಞಾನಮಾರ್ಗದಲ್ಲಿ ನಡೆಯುವುದರಿಂದ, ಜ್ಞಾನ ಸಾಧನ ಅನುಷ್ಠಾನದಿಂದ, ಅಂಥಹವನನ್ನು ಜ್ಞಾನಿ ಎನ್ನುತ್ತೇವೆ. ಆದ್ದರಿಂದ ಭಾಗವತದಲ್ಲಿಯೂ—.

'ಭಕ್ತ್ಯಾ ಸಂಜಾತಯಾ ಭಕ್ತ್ಯಾ ಬಿಭ್ರತ್ಯುತ್ಪುಲಕಾಂ ತನುಮ್'

ಎಂದಿದೆ. ಸಾಮಾನ್ಯ ಭಕ್ತಿಯಿಂದ ಉಂಟಾಗುವ ಫಲವೂ ಇಲ್ಲಿ ಹೇಳಿದೆ. ಅದೇನೆಂದರೆ ಸಾಧನವಾಗಿರುವ ಭಕ್ತಿಯಿಂದ ಸಾಧ್ಯವಾಗಿರುವ ಭಕ್ತಿ ಉಂಟಾಗುತ್ತದೆ. ಸಾಧನವಾದ ಭಕ್ತಿ ಯಾವುದು ? ಭಗವಂತನ ಲೀಲಾವಿಭೂತಿಗಳನ್ನು ಕುರಿತು ಭಾಗವತ, ಸ್ಕಾಂದ ಪುರಾಣಗಳಂಥಹ ಪುರಾಣಗಳನ್ನು ಹಲವು ಬಾರಿ ಓದಿದರೆ ಮನಸ್ಸು ಅಲ್ಲೇ ಮಗ್ನವಾಗಿ ಬಿಡುತ್ತವೆ. ಹಾಗೆ ಮನಸ್ಸು ಮಗ್ನವಾದಮೇಲೆ ಆನಂದವಾಗುತ್ತದೆ. ಆ ಪ್ರೇಮದಲ್ಲಿ ವಿಶೇಷವಾಗಿ ಇರುವುದಾದರೂ ಏನು ? 'ಬಿಭ್ರತ್ಯುತ್ಪುಲಕಾಂ ತನುಮ್—ಆ ಭಕ್ತಿಸಾಧನದಿಂದ ಉಂಟಾಗುವ ಸಾಧ್ಯ ಭಕ್ತಿ ಇರುವಾಗ ಭಕ್ತನ ಶರೀರದಲ್ಲಿ ರೋಮಾಂಚನವಾಗುತ್ತದೆ. ಸಾಧನಾಭಕ್ತಿಯನ್ನು ಕುರಿತು,

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥
ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ ।
ಕ್ರಿಯತೇ ಭಗವತ್ಯದ್ಧಾ ತನ್ಮನ್ಯೇಽಧೀತಮುತ್ತಮಮ್ ॥

ಪ್ರಹ್ಲಾದನು ಕೊಟ್ಟ ವಿವರಣೆ ಇದು. ಪ್ರಹ್ಲಾದನನ್ನು ಹಿರಣ್ಯಕಶಿಪು 'ಇಷ್ಟು ದಿನಗಳು ಗುರುಕುಲದಲ್ಲಿ ಯಾವ ವಿದ್ಯೆಯನ್ನು ಕಲಿತುಕೊಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದೆ' ಎಂದು ಕೇಳಿದಾಗ ಅವನು, 'ಇದೇ ಉತ್ತಮವಾಗಿರುವ ವಿದ್ಯೆ' ಎಂದನು. ಅದು ಯಾವುದು ?

'ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ' ॥

ಪರಮೇಶ್ವರನ ಬಗ್ಗೆ ಕೇಳುವುದು, ಅವನನ್ನು ಸ್ಮರಿಸುವುದು, ಸೇವಿಸುವುದು, ನಮಸ್ಕರಿಸುವುದು, ಅವನ ದಾಸನಾಗಿರುವುದು, ಅವನನ್ನು ಸ್ನೇಹಿತನನ್ನಾಗಿ ಮಾಡಿಕೊಳ್ಳುವುದು, ಅವನಿಗೆ ಆತ್ಮನಿವೇದನೆ ಮಾಡಿಕೊಳ್ಳುವುದು ಇದೆ. ಉತ್ತಮವಾದ ವಿದ್ಯೆ. ಇವುಗಳಲ್ಲಿ ಕೊನೆಯಲ್ಲಿರುವುದು ಆತ್ಮನಿವೇದನೆ. ಅದು ಹೇಗೆಂದರೆ ಅಲ್ಲೇ ಹೋಗಿ ಸೇರಿಬಿಡುವುದು. ಹಾಗೆ ಸೇರಿದ ಮೇಲೆ ಭಗವಂತನು ಯಾರು, ತಾನು ಯಾರು ಎನ್ನುವುದೇ ಅವನಿಗೆ ತಿಳಿಯುವುದಿಲ್ಲ. ಆದ್ದರಿಂದಲೇ ಭಗವತ್ಪಾದರು, ಭಕ್ತಿಯಲ್ಲಿರುವ ಮೆಟ್ಟಲುಗಳನ್ನು ತೋರಿಸುವುದಕ್ಕಾಗಿ ಶಿವಾನಂದಲಹರಿಯಲ್ಲಿ ಹೀಗೆ ಒಂದು ಶ್ಲೋಕವನ್ನು ಹಾಡಿದರು.

' ಅಂಕೋಲಂ ನಿಜಬೀಜಸಂತತಿರಯಸ್ಕಾಂತೋಪಲಂ ಸೂಚಿಕಾ
ಸಾಧ್ವೀ ನೈಜವಿಭುಂ ಲತಾ ಕ್ಷಿತಿರುಹಂ ಸಿಂಧುಃ ಸರಿದ್ವಲ್ಲಭಮ್ ।
ಪ್ರಾಪ್ನೋತೀಹ ಯಥಾ ತಥಾ ಪಶುಪತೇಃಪಾದಾರವಿಂದದ್ವಯಂ
ಚೇತೋವೃತ್ತಿರುಪೇತ್ಯ ತಿಷ್ಠತಿ ಸದಾ ಸಾ ಭಕ್ತಿರಿತ್ಯುಚ್ಯತೇ॥

ನಮ್ಮ ಮನೋಭಾವ ಹೀಗಿದ್ದರೆ ಅದಕ್ಕೆ ಭಕ್ತಿ ಎಂದು ಹೆಸರು ಎನ್ನುತ್ತಾರೆ. ಅದು ಹೇಗಿರಬೇಕೆಂದರೆ ಮೊಟ್ಟ ಮೊದಲು ಭಗವಂತನು ಬಂದು, ' ನಾನೇ ಭಗವಂತ, ನನ್ನನ್ನು ನೀನು ಆರಾಧಿಸು ' ಎಂದು ಹೇಳಿದರೂ ಕೂಡ ಯಾರೂ ಕೇಳುವುದಿಲ್ಲ.

ಅರ್ಜುನನು ಕೃಷ್ಣಪರಮಾತ್ಮನೊಡನೆ ಇದ್ದನು. ಹಾಗಿದ್ದರೂ —

' ಸಖೇತಿ ಮತ್ವಾ ಪ್ರಸಭಂ ಯದುಕ್ತಂ
ಹೇ ಕೃಷ್ಣ ಹೇ ಯಾದವ ಹೇ ಸಖೇತಿ '।

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಅವನು ಹೇಳುವ ರೀತಿಯುನ್ನು ನೋಡಿದರೆ ಅವನು ಭಗವಂತನನ್ನು ಕೇವಲ ಸ್ನೇಹಿತನೆಂದುಕೊಂಡುಬಿಟ್ಟಿದ್ದನು. ವಿಶ್ವರೂಪದರ್ಶನವಾಗುವವರೆಗೆ 'ನಾನು ತಪ್ಪು ಮಾಡಿ ಬಿಟ್ಟೆ, ಭಗವಂತನೇ ನಮ್ಮೊಡನೆ ಹೀಗೆ ಬಂದು ಆಟ ವಾಡುತ್ತಿದ್ದಾನೆ' ಎಂದು ಅನಂತರ ಭಾವಿಸುತ್ತಾನೆ. ಆದ್ದರಿಂದ, ಈ ಕಾಲದಲ್ಲಿ, ಸಾಮಾನ್ಯ ಜನರೂ, ಭಗವಂತನೇ ಬಂದು ಹೇಳಿದರೂ ಕೂಡ 'ಅವನು ಭಗವಂತ' ನೆಂದು ಭಾವಿಸುವುದಿಲ್ಲ. ಆದ್ದರಿಂದ, ಆಚಾರ್ಯ ರಾಗಿರುವವರು ಭಾಗವತದಂತಹ ಗ್ರಂಥಗಳನ್ನು ಹೇಳಿ ಜನರ ಮನಸ್ಸಿನಲ್ಲಿ ಒಂದು ಉತ್ತಮವಾದ ಮನೋಭಾವನೆ ಉಂಟುಮಾಡಬೇಕು. ಮೇಲೆ ಹೇಳಿದ ಭಗವತ್ಪಾದರ ಶ್ಲೋಕದಲ್ಲಿ —

'ಅಂಕೋಲಂ ನಿಜ ಬೀಜ ಸಂತತಿಃ' ಎಂದು ಮೊದಲು ಕಾಣುತ್ತದೆ. ಅಂಕೋಲವೆನ್ನುವುದು ಒಂದು ವೃಕ್ಷ. ಆ ವೃಕ್ಷದ ಸ್ವರೂಪವೇನೆಂದರೆ, ಬೀಜ ಬಂದರೆ ಆ ಮರಕ್ಕೆ ಹೋಗಿ ಹಾಗೆಯೇ ಹಿಡಿದುಕೊಂಡುಬಿಡುತ್ತದೆ. ಅದರಲ್ಲಿ ಸ್ವಲ್ಪ ಗೋಂದಿನಂತಿರುತ್ತದೆ. ಮರ ಒಂದು ಕೆಲಸವನ್ನಾದರೂ ಮಾಡುವುದಿಲ್ಲ. ಬೀಜ ಗಾಳಿಯ ಮೂಲಕ ತಾನಾಗಿಯೇ ಮರದ ಹತ್ತಿರ ಹೋಗುತ್ತದೆ. ಮತ್ತೆ ತಾನೇ ಮರವನ್ನು ಹಿಡಿದುಕೊಳ್ಳುತ್ತದೆ. ಅಷ್ಟೇ. ಅದೇ ರೀತಿ ಮೊಟ್ಟಮೊದಲು ಭಕ್ತನ ಭಾಗ್ಯ ವಿಶೇಷದಿಂದ ಅವನು ತಾನಾಗಿಯೇ ಹೋಗಿ ಭಗವಂತನನ್ನು ಹಿಡಿದುಕೊಳ್ಳುತ್ತಾನೆ ಎನ್ನುತ್ತಾರೆ. ಅವನ ಮನೋವೃತ್ತಿ ಎನ್ನುವುದು ಭಗವದಾಕಾರವಾಗಿ ಹೋಗುತ್ತದೆ. ಅನಂತರ 'ಅಯಸ್ಕಾಂತೋಪಲಂ ಸೂಚಿಕಾ' ಎಂದು ಹೇಳುತ್ತಾರೆ. ಭಗವಂತನಿಗೆ ಕರುಣೆ ಇದೆ. 'ನನ್ನ ಬಳಿಗೆ ಬಂದು ಆಶ್ರಯಿಸಿದ್ದಾನೆ. ಇವನನ್ನು ನಾನು ಅನುಗ್ರಹಿಸಬೇಕು' ಎಂದು ಭಗವಂತನಿಗೆ ಕರುಣೆ ಉಂಟಾಗುತ್ತದೆ. ಕರುಣೆ ಉಂಟಾದ ಮೇಲೆ ಭಗವಂತನ ಹತ್ತಿರ ಬಂದು ಸೇರಿದವನು ಮತ್ತೆ ಬಿಟ್ಟು ಹೋಗಬೇಕೆಂದು ಕೊಂಡರೂ ಬಿಟ್ಟು ಹೋಗ ಲಾಗುವುದಿಲ್ಲ. ಭಗವಂತನ ಲೀಲಾ ವಿಭೂತಿಗಳ ಮಹಿಮೆ ಏನೆಂದರೆ ಮೊದಲ ದಿವಸ ಭಾಗವತ ಗೋಷ್ಠಿಗೆ ಹೋಗಿ ಸೇರಿದರೆ ಮಾರನೇಯ ದಿನವೂ ಅದೇ ಗೋಷ್ಠಿಗೆ ಹೋಗಿ ಸೇರಬೇಕೆಂದು ತೋರುತ್ತದೆ. ಸಿನಿಮಾ

Sri Vidyabharathi Book Centre, Sringeri

 CC-O. In Public Domain. Digitized by eGangotri

ಒಂದು ದಿನ ಹೋಗಿ ನೋಡಿ ಹುಚ್ಚು ಹಿಡಿಯಿತು ಎಂದರೆ ಮತ್ತೆ ನಾಲ್ಕು ದಿನಗಳು ಆಗಲಿಲ್ಲವೆಂದರೆ ಸಾಲ ತೆಗೆದುಕೊಂಡೋ ಅಥವಾ ಮನೆಯಿಂದ ಕಳ್ಳತನ ಮಾಡಿಯೋ ಸಿನಿಮಾ ನೋಡುತ್ತಾನೆ. ಇದೇ ರೀತಿ ಭಗವದ್ವಿಷಯದಲ್ಲಿ ಹುಚ್ಚು ಹಿಡಿದು ಬಿಡುತ್ತದೆ ಎನ್ನುತ್ತಾರೆ. ಹೇಗೆಂದರೆ 'ಅಯಸ್ಕಾಂತೋಪಲಂ ಸೂಚಿಕಾ' ಅಯಸ್ಕಾಂತ ವೆನ್ನುವುದು ಕಬ್ಬಿಣವನ್ನು ತನ್ನೊಡನೆ ಹಿಡಿದುಕೊಳ್ಳುತ್ತದೆ. ಹಾಗೆ ಹಿಡಿದುಕೊಂಡ ಮೇಲೆ ಆ ಕಬ್ಬಿಣವನ್ನು ಎಳೆಯುವುದು ಕಷ್ಟ. ತಾನಾಗಿಯೇ ಅಯಸ್ಕಾಂತ ಬಿಟ್ಟು ಬಿಡುವುದಿಲ್ಲ. ಇನ್ನೊಬ್ಬರು ಬಲತ್ಕಾರವಾಗಿ ಅದನ್ನು ಹಿಡಿದು ಎಳೆದರೆ ಮಾತ್ರ ಕಬ್ಬಿಣ ಬೇರೆಯಾಗಿ ಬರಬಲ್ಲದು. ಆದ್ದರಿಂದ ಭಕ್ತನು ಭಗವಂತನ ಹತ್ತಿರ ಬಂದ ಮೇಲೆ ಭಗವಂತನು ಭಕ್ತನನ್ನು ಬಲವಾಗಿ ಹಿಡಿದು ಕೊಳ್ಳುವನು.

ಮತ್ತೆ 'ಸಾಧ್ವೀ ನೈಜವಿಭುಂ' ಹೇಗೆಂದರೆ, ಪತಿವ್ರತೆಯಾದ ಹೆಂಗಸು ಎಷ್ಟು ವಿಶ್ವಾಸದಿಂದ ಪತಿಯನ್ನು ಆರಾಧಿಸಿಕೊಂಡು ಬರುವಳೋ ಅದೇ ರೀತಿ ಪತಿವ್ರತೆಯಾಗಿರುವ ಸ್ತ್ರೀಯನ್ನು ಪತಿ ಎಷ್ಟು ವಿಶ್ವಾಸ ದಿಂದಲೂ, ಪ್ರೇಮದಿಂದಲೂ, ಕಾಣುತ್ತಾ ಬರುತ್ತಾನೋ, ಹಾಗೇಯೇ ಭಗವಂತನು ಭಕ್ತನನ್ನು ತನ್ನವನೆಂದುಕೊಳ್ಳುತ್ತಾನೆ. ಇವನೂ ಭಗವಂತನು ನನ್ನವನೆಂದುಕೊಳ್ಳುತ್ತಾನೆ. ಹೀಗೆ ಅನ್ಯೋನ್ಯವಾದ ಪ್ರೇಮದಿಂದ ಬಂಧ ಉಂಟಾಗುವುದು ಮೂರನೆಯ ಮೆಟ್ಟಲು ಎನ್ನುತ್ತಾರೆ.

ಅನಂತರ 'ಲತಾ ಕ್ಷಿತಿರುಹಂ' – ನಾಲ್ಕನೆಯ ಮೆಟ್ಟಲಲ್ಲಿ ಆಗುವುದು ಹೀಗೆ. ಭಗವಂತನು ಮರದಂತೆ ಆಶ್ರಯವಾಗಿರುವವನು. ಆ ಮರ ನ್ನಾಶ್ರಯಿಸಿದ ಬಳ್ಳಿಯಂತೆ ಮೇಲಕ್ಕೆ ಹೋಗುತ್ತಿರುವವನು ಭಕ್ತ. ಒಂದು ಮರಕ್ಕೆ ಉತ್ತಮವಾದ ಮಲ್ಲಿಗೆ ಬಳ್ಳಿ ಹಬ್ಬಿಕೊಂಡು ಹೋದರೆ ಆ ಮರಕ್ಕೆ ಎಷ್ಟು ಶೋಭೆ ಉಂಟಾಗುತ್ತದೆ! ಅದೇ ರೀತಿ ಭಕ್ತನಿಂದ ಭಗವಂತನಿಗೆ ಶೋಭೆ ಉಂಟಾಗುತ್ತದೆ. ಅದು ಎಂಥ ಶೋಭೆ ?

ಭಗವಂತನು ಭಕ್ತರನ್ನು ಅನುಗ್ರಹಿಸಲು ಅನೇಕ ರೂಪಗಳನ್ನು ಧರಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಅವಜಾನನ್ತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಮ್'।
'ಪರಂ ಭಾವಮಜಾನನ್ತೋ ಮಮ ಭೂತಮಹೇಶ್ವರಮ್'॥

ನಿರ್ಗುಣವಾದ ಪರವಸ್ತು ಹಲವು ವಿಧವಾಗಿ ದರ್ಶನವನ್ನು ಕೊಡುವುದರಿಂದ ಭಗವಂತನಿಗೇ ಹಿರಿಮೆಯುಂಟಾಗುತ್ತದೆ. ಭಕ್ತನಿಲ್ಲದಿದ್ದರೆ ಭಗವಂತನು ದರ್ಶನ ಕೊಡುವ ಅವಶ್ಯಕತೆ ಇಲ್ಲ. ದರ್ಶನ ಕೊಡುವ ಸಮಯದಲ್ಲಿ ಲೀಲೆಗಳನ್ನೆಲ್ಲಾ ತೋರಿಸಬೇಕಾಗುತ್ತದೆ. ಲೀಲೆಗಳನ್ನು ತೋರಿಸಲಿಲ್ಲವೆಂದರೆ ಸಾಮಾನ್ಯ ಜನರಿಗೆ ಭಗವಂತನ ಸ್ಮರಣೆ ಹೇಗಾಗಬೇಕು? ಆದ್ದರಿಂದ ಭಗವಂತನಿಗೆ ಭಕ್ತ ಒಂದು ಅಲಂಕಾರವಾಗಿದ್ದಾನೆಂದು ಹೇಳಿಬಿಟ್ಟರು. ಒಬ್ಬ ಪ್ರಹ್ಲಾದನು ಹುಟ್ಟದೆ ಇದ್ದಿದ್ದರೆ ಈ ನೃಸಿಂಹಾವತಾರ ಲೀಲೆ ನಡೆಯುತ್ತಿತ್ತೆ? ನಾವು ವಿಷ್ಣುವನ್ನು ವೈಕುಂಠ ವಾಸಿಯೆಂದು ಮಾತ್ರ ಹೇಳಿದ್ದೇವೆ ವಿನಾ ನೃಸಿಂಹರೂಪದಲ್ಲಿ ಪೂಜೆ ಮಾಡುತ್ತಿದ್ದೆವೋ? ಪ್ರಹ್ಲಾದನನ್ನು ಅನುಗ್ರಹಿಸುವುದಕ್ಕಾಗಿ ಭಗವಂತನು ಬಂದನು. ಅದರಿಂದ ನೃಸಿಂಹರೂಪದಲ್ಲಿ ಅವನನ್ನು ಆರಾಧಿಸುವೆವು. ಎಲ್ಲಾ ರೂಪಗಳು ಹೀಗೆಯೇ. ಕೃಷ್ಣಾವತಾರದಲ್ಲಿ ಪಂಚಪಾಂಡವರು ಹುಟ್ಟದೆ ಹೋಗಿದ್ದರೆ, ಅನುಗ್ರಹಿಸಲ್ಪಡಬೇಕಾದವರೇ ಇಲ್ಲದೆ ಹೋದರೆ ಕೃಷ್ಣಾವತಾರವಾಗಬೇಕಾದ ಆವಶ್ಯಕತೆ ಇಲ್ಲ. ಆದ್ದರಿಂದ ಭಗವಂತನು ಭಕ್ತನನ್ನು ಅನುಗ್ರಹಿಸಲು ಬರುವುದರಿಂದ, ಆ ಭಕ್ತನಿಂದ ಭಗವಂತನಿಗೆ ಒಂದು ಅಲಂಕಾರ ಉಂಟಾಗುತ್ತದೆ ಎನ್ನುತ್ತಾರೆ.

ಕೊನೆಯಲ್ಲಿ, 'ಸಿಂಧುಃ ಸರಿದ್ವಲ್ಲಭಮ್'. ಮೊದಲು ಹೇಳಿದ ಭಕ್ತನ ಮನಸ್ಸೆನ್ನುವ ಹೊಳೆ ಭಗವಂತನೆನ್ನುವ ಸಮುದ್ರದ ಕಡೆಗೆ ಹರಿದುಕೊಂಡೆ ಹೋಗುತ್ತದೆ. ಹೊಳೆ ಎಷ್ಟು ದೂರ ಹರಿದು ಹೋಗುತ್ತದೆ? ಸಮುದ್ರ ಸಿಕ್ಕುತ್ತಲೇ ಅದೂ ಸಮುದ್ರವಾಗಿಯೇ ಆಗಬೇಕು. ಅದೇ ರೀತಿ ಭಕ್ತನ ಈ ಮನೋಭಾವನೆ ಬರ - ಬರುತ್ತಾ ಭಗವತ್ಸ್ವರೂಪವಾಗಿ ಬಿಡುತ್ತದೆಂದು ಹೇಳಿದರು. ಆಗ ಮನಸ್ಸೆನ್ನುವುದು ಇರುವುದಿಲ್ಲ. ಬೇರೆ ಆತ್ಮನೂ ಇಲ್ಲ.

'ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ'

Sri Vidyabharathi Book Centre, Sringeri

CC-O. In Public Domain. Digitized by eGangotri

'ಜೀವ' ಎಂದರೆ ಬೇರೆ ಎಂದು ತಿಳಿಯಬೇಕಾಗಿಲ್ಲ. 'ಅವನು ನನ್ನ ಒಂದು ಅಂಶ. ನನ್ನ ಒಂದುಭಾಗ' ಎನ್ನುತ್ತಾನೆ ಭಗವಂತನು. 'ಭಾಗವಿದೆ' ಎಂದರೆ ಅದು ಹೋಗಿ ಸೇರುವವರೆಗೆ ಮಾತ್ರ ಭಾಗ. ಸೇರಿದ ಮೇಲೆ ಒಂದೇ. ಒಂದು ದೊಡ್ಡ ಕೊಳದಿಂದ ನೀರು ತೆಗೆದು ನಾವು ಪಾತ್ರೆಯಲ್ಲಿಟ್ಟರೆ ಅದು ಬೇರೆ, ಇದು ಬೇರೆ. ಮತ್ತೆ ನೀರು ಆ ಕೊಳಕ್ಕೆ ಬಿದ್ದು ಬಿಟ್ಟರೆ ಆ ರೀತಿಯಾದ ಬೇರೆ ತನ ಯಾವುದೂ ಇಲ್ಲ. ಬೇರೆ ಬೇರೆ ನೀರಾಗಿದ್ದುದು ಈಗ ಒಂದಾಗಿ ಸೇರಿ ಬಿಟ್ಟಿತು. ಹಾಗೆಯೇ ಭಗವದಾಕಾರವನ್ನು ಮನಸ್ಸು ಪಡೆದು ಬಿಟ್ಟಿತೆಂದರೆ ಆಗ ಜ್ಞಾನ ಉಂಟಾಗುತ್ತದೆ. ಅದನ್ನು ಗಮನಿಸಿಯೇ 'ಸಖ್ಯಂ ಆತ್ಮನಿವೇದನಂ' ಎಂದು ಪ್ರಹ್ಲಾದನು ಹೇಳಿದನು. ಆತ್ಮನಿವೇದನೆ ಎನ್ನುವುದು ಬಂದು ಬಿಟ್ಟರೆ ಜ್ಞಾನ ಉಂಟಾಗುತ್ತದೆ. ಇಂಥಹ ಪ್ರೇಮವಾದ ಆ ಭಕ್ತಿ ಬರ ಬರುತ್ತಾ ಜ್ಞಾನಮಾರ್ಗವನ್ನು ಅವಲಂಬಿಸುತ್ತದೆಂದು ಹೇಳಿದ್ದಾರೆ. ಭಕ್ತಿ ಮಾರ್ಗಕ್ಕೆ ಜ್ಞಾನಮಾರ್ಗಕ್ಕಿಂತ ಹೆಚ್ಚಾಗಿರುವ ವಿಶೇಷವೆಂದರೆ ಸಾಧನಾ ಕಾಲದಲ್ಲಿ ಸುಖದ ಅನುಭವ. ಜಾನ್ಞಮಾರ್ಗದಲ್ಲಿ ಅದು ಅಷ್ಟಾಗಿಲ್ಲ. ಭಕ್ತನಿಗೆ ಸಾಧನಾಕಾಲದಲ್ಲಿಯೂ ಸುಖಾನುಭವವಿದೆ ಎನ್ನುತ್ತಾರೆ. ಕೆಲವರು, ದೇವರನ್ನು ಉದ್ದೇಶಿಸಿ, 'ನಾನು ಹುಲ್ಲಾಗಿದ್ದರೆ ನಿನಗೆ ಸೇವೆ ಮಾಡುವ ಹಸುವಿಗೆ ಒಂದು ಹಿಡಿ ಹುಲ್ಲಾಗಿಬಿಡುವೆನು. ಒಂದು ಕಲ್ಲಾಗಿದ್ದರೆ ಮೆಟ್ಟಿಲು ಮೇಲೆ ಹತ್ತಿ ಭಗವಂತನ ದರ್ಶನಕ್ಕೆ ಹೋಗುವವರಿಗಾಗಿ ಮಾಡಲ್ಪಡುವ ಮೆಟ್ಟಿಲಾದರೆ ಜನ್ಮ ಸಾರ್ಥಕ' ಎನ್ನುತ್ತಾರೆ.

ಒಬ್ಬರು, 'ನಾನು ಇಷ್ಟು ದಿನಗಳೂ ಭಗವದ್ಭಕ್ತನಾಗಿದ್ದೆ. ಭಗವಂತನ ಆರಾಧನೆಗಾಗಿ ಎಲ್ಲವನ್ನೂ ವಿನಿಯೋಗಿಸಿ ಆಯಿತು. ಈಗ ಪ್ರಾಣ ಕೊಡುವ ಕಾಲ ಬಂದಿದೆ. ಈ ದೇಹ ಹೇಗೆ ಭಗವಂತನಿಗೆ ಉಪಯೋಗವಾಗುತ್ತದೆಂದು ಚಿಂತಿಸಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಚತ್ವಂ ತನುರೇಷು ಭೂತನಿವಹಾಃ ಸ್ವಾಂಶೇ
ವಿಶಂತು ಸ್ಫುಟಂ
ದಾತಾರಂ ಪ್ರಣಿಪತ್ಯ ಹಂತ ಶಿರಸಾ ತತ್ರಾಪಿ ಯಾಚೇ ವರಮ್ ।
ದತ್ವಾಪೀಷು ಪಯಃ ತದೀಯಮುಕುರೋ ಜ್ಯೋತಿಸ್ತದೀಯಾಂಕಣ
ವ್ಯೋಮ್ನಿ ವ್ಯೋಮ ತದೀಯ ವರ್ತ್ಮನಿ ಧರಾ ತತ್ತಾಲ
ವೃಂತೇಽನಿಲಃ ॥

ಎಂದು ಪ್ರಾರ್ಥಿಸಿದರು. 'ಈ ಶರೀರ ಪಂಚಭೂತಗಳಿಂದ ಏರ್ಪಡು ವುದು. ಸತ್ತಮೇಲೆ ಪಂಚಭೂತಗಳು ಏನಾಗುವುವು? ಈ ಶರೀರದಲ್ಲಿರುವ ಪೃಥ್ವಿಯ ಅಂಶ ದೊಡ್ಡ ಆಕಾಶದಲ್ಲಿ ಹೋಗಿ ಸೇರುವುದು. ಶರೀರ ದಲ್ಲಿರುವ ತೇಜೋ ಅಂಶ ತೇಜಸ್ಸಿನಲ್ಲಿ ಹೋಗಿ ಸೇರಿಬಿಡುವುದು. ಗಾಳಿಯ ಅಂಶ ಗಾಳಿಯಲ್ಲಿ ಹೋಗಿ ಸೇರುವುದು. ಸತ್ತಮೇಲೆ ಈ ಪಂಚಭೂತ ಗಳೆಲ್ಲ ಎಲ್ಲೋ ಹೋಗಿ ಸೇರುವುದು ಬೇಡ. ಕೃಷ್ಣಪರಮಾತ್ಮನು ಯಾವ ಭಾವಿಯಿಂದ ನೀರು ತೆಗೆದುಕೊಂಡು ಕುಡಿಯುತ್ತಾನೋ ಆ ಭಾವಿಯಲ್ಲಿ ನೀರಿನ ಅಂಶ ಹೋಗಿ ಸೇರಲಿ. ಭಗವಂತನು ಮುಖವನ್ನು ನೋಡುವು ದಕ್ಕಾಗಿ ಕನ್ನಡಿ ಹಿಡಿದು ನೋಡುತ್ತಾನೆ. ಈ ಕನ್ನಡಿಯಲ್ಲೇ ನನ್ನ ತೇಜೋಂಶ_ಪ್ರಕಾಶ ಅಂಶ ಸೇರಲಿ. ಭಗವಂತನು ತಿರುಗಾಡಲು ದೊಡ್ಡ ಮೈದಾನವಿದೆಯಂತೆ. ಆ ಮೈದಾನದಲ್ಲೇ ಆಕಾಶ ಅಂಶ ಹೋಗಿ ಸೇರಲಿ ಭಗವಂತನು ವೃಂದಾವನದಲ್ಲಿ ಸಂಚಾರ ಮಾಡುವಾಗ ಅವನಿಗೆ ಭೂಮಿ ಆವಶ್ಯಕವಾಗುತ್ತದೆ. (ಈ ಕಾಲದಂತೆ ವಿಮಾನದಲ್ಲಿ ಹೋಗುವುದಿಲ್ಲ. ಭೂಮಿಯಮೇಲೆ ಹೋಗಬೇಕಾಗುತ್ತದೆ.) ಆ ಭೂಮಿಯಲ್ಲಿ ಪೃಥ್ವಿಯ ಅಂಶ ಹೋಗಿ ಸೇರಲಿ. ಬಿಸಿಲು ಕಾಲದಲ್ಲಿ ಭಗವಂತನು ಬೀಸಣಿಗೆಯಲ್ಲಿ ಬೀಸಿ ಕೊಳ್ಳುವಾಗ ಆ ಗಾಳಿಯಲ್ಲಿ ನನ್ನಗಾಳಿ ಅಂಶ ಹೋಗಿ ಸೇರಲಿ. ನನ್ನ ಮನಸ್ಸು ಆತ್ಮ ಎರಡೂ ಭಗವಂತನಲ್ಲಿ ಸೇರಿಬಿಟ್ಟಿವೆ. ಪಂಚಭೂತಗಳಲ್ಲಿ ಸೇರುವ ನನ್ನ ಅಂಶಗಳೂ ಹೀಗೆ ಹೋಗಿ ಸೇರಿದರೆ ಅವನ ಸೇವೆ ಯಾವಾ ಗಲೂ ನಡೆಯುತ್ತಿರುತ್ತದೆ' ಎನ್ನುವುದು ಪ್ರಾರ್ಥನೆಯ ಭಾವ. ಭಗವಂತನ

Sri Vidyabharathi Book Centre, Sringeri

 CC-O. In Public Domain. Digitized by eGangotri

ಹತ್ತಿರ ಸೇವೆ ಮಾಡುವವರು ಅದರ ರುಚಿ ಎಂಥಹದೆಂಬುದನ್ನು ಹೇಳುವರು ಭಗವದ್ಭಕ್ತರ ಆನಂದಾನುಭವ ಎಲ್ಲೆಯಿಲ್ಲದ ಆನಂದಾನುಭವ. ಆದ್ದರಿಂದ ಎಲ್ಲರೂ ಆ ಭಕ್ತಿಮಾರ್ಗದಲ್ಲಿ ನಡೆಯಬೇಕು. ಮಾರ್ಗಗಳು ಮೂರು. ಯಾರಿಗೆ ವಿಶೇಷವಾದ ವೈರಾಗ್ಯ, ವಿವೇಕ ಮುಂತಾದವು ಇರುವುದಿಲ್ಲವೋ ಅಂಥಹವರು ಭಕ್ತಿಮಾರ್ಗದಲ್ಲಿ ಹೋಗಬಹುದೆಂದು ಹೇಳಿರುವೆವು. ಕರ್ಮ ಮಾರ್ಗದಲ್ಲಿ ಹೋಗುವುದಕ್ಕೆ ವಿಶೇಷವಾದ ಸಾಮರ್ಥ್ಯವಿರಬೇಕು. ಭಕ್ತಿಮಾರ್ಗದಲ್ಲಿ ಹೋಗುವುದಕ್ಕೆ ಯಾರಾದರೂ ಹಣವಂತನಾಗಿಯೋ, ವಿದ್ಯಾವಂತನಾಗಿಯೋ, ಬುದ್ಧಿಶಾಲಿಯಾಗಿಯೋ ಇರಬೇಕೆ ಎನ್ನುವುದಕ್ಕೆ–

'ವ್ಯಾಧಸ್ಯಾಚರಣಂ ಧ್ರುವಸ್ಯ ಚ ವಯಃ ವಿದ್ಯಾಗಜೇಂದ್ರಸ್ಯಕಾ।
ಕಾ ಜಾತಿರ್ವಿದುರಸ್ಯ ಯಾದವಪತೇರುಗ್ರಸ್ಯ ಕಿಂ ಪೌರುಷಮ್॥
ಕುಬ್ಜಾಯಾಃ ಕಮನೀಯರೂಪಮಧಿಕಂ ಕಿಂ ವಾ ಸುದಾಮ್ನೋ ಧನಂ।
ಭಕ್ತ್ಯಾ ತುಷ್ಯತಿ ಕೇವಲಂ ನ ತು ಗುಣೈಃ ಭಕ್ತಿಪ್ರಿಯೋ ಮಾಧವಃ॥

ಎಂದು ಉತ್ತರವಾಗುತ್ತದೆ. ಭಗವಂತನು ಎಲ್ಲ ರೀತಿಯ ಭಕ್ತರನ್ನು ಅನುಗ್ರಹಿಸುವುದುಂಟು. ಒಂದು ಕಥೆಯನ್ನು ನೋಡಿ ಅನಂತರ ಆ ಶ್ಲೋಕವನ್ನು ನೋಡೋಣ.

ಒಂದು ಕಾಲದಲ್ಲಿ ಒಂದು ಜಾಗದಲ್ಲಿ ನದಿ ಪ್ರವಾಹ ಉಂಟಾಯಿತು. ಆಗ ಆ ದೇಶದ ರಾಜನು, 'ಜನರೆಲ್ಲ ನೀರಿನಲ್ಲಿ ಒಂದೊಂದು ಜಾಗವಾಗಿ ಅಲ್ಲಲ್ಲಿ ಮಣ್ಣು ತುಂಬಿಬಿಡಿ' ಎಂದು ಹೇಳಿದನು. ಹೀಗೆ ಅವನು ಊರಿನಲ್ಲಿರುವವರಿಗೆಲ್ಲ ಕೆಲಸ ಕೊಟ್ಟಾಯಿತು. ಅಲ್ಲಿ ಒಬ್ಬ ಮುದುಕಿ ಇದ್ದಳು. ಅವಳ ಕೆಲಸ ದೋಸೆ ಮಾಡಿ ಅದನ್ನು ಮಾರಿ ಹಣ ಸಂಪಾದಿಸುವುದು. ಭಗವಂತನು ಆಗ ಒಂದು ಲೀಲೆ ಮಾಡಬೇಕೆಂದುಕೊಂಡನು. ಅವಳಿಗೆ ಗುದ್ದಲಿಯಂಥಹದನ್ನು ತೆಗೆದುಕೊಂಡು ಮಣ್ಣನ್ನು ಗೂಡೆಯಲ್ಲಿ ಹಾಕುವುದಕ್ಕೂ ಆಗುತ್ತಿರಲಿಲ್ಲ. ದೋಸೆ ಮಾಡಿ ಮಾರುವುದು ಮಾತ್ರ ಅವಳಿಗೆ ಸಾಧ್ಯ. ಭಗವಂತನೂ ಅವಳ ಬಳಿಗೆ ಬಂದು, 'ಏನಮ್ಮ, ನೀನು ಏನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲಸ ಮಾಡಲಿಲ್ಲವೇ? ಎಂದು ಕೇಳಿದನು. ಅದಕ್ಕೆ ಅವಳು, 'ನಾನೇನು ಮಾಡುವುದು? ಈ ದೋಸೆಯೆಲ್ಲಾ ಇಂದು ಮಾರದೇ ಇದ್ದರೆ ನಾನು ಜೀವಿಸಲಾಗದೆ ಕಷ್ಟ ಪಡಬೇಕು. ಆದರೆ ನಾನು ಹೋಗದೆಯೂ ಇರಲಾಗುವುದಿಲ್ಲ. ಅದು ರಾಜಾಜ್ಞೆ' ಎಂದಳು.ಭಗವಂತನು 'ಆ ಕೆಲಸವೆಲ್ಲ ನಾನು ಮಾಡುತ್ತೇನೆ. ನಿನ್ನ ದೋಸೆಗಳೆಲ್ಲ ಒಣಗಿರುವುದನ್ನು ಯಾರೂ ತೆಗೆದುಕೊಂಡು ಹೋಗುವುದಿಲ್ಲ. ಅದನ್ನು ನೀನು ನನಗೆ ಕೊಟ್ಟರೆ ನನ್ನ ಕೂಲಿಗೆ ಆಗುತ್ತೆ' ಎಂದನು. ಹೀಗೆ ಚಮತ್ಕಾರವಾಗಿ ಮಾತನಾಡುತ್ತಾ ಅವನು ಚೆನ್ನಾಗಿರುವ ದೋಸೆಗಳನ್ನು ತಿಂದು ಬಿಟ್ಟನು. ಮಧ್ಯಾಹ್ನವಾಯಿತು. ದೋಸೆಗಳೆಲ್ಲವನ್ನೂ ತಿನ್ನುವುದು ಆಯಿತು. ತಲೆಯ ಮೇಲೆ ಗೂಡೆ. ಕೈಯಲ್ಲಿ ಗುದ್ದಲಿ ಹಿಡಿದುಕೊಂಡಿದ್ದ ಅವನು ಬರುವವರೊಡನೆ ಮಾತನಾಡುತ್ತಿದ್ದನು. ಕೆಲಸವೇನೂ ಮಾಡಲ್ಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ನೋಡಿದರೆ ಒಂದೇ ಒಂದು ಕಡೆಯಿಂದ ಮಾತ್ರ ನೀರು ಬರುತ್ತಿರುವುದನ್ನು ಜನರು ಕಂಡರು. ರಾಜನಿಗೆ ಸಮಾಚಾರ ತಲುಪಿತು. ಎಲ್ಲರೂ ರಾಜನ ಬಳಿ, ಇವನು, ನಾವು ಯಾವುದಾದರೂ ಹೇಳಿದರೆ ಚಮತ್ಕಾರವಾಗಿ ಮಾತನಾಡಿ ಬಿಡುತ್ತಾನೆ. ಇವನ ಮುಖವನ್ನು ನೋಡಿದರೆ ನಮಗೆಲ್ಲ ಮೋಹ ಉಂಟಾಗುತ್ತದೆ ಇವನನ್ನು ಹೊಡೆಯಬೇಕೆನಿಸುತ್ತದೆ. ಆದರೆ ಕೈ ಬರುವುದಿಲ್ಲ. ತಾವೇ ಶಿಕ್ಷಿಸಬೇಕು? ಎಂದರು. ಇವನನ್ನು ನೋಡಿದ ರಾಜನು ಒಂದು ಏಟು ಹೊಡೆದನು. ಆದರೆ ಆ ಏಟು ಹೊಡೆದೊಡನೆ ಎಲ್ಲರಿಗೂ ಏಟು ಬಿದ್ದಿತು. ಎಲ್ಲರೂ ರಾಜನು ತಮ್ಮನ್ನೇ ಹೊಡೆದುಬಿಟ್ಟನೇನೋ ಎಂದು ಮುಟ್ಟಿ ಮುಟ್ಟಿ ನೋಡಿಕೊಂಡರು. ನೋಡಿದರೆ ರಾಜನಿಗೂ ಏಟು ಬಿದ್ದಿತು. ಇತರರ ಬಳಿ ರಾಜನು ಇಲ್ಲದಿದ್ದರೂ ಅವನು ಭಗವಂತನಿಗೆ ಹೊಡೆದ ಏಟು ಮಾತ್ರ ಎಲ್ಲರಿಗೂ ಬಿದ್ದು ಬಿಟ್ಟಿತು.

ಇದನ್ನು ಕುರಿತು ಚಮತ್ಕಾರವಾಗಿ, "ಭಗವಂತನಾದ ನೀನು ಎಲ್ಲರ ಆತ್ಮನಾಗಿದ್ದೀಯೆ, ನೀನು ಸರ್ವಾತ್ಮಕನೆಂದು ತೋರಿಸುವುದೂ ಬಹಳ ಸ್ವಾರಸ್ಯಕರವಾಗಿ ತೋರಿಸಿದೆ. ದೋಸೆ ತಿನ್ನುವ ವೇಳೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ ಸರ್ವಾತ್ಮಕತ್ವವನ್ನು ತೋರಿಸಬೇಕೆನಿಸಲಿಲ್ಲವೇ! ನೀನು ದೋಸೆ ತಿಂದು ಹಸಿವು ತೀರಿದೊಡನೆ ಎಲ್ಲರಿಗೂ ಹಸಿವು ತೀರಿದಂತೆ ತೋರಿಸಲಿಲ್ಲ ವಲ್ಲಾ! ಈಗ ಏಟು ಕೊಟ್ಟ ಸಮಯದಲ್ಲಿ ಮಾತ್ರ ಎಲ್ಲರಿಗೂ ಸರ್ವಾತ್ಮಕತ್ವ ವನ್ನು ತೋರಿಸುವೆಯಾ? ' ಎನ್ನುತ್ತಾರೆ. 'ಏಕೆಂದರೆ ಏಟು ಬಿದ್ದರೇನೇ ಭಗವಂತನ ನೆನಪು ಬರುತ್ತದೆ. ಹಸಿವು ಉಂಟಾಗಲಿಲ್ಲವೆಂದರೆ ಯಾರೂ ಹಸಿವಾಗಲಿಲ್ಲವೆಂದು ಚಿಂತಿಸುವುದಿಲ್ಲ. ಆದರೆ ಏಟು ಬಿದ್ದರೆ, 'ಅಯ್ಯೋ! ಏನು ಪ್ರಾರಬ್ಧ, ಏಟು ಬಿದ್ದು ಬಿಟ್ಟಿತು. ! ' ಎಂದು ನಿನ್ನನ್ನು ಎಲ್ಲರೂ ಸ್ಮರಿಸುವುದಕ್ಕಾಗಿ ನಿನ್ನ ಸರ್ವಾತ್ಮಕತ್ವವನ್ನು ಈ ರೀತಿ ನೀನು ತೋರಿಸಿದೆ!' ಎಂದು ಪರಮ ಭಕ್ತರಾದ ನೀಲಕಂಠದೀಕ್ಷಿತರು ಹೇಳಿದರು. ಆದ್ದರಿಂದ ಭಗವಂತನು ಸರ್ವತ್ರ ಎಲ್ಲರನ್ನೂ ನೋಡುತ್ತಿದ್ದಾನೆ. ಆ ಮುದುಕಿಗೆ ಅವನು ಒಬ್ಬ ಕೂಲಿಯವನಾಗಿ ದರ್ಶನವನ್ನು ಕೊಟ್ಟನು. ಇವೆಲ್ಲಾ ಪುರಾಣಗಳಲ್ಲಿ ಇರುವವೇ ಆಗಿವೆ.

ನಾನು ಮೊದಲು ಹೇಳಿದ ಶ್ಲೋಕದಲ್ಲಿ ಮೊದಲು 'ವ್ಯಾಧಸ್ಯಾ ಚರಣಂ ' ಎಂದಿದೆ. ಧರ್ಮವ್ಯಾಧನೆಂಬುವನು ಒಬ್ಬನಿದ್ದನು. ಅವನು ಬೇಡರ ಕುಲದಲ್ಲಿ ಹುಟ್ಟಿದವನಾದರೂ ಅವನಿಗೆ ಭಗವತ್ಸಾಕ್ಷಾತ್ಕಾರ ವಾಯಿತು. ಆದ್ದರಿಂದಲೇ ಅವನಿಗೆ ಧರ್ಮವ್ಯಾಧನೆಂದು ಹೆಸರೇ ಬಂದಿತು. ಧರ್ಮವ್ಯಾಧನಿಗೆ ಆಚಾರ ಒಂದೂ ವಿಶೇಷವಾಗಿ ಇರಲಿಲ್ಲ. ಆದರೂ ಅವನಿಗೆ ಭಗವಂತನ ದಯೆ ಲಭಿಸಿತು. ಇದರಿಂದ ವಿಶೇಷವಾದ ಆಚಾರ ವಿದ್ದರೇ ಮಾತ್ರ ಭಗವಂತನಲ್ಲಿ ಭಕ್ತಿ ಇರಬೇಕೆಂದಿಲ್ಲವೆಂದು ತಿಳಿಯುವುದು.

ಅನಂತರ 'ಧ್ರುವಸ್ಯ ಚ ವಯಃ ' ಧ್ರುವನು ಒಬ್ಬ ಚಿಕ್ಕ ಹುಡುಗ. ಅವನಿಗೆ ಎರಡು ವರ್ಷಗಳು ಕೂಡ ಆಗಿರಲಿಲ್ಲ. ಅಂಥಹವನು ಯಾವುದೋ ಒಂದು ಸಿಂಹಾಸನ ಬೇಕೆಂದು ತಪಸ್ಸು ಮಾಡಿದನು. ಅವನಿಗೆ ಭಗವಂತನು ಮೇಲಾದ ಶಾಶ್ವತವಾದ ಉತ್ತಮ ಸ್ಥಾನವನ್ನು ಕೊಟ್ಟನು.

'ವಿದ್ಯಾ ಗಜೇಂದ್ರಸ್ಯಕಾ ' – ಗಜೇಂದ್ರನಿಗೆ ಭಗವಂತನು ವೈಕುಂಠ ಸಾಮ್ರಾಜ್ಯವನ್ನು ಕೊಟ್ಟನು. ಬುದ್ಧಿಯಲ್ಲಿ ಅವನು ಕೆಳಮಟ್ಟದ ಬುದ್ಧಿ

Sri Vidyabharathi Book Centre, Sringeri

CC-O. In Public Domain. Digitized by eGangotri

ವುಳ್ಳ ಮೊಸಳೆಯೊಡನೆ ತನ್ನ ಬಲವನ್ನೆಲ್ಲಾ ಪ್ರಯೋಗಿಸಿದರೂ ಉಪ ಯೋಗವಾಗಲಿಲ್ಲ. ಒಡನೆ ಒಂದು ಕಮಲವನ್ನು ತೆಗೆದುಕೊಂಡು ಭಗವಂತ ನಿಗೆ ಸಮರ್ಪಿಸಿ, 'ನೀನೇ ನನ್ನನು ಕಾಪಾಡಬೇಕು' ಎಂದನು. ಒಡನೆ ಭಗವಂತನು ವೈಕುಂಠವೆಲ್ಲಿದೆ, ಲಕ್ಷ್ಮಿ ಎಲ್ಲಿದ್ದಾಳೆ ಎನ್ನುವುದನ್ನು ಒಂದನ್ನೂ ಗಮನಿಸದೆ ಒಡನೆ ಬಂದು ಕಾಪಾಡಿದನು.

'ಕಾ ಜಾತಿರ್ವಿದುರಸ್ಯ' – ವಿದುರನು ಒಮ್ಮೆ ಭಗವಂತನನ್ನು ತನ್ನ ಮನೆಗೆ ಸ್ವಾಗತಿಸಿದನು. ಭಗವಂತನು ದುರ್ಯೋಧನನ ಮನೆಗೆ ಹೋಗುವ ದಾರಿಯಲ್ಲಿ ವಿದುರನ ಮನೆಗೆ ಹೋಗಿ ಅಲ್ಲಿ ಉಪಚಾರವನ್ನು ಸ್ವೀಕರಿಸಿ ದನು. ಇತರರೆಲ್ಲರನ್ನೂ ಬಿಟ್ಟು ಭಗವಂತನು ವಿದುರನ ಮನೆಗೆ ಹೋದ ಕಾರಣವೇನೆಂದರೆ ವಿದುರನ ವಿಷಯವಾಗಿ ಭಗವಂತನಿಗೆ ಪರಮ ಪ್ರೇಮವಿದ್ದಿತು.

'ಯಾದವಪತೇರುಗ್ರಸ್ಯ ಕಿಂ ಪೌರುಷಮ್' – ಉಗ್ರಸೇನನು ಯಾದವರ ಅರಸನಾಗಿದ್ದನು. ಆದರೆ ಅವನ ಮಗನಾದ ಕಂಸನು ಅವನನ್ನು ಬಂಧಿಸಿದನು. ಹೀಗಿದ್ದಾಗ ಆ ಉಗ್ರಸೇನನಿಗೆ ಎಷ್ಟು ಶೂರತ್ವ ವಿರಬೇಕೆಂದು ನಾವೇ ಪರಿಗಣಿಸಬಹುದು. ಹಾಗಿದ್ದರೂ ಭಗವಂತನು ಅವನನ್ನು ಅನುಗ್ರಹಿಸಿನು.

'ಕುಬ್ಜಾಯಾಃ ಕಮನೀಯ ರೂಪಮಧಿಕಮ್' – ಕುಬ್ಜೆ ಎನ್ನುವ ವಳಿಗೆ ಸೌಂದರ್ಯವೇ ಇರಲಿಲ್ಲ. ಆದರೂ ಅವಳ ಸೇವೆಯನ್ನು ಕಂಡು ತೃಪ್ತಿಪಟ್ಟ ಕೃಷ್ಣಪರಮಾತ್ಮನು ಅವಳನ್ನು ಅನುಗ್ರಹಿಸಿ ಅವಳ ಶರೀರ ದೋಷವನ್ನು ದೂರ ಮಾಡಿದನು.

'ಕಿಂ ವಾ ಸುದಾಮ್ನೋ ಧನಂ'– ಗುರುಕುಲದಲ್ಲಿ ಕೃಷ್ಣನ ಸ್ನೇಹಿತ ನಾಗಿದ್ದವನು ಸುದಾಮ. ತರುವಾಯ ಪರಮ ದರಿದ್ರನಾದ ಅವನು ತನ್ನ ಹೆಂಡತಿಯ ಆಸೆಗಳಿಗೆ ಒಳಪಟ್ಟು ಕೃಷ್ಣನ ಹತ್ತಿರ ಹಣ ಪಡೆಯಲು ಹೋದನು. ಕೃಷ್ಣನು ಪ್ರೇಮದಿಂದ ಅವನು ಕೊಟ್ಟ ಅವಲಕ್ಕಿಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವೀಕರಿಸಿ ಅವಿಂತ ಧನವನ್ನು ಆಶೀರ್ವದಿಸಿದನು. ಇದರಿಂದ ಹಣವಂತನೇ ಭಕ್ತ ಮಾರ್ಗದಲ್ಲಿ ಹೋಗಬೇಕೆಂದಿಲ್ಲವೆಂದು ತಿಳಿಯುತ್ತದೆ. ಹಾಗಾದರೆ ಭಗವಂತನಿಗೆ ಮುಖ್ಯವಾಗಿ ಬೇಕಾದುದು ಏನು ?

'ಭಕ್ತ್ಯಾ ತುಷ್ಯತಿ ಕೇವಲಂ ನ ತು ಗುಣೈಃ ಭಕ್ತಿಪ್ರಿಯೋ ಮಾಧವಃ' – ಭಕ್ತನ ಅಂತಃಕರಣ ಶುದ್ಧವಾಗಿದೆಯೇ ಇಲ್ಲವೇ ಎನ್ನುವುದನ್ನೇ ಅವನು ನೋಡುತ್ತಾನೆ. ಭಕ್ತನ ಅಂತಃಕರಣ ಶುದ್ಧವಾಗಿದ್ದರೆ ಅವನ ಜಾತಿಯಾಗಲಿ, ಕುಲವಾಗಲಿ, ಗೋತ್ರವಾಗಲಿ, ಐಶ್ವರ್ಯವಾಗಲಿ ಯಾವುದನ್ನೂ ನೋಡುವುದಿಲ್ಲ. ಆದ್ದರಿಂದ ಎಲ್ಲರೂ ಸುಲಭವಾಗಿ ಆರಾಧಿಸಿ ಮನುಷ್ಯ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಲು ಮುಖ್ಯವಾಗಿರುವಂಥಹದು ಭಕ್ತಿ ಮಾರ್ಗವೇ ಎಂದು ಹಿಂದಿನವರು ಹೇಳಿದ್ದಾರೆ. ಆದರೆ ಈ ಕಾಲದಲ್ಲಿ ಕೆಲವರಿಗೆ ಒಂದು ದೃಢವಾದ ಮನೋಭಾವನೆ ಇದೆ. ಅದು ಏನೆಂದರೆ –

'ಅಪಿ ಚೇತ್ ಸುದುರಾಚಾರಃ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಕ್ ವ್ಯವಸಿತೋ ಹಿ ಸಃ ॥'

ಎಂದಲ್ಲವೇ ಭಗವಂತನು ಹೇಳಿದ್ದಾನೆ.

'ಕೆಟ್ಟ ಆಚಾರವಂತನಾದರೂ ನನ್ನನ್ನು ತೀವ್ರವಾಗಿ ಭಕ್ತಿಯಿಂದ ಆರಾಧಿಸಿದರೆ ಅವನನ್ನು ಸಾಧುವೆಂದು ತಿಳಿಯಬೇಕು. ಏಕೆಂದರೆ ನನ್ನನ್ನು ಆರಾಧಿಸಬೇಕೆಂಬ ಒಳ್ಳೆಯ ನಿರ್ಧಾರಕ್ಕೆ ಬಂದಿದ್ದಾನೆ' – ಇದು ಶ್ಲೋಕದ ತಾತ್ಪರ್ಯ. ಇದನ್ನು ಇಟ್ಟುಕೊಂಡು 'ದುರಾಚಾರವಂತನಾದರೂ ಕೂಡ ಭಗವದ್ಭಕ್ತನೆಂದು ಬೋರ್ಡು ಹಾಕಿಕೊಂಡು ಬಿಟ್ಟರೆ ಅವನು ಯಾವಾಗಲೂ ಯೋಗ್ಯನೆಂದೇ ಕೆಲವರು ನಿರ್ಧಾರಕ್ಕೆ ಬಂದು ಬಿಟ್ಟಿದ್ದಾರೆ. ಇದು ಸರಿಯಾದ ತೀರ್ಮಾನವಲ್ಲ.

ಈ ವಿಷಯದ ಬಗ್ಗೆ ಸುರೇಶ್ವರರು —

'ಬುದ್ಧಾದ್ವೈತ ಸತ್ತತ್ತ್ವಸ್ಯ ಯಥೇಷ್ಟಾಚರಣಂ ಯದಿ ।
ಶುನಾಂ ತತ್ತ್ವದೃಶಾಂ ಚೈವ ಕೋ ಭೇದೋಽಶುಚಿಭಕ್ಷಣೇ ॥'

ಎಂದು ಹೇಳಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದ್ವೈತ ತತ್ತ್ವವನ್ನು ತಿಳಿಸಿದವನು ಹೇಗೆ ಬೇಕಾದರೂ ಜೀವನವನ್ನು ನಡೆಸಿದರೆ ಅವನಿಗೂ ನಾಯಿಗೂ ಅಶುದ್ಧವಾದುದನ್ನು ತೆಗೆದುಕೊಳ್ಳುವುದರಲ್ಲಿ ವ್ಯತ್ಯಾಸವೇನೆಂದು ಕೇಳುತ್ತಾರೆ. ನಾಯಿಗೆ ಲೋಕಜ್ಞಾನವಿರುವುದಿಲ್ಲ. ಈ ಜ್ಞಾನಿಗೆ ಲೋಕ ಬಿಟ್ಟು ಹೋಗಿದೆ. ಆದರೆ ಜ್ಞಾನ ಉಂಟಾಗುವುದಕ್ಕೆ ಮುಂಚೆ ಬಹಳ ಕಾಲ ಉತ್ತಮವಾದ ದಾರಿಯಲ್ಲಿ ಜ್ಞಾನಿ ಹೋಗುತ್ತಿದ್ದುದರಿಂದ ಯಾವಾಗಲೂ ಅವನು ಶಾಸ್ತ್ರ ಮಾರ್ಗವನ್ನು ಬಿಟ್ಟು ಹೋಗುವುದಿಲ್ಲ; ಹಾಗೆ ಜೀವನವನ್ನು ನಡೆಸುವುದರಿಂದ ಯಾವ ವಿಧವಾದ ಪ್ರಯೋಜನವೂ ಅವನಿಗೆ ಇಲ್ಲದಿದ್ದರೂ ಲೋಕದ ಕಲ್ಯಾಣಕ್ಕಾಗಿ ಹಾಗೆ ನಡೆದುಕೊಂಡು ಬರುತ್ತಾನೆ. ಈ ವಿಷಯವನ್ನು ಭಗವಂತನೂ ಗೀತೆಯಲ್ಲಿ ಸ್ಪಷ್ಟಪಡಿಸಿದ್ದಾನೆ. ಕೆಟ್ಟ ಆಚಾರವುಳ್ಳ ಭಕ್ತನನ್ನು ಸಾಧುವೆಂದು ತಿಳಿಯಬೇಕೆನ್ನುವ ಭಗವಂತನ ಅಭಿಪ್ರಾಯವೇನೆಂಬುದನ್ನು ಗಮನಿಸಬೇಕು. ಅವನು 'ಅಪಿ ಚೇತ್ ಸುದುರಾಚಾರಃ' ಎಂದು ಮಾತ್ರ ಹೇಳಿದ್ದಾನೆ. ಇದರಿಂದ 'ಕೆಟ್ಟ ಆಚಾರ ಒಂದು ವೇಳೆ ಇದ್ದರೂ' ಎಂದು ಮಾತ್ರ ತಿಳಿಯಬೇಕು. ಇದನ್ನು ಬಿಟ್ಟು ಭಗವಂತನು ದುರಾಚಾರಕ್ಕೆ ಅನುಮತಿ ನೀಡಿದ್ದಾನೆಂದು ತಿಳಿದರೆ ಒಂದು ವಿಧವಾದ ಒಳ್ಳೆಯ ಫಲವನ್ನು ಪಡೆಯಲಾಗುವುದಿಲ್ಲ ಏಕೆಂದರೆ ಭಗವಂತನ ನಾಮಸ್ಮರಣೆ ಮಾಡುವಾಗ ಹತ್ತು ವಿಧವಾದ ಅಪರಾಧಗಳಾಗಿರಬಹುದೆಂದು ಒಂದು ಕಡೆ ಹೇಳಿದ್ದಾರೆ (ಒಳ್ಳೆಯವರ ಬಗ್ಗೆ ತಪ್ಪನ್ನು ಹೇಳುವುದು, ದುಷ್ಟರ ಬಳಿ ನಾಮ ಮಹಿಮೆಯನ್ನು ಕುರಿತು ಹೇಳುವುದು, ಶಿವನೂ ವಿಷ್ಣುವೂ ಬೇರೆಯೆಂದು ತಿಳಿಯುವುದು, ವೇದ – ಶಾಸ್ತ್ರ – ಗುರುವಿನ ಮಾತು ಮುಂತಾದವುಗಳಲ್ಲಿ ನಂಬಿಕೆ ಇಲ್ಲದೆ ಇರುವುದು, ಭಗವಂತನ ಹೆಸರುಗಳು ನಿಜವಾಗಿಯೂ ಶಕ್ತಿ ಇರುವುದಾಗಿ ಇಲ್ಲದಿದ್ದರೂ ಹಾಗೆ ಕಲ್ಪಿಸಲ್ಪಟ್ಟವೆಂದು ಭ್ರಮೆಯಿಂದಿರುವುದು, ನಾಮವಿದೆಯೆನ್ನುವ ಧೈರ್ಯದಿಂದ ಮಾಡಬಾರದ ಕೆಲಸಗಳನ್ನು ಮಾಡುವುದು, ವಿಹಿತ ಕರ್ಮಗಳನ್ನು ಮಾಡದೆ ಇರುವುದು, ಇತರ ಧರ್ಮಗಳೊಡನೆ ನಾಮವನ್ನು ಸಮವಾಗಿ ಪರಿಗಣಿಸುವುದು ಇವು ಹತ್ತು ವಿಧವಾದ ಅಪರಾಧಗಳು). ಆ ಅಪರಾಧಗಳು ಯಾವುವೂ ಇಲ್ಲದಿದ್ದರೆ ಮಾತ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಮವೆನ್ನುವುದು ಫಲಿಸುತ್ತದೆ. ಬೆಂಕಿ ತಿಳಿದೂ ಮುಟ್ಟಿದರೂ ಸುಡುತ್ತದೆ, ತಿಳಿಯದೆ ಮುಟ್ಟಿದರೂ ಸುಡುತ್ತದೆ. ಅದೇ ರೀತಿ, ನಾಮವೆನ್ನುವುದು ಪಾಪಕ್ಷಯ ಮಾಡುತ್ತದೆಂದು ತಿಳಿದು ಜಪಿಸಿದರೂ ಹಾಗಾಗುತ್ತದೆ, ತಿಳಿಯದೆ ಜಪಿಸಿದರೂ ಹಾಗಾಗುತ್ತದೆ. ಹೀಗಿದ್ದರೂ ಪಾಪಕ್ಷಯ ಮಾಡುವ ಶಕ್ತಿ ನಾಮಕ್ಕಿದೆಯೆಂದು ಕೊಂಡು ಪಾಪವನ್ನು ಮಾಡುವುದೇ ಕೆಲಸವಾಗಿಟ್ಟು ಕೊಂಡರೆ ಆಗ ಆ ನಾಮ ಅವನನ್ನು ಬಿಟ್ಟು ಬಿಡುತ್ತದೆ. ಏಕೆಂದರೆ, 'ಇವನಿಂದ ಪ್ರಪಂಚವೇ ಹಾಳಾಗುತ್ತದೆ. ಪ್ರಪಂಚದ ಕ್ಷೇಮಕ್ಕಾಗಿ ನಾವು ಈ ನಾಮಕ್ಕೆ ಪ್ರಭಾವವನ್ನು ನೀಡಿದರೆ' ಪ್ರಪಂಚವನ್ನು ಕೆಡಿಸಲು ನೀನು ಈ ನಾಮವನ್ನು ಉಪಯೋಗಪಡಿಸುತ್ತಾ ಬಂದೆ ಎಂದರೆ ನಿನಗೆ ಆ ನಾಮದಿಂದ ಉಂಟಾಗುವ ಪ್ರಭಾವವೇ ಇಲ್ಲ' ಎಂದು ಭಗವಂತನೇ ಶಾಪವನ್ನು ಕೊಟ್ಟು ಬಿಡುತ್ತಾನೆ. ಆದ್ದರಿಂದ ನಾವು ಭಗವಂತನ ನಾಮಸ್ಮರಣೆ, ಈಶ್ವರಾರಾಧನೆ ಮುಂತಾದವುಗಳನ್ನು ಮಾಡುತ್ತಾ ಇದ್ದು ಶಾಸ್ತ್ರವು ಹೇಳುವ ದಾರಿಯಲ್ಲಿ ನಡೆದುಕೊಂಡು ಬಂದರೆ ನಮ್ಮ ಬಾಳಿನಲ್ಲಿ ಒಂದೂ ವಿಧವಾದ ಕೊರತೆ ಇರುವುದಿಲ್ಲ. ಈ ಭಕ್ತಿಗೆ ಯಾರು ಅಧಿಕಾರಿ, ಯಾರು ಅಧಿಕಾರಿಯಲ್ಲ ಎಂದರೆ ಎಲ್ಲಾರೂ ಅಧಿಕಾರಿಗಳೇ. ಅಧಿಕಾರಿಗಳಾದಮೇಲೆ ಭಗವಂತನು ಹೇಳಿದ ರೀತಿಯಲ್ಲಿ ನಡೆಯುತ್ತಾ ಪರಂಪರೆಯಾಗಿ ನಮಗೆ ತಿಳಿದುಬಂದ ದಾರಿಯಲ್ಲಿ ಹೋಗಿ ಭಗವಂತನ ಕಟಾಕ್ಷವನ್ನು ಸಂಪಾದಿಸಬೇಕು

Sri Vidyabharathi Book Centre, Sringeri

CC-O. In Public Domain. Digitized by eGangotri

೩ ಶ್ರೀ ಶಂಕರ ಭಗವತ್ಪಾದಾಚಾರ್ಯರು

ಅನಾದಿಯಿಂದ ಮಾನವನ ಆಧ್ಯಾತ್ಮಿಕ, ಭೌತಿಕ ಪ್ರಯೋಜನಕ್ಕಾಗಿ ಈಶ್ವರ ನಿಶ್ವಾಸರೂಪವಾದ ವೇದಗಳಿವೆ. ವೇದಗಳ ಆಧಾರದ ಮೇಲೆ ಸ್ಮೃತಿಗಳು ಬೆಳಕಿಗೆ ಬಂದುವು. ಅನಾದಿಯಾಗಿ ಎಂದರೆ ಮಾನವನ ಅವತರಣ ಕಾಲದಿಂದಲೂ ಎಂದು ಭಾವ. ಶಾಸ್ತ್ರಗಳು, ಸಂಪ್ರದಾಯ ನಮಗೆ ತಿಳಿಸುವುದರ ಪ್ರಕಾರ ನಮ್ಮ ಅಭ್ಯುನ್ನತಿಗಾಗಿ ಈಶ್ವರನು ನಮಗೆ ವೇದಗಳನ್ನು ನೀಡಿದನು. ವೇದಗಳು ನಾವು ಅನುಷ್ಠಾನ ಮಾಡಬೇಕಾದ ಕರ್ಮಗಳನ್ನು ತಿಳಿಸುತ್ತವೆ. ಜಗತ್ತಿನ ಸ್ಥಿತಿಯನ್ನು ನಿಯಮಿಸುವ ಶಾಸನಗಳನ್ನು ಉಪಾಸಿಸಲು ಅವು ಹೇಳುತ್ತಿವೆ. ಪ್ರಪಂಚದ ಸೃಷ್ಟಿಯನ್ನು ಮಾಡಿದವನ ಬಗ್ಗೆ ಯಥಾರ್ಥಜ್ಞಾನವನ್ನು ಅವು ತಿಳಿಸುತ್ತವೆ. ಭಿನ್ನ ಭಿನ್ನ ಸ್ಥಳಗಳಲ್ಲಿ ಈ ಕರ್ಮ, ಉಪಾಸನೆ ಮತ್ತು ಜ್ಞಾನದ ಪ್ರಾಮುಖ್ಯ ಹೇಳಲಾಗಿದೆ. ಒಂದರ ಪ್ರಾಮುಖ್ಯವನ್ನು ಕುರಿತು ಹೇಳುವಾಗ ಉಳಿದ ಎರಡರ ಪ್ರಾಮುಖ್ಯವನು ಹೇಳುವಹಾಗಿಲ್ಲ.

ಭೌತಿಕ ಸುಖಾದಿಗಳು, ಐಶ್ವರ್ಯಾದಿಗಳು ಬೇಕೆನ್ನುವವನು ಕರ್ಮಗಳನ್ನೂ ಉಪಾಸನೆಯನ್ನೂ ಅವಲಂಬಿಸಬೇಕು. ಆದರೆ ಜ್ಞಾನ ಸರ್ವೋತ್ತಮವಾದುದು. ಕರ್ಮ-ಉಪಾಸನೆಗಳನ್ನು ಸೋಪಾನವಾಗಿ ಉಪಯೋಗಿಸುವುದರಿಂದಲೇ ಜ್ಞಾನವನ್ನು ಪಡೆಯಲು ಸಾಧ್ಯವಾಗುವುದು. ಕರ್ಮೋಪಾಸನೆಯಲ್ಲಿಯೇ ನಿಲ್ಲುವವನಿಗೆ ಜ್ಞಾನ ಲಭಿಸುವುದಿಲ್ಲ. ಅನೇಕ ಶತಾಬ್ದಗಳವರಗೆ ಕರ್ಮೋಪಾಸನೆಗಳಿಗೆ ಪ್ರಾಮುಖ್ಯ ಕೊಡಲಾಗಿತ್ತು. ಜ್ಞಾನಹೇತುವಾದ ಶ್ರವಣ, ಮನನ, ನಿಧಿಧ್ಯಾಸಗಳನ್ನು ಮರೆತಂತಾಯಿತು. ಜನರು ಯಾಂತ್ರಿಕವಾದ ಬಾಳಿಗೆ ಅಭ್ಯಸ್ತರಾದರು. ತಮ್ಮ ತಾರ್ಕಿಕ ಲಕ್ಷ್ಯದಿಂದ ಶ್ರೇಯಸ್ಸನ್ನು ಸಾಧಿಸಬಹುದೆಂದು ಭಾವಿಸಿದರು. ಆದರಿಂದಾಗಿ ಮಾನವನಿರ್ಮಿತವಾದ ವೇದದ್ದೂರವಾದ ಮತಗಳು ಪ್ರಾದುರ್ಭವಿಸಿದುವು. ಇದಕ್ಕೆ ಅನೇಕ ಕಾರಣಗಳಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಭಕ್ಷ್ಯಾದ್ಯನಿಯಮ ಇತಿ ರಾಗಿಣಃ ಸ್ವೇಚ್ಛಯಾ ದಾರಪರಿಗ್ರಹ ಇತಿ ಕುತರ್ಕಾಭ್ಯಾಸಿನಃ ಕರ್ಮಲಾಘವಮಿತ್ಯಲಸಾಃ, ಇತಃ ಪತಿತಾನಾಮಪ್ಯಸ್ಯಾನುಪ್ರವೇಶ ಇತಿಲೀನನ್ಯಗತಿಕಾಃ ।

ಇಚ್ಛೆಗಳಿರುವವರು ಮತಾಂತರವನ್ನು ಮಾಡಿಕೊಳ್ಳಲು ಕಾರಣ ಆಹಾರ ವಿಷಯವಾದ ಸ್ವಾತಂತ್ರ್ಯ. ಕುತರ್ಕ ಮಾಡುವವರ ಮತಾಂತರಕ್ಕೆ ಕಾರಣ ದಾನಪರಿಗ್ರಹಣದಲ್ಲಿ ಸ್ವೇಚ್ಛೆ. ಸೋಮಾರಿಗಳ ಮತಾಂತರಕ್ಕೆ ಕಾರಣ ಕರ್ಮಭಾರವಿಲ್ಲದೆ ಹೋದುದು. ಅನನ್ಯಗತಿಕರ ಮತಾಂತರಕ್ಕೆ ಕಾರಣ ಪತಿತರಿಗೆ ಕೂಡ ಪ್ರವೇಶವಿದೆ ಎನ್ನುವುದು.

ಈ ಕಾರಣಗಳಿಗಾಗಿ ಜನರು ತಪ್ಪು ದಾರಿಯನ್ನು ಹಿಡಿದರು. ಪ್ರತಿಯೊಬ್ಬರೂ ತಮಗೆ ತೋಚಿದಂತೆ ತೀರ್ಮಾನ ಮಾಡಿದರೆ ಪ್ರಮಾಣವಾದ ನಿರ್ಣಯನ್ನು ಮಾಡುವುದಾದರೂ ಹೇಗೆ ?

'ಕೈಶ್ಚಿದಭಿಯುಕ್ತೈರ್ಯತ್ನೇನೋತ್ಪ್ರೇಕ್ಷಿತಾಸ್ತರ್ಕಾ
ಅಭಿಯುಕ್ತತರೈರನ್ಯೈರಾಭಾಸ್ಯಮಾನಾ ದೃಶ್ಯಂತೇ ॥'

ಕೆಲವರು ಬುದ್ಧಿವಂತರು ತಮ್ಮ ಬುದ್ಧಿಯ ಮೂಲಕ ಯಾವುದನ್ನು ಸರಿಯೆಂದು ತೋರಿಸಿದರೋ ಅದನ್ನೇ ಹೆಚ್ಚು ಬುದ್ಧಿವಂತರು ತಪ್ಪೆಂದು ತೋರಿಸುತ್ತಿದ್ದರು.

ಮುಖ್ಯವಾಗಿ ನಾವು ಗಮನಿಸಬೇಕಾದುದು — ಭಗವಂತನಿದ್ದಾನೆ. ಅವನು ಸೃಷ್ಟಿ ಮಾಡಿದಾಗಲೇ ತಾನು ಸೃಷ್ಟಿಸಿದ ಮಾನವರಿಗಾಗಿ ನಿಯಮಗಳನ್ನು ಮಾಡಿರಬೇಕು. ಪರಿಪಾಲಿಸುವ ರಾಜನು ಕೂಡ ತನ್ನ ನಿಯಮಗಳನ್ನು ಪ್ರಕಾಶಿಸಬೇಕು. ನಮಗೆ ನಮ್ಮ ಶಾಸ್ತ್ರಗಳಿರಬೇಕು. ಶಾಸ್ತ್ರಗಳ ಪ್ರಕಾರ ಕರ್ಮಫಲವಿರಬೇಕು. ಈಶ್ವರನು ಮಾನವರನ್ನು ಪಾಲಿಸಲು ಶಾಸ್ತ್ರಗಳಲ್ಲಿ ನಿಯಮಗಳನ್ನು ಪ್ರಕಾಶಿಸಿದನು. ಅವುಗಳಿಲ್ಲದಿದ್ದರೆ ಅಯುಕ್ತವಾಗುತ್ತಿತ್ತು. [illegible] ಸವಾರಿ ಮಾಡಿದಂತೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವೇದಗಳ ಮೇಲೆ ನಂಬಿಕೆ ಇಲ್ಲದಿರುವ ಮತಗಳ ಪ್ರಾಬಲ್ಯದಿಂದಾಗಿ ವೇದಮತ ಕ್ಷೀಣವಾಯಿತು. ಆ ಸಮಯದಲ್ಲಿ ಪೂರ್ಣಾನದಿ ತೀರದಲ್ಲಿ, ಬಾಲಕೃಷ್ಣ ದೇವಾಲಯದ ಹತ್ತಿರ ಪವಿತ್ರ ಕುಟುಂಬದಲ್ಲಿ ಶ್ರೀಶಂಕರ ಭಗವತ್ಪಾದರು ಪ್ರಾದುರ್ಭವಿಸಿದರು. ಅವರು ಬಹಳ ಚಿಕ್ಕ ವಯಸ್ಸಿನಲ್ಲೆ ಶಾಸ್ತ್ರಾಧ್ಯಯನವನ್ನು ಪೂರ್ತಿಗೊಳಿಸಿದರು. ಅವರು ಪಡೆದ ಜ್ಞಾನದ ಕಾರಣದಿಂದಾಗಿ ಐಹಿಕ ಸುಖಭೋಗಗಳಲ್ಲಿ ಅವರಿಗೆ ಇಚ್ಛೆ ಇಲ್ಲದೆ ಹೋಯಿತು. ವೇದಪ್ರಮಾಣವಲ್ಲದ ಮತಗಳು ಸಾರಹೀನವಾದುವೆಂದೂ, ಅಂಥಹವುಗಳನ್ನು ನಿರೋಧಿಸಬೇಕೆಂದೂ ಅವರು ಭಾವಿಸಿದರು. ಅವರು ತಮ್ಮ ತಂದೆ-ತಾಯಿಗೆ ಒಬ್ಬರೇ ಸಂತಾನ. ತಂದೆ ಸ್ವರ್ಗಸ್ಥರಾದರು. ಶ್ರೀಶಂಕರರು ಲೋಕಸಂಗ್ರಹವನ್ನು ವಾಂಛಿಸಿದರು. ಅವರು ಮಹರ್ಷಿ.

ಅಯಂ ನಿಜ: ಪರೋವೇತಿ ಗಣನಾ ಲಘುಚೇತಸಾಮ್ ।
ಉದಾರಚರಿತಾನಾಂ ತು ವಸುಧೈವ ಕುಟುಂಬಮ್ ॥

ಅವನು ನನ್ನವನು. ಇವನು ಬೇರೆಯವನು. ಹೀಗೆ ಸಂಕುಚಿತಭಾವನೆಯುಳ್ಳವರು ಭಾವಿಸುತ್ತಾರೆ. ಉದಾರ ಚರಿತರಿಗೆ ಲೋಕವೆಲ್ಲಾ ಕುಟುಂಬವೇ

ಇದಕ್ಕೆ ಶ್ರೀ ಭಗವತ್ಪಾದರು ಉದಾಹರಣೆ. ಈ ಅಭಿಯುಕ್ತೋಕ್ತಿ ಶ್ರೀಭಗವತ್ಪಾದರ ರೂಪದಲ್ಲಿ ಅವತರಿಸಿತೆಂದು ಹೇಳಬೇಕು.

ಅವರು ತಮ್ಮ ತಾಯಿಯ ಮನಸ್ಸಿಗೆ ಕಷ್ಟಕೊಡಲು ಇಷ್ಟಪಡಲಿಲ್ಲ. ಪೂರ್ಣಾನದಿಯಲ್ಲಿ ಸ್ನಾನಮಾಡುತ್ತಿದ್ದಾಗ ಒಂದು ಮೊಸಳೆ ಅವರನ್ನು ಹಿಡಿದುಕೊಂಡಿತು. ಅವರು ಸಹಾಯಕ್ಕಾಗಿ ಕೂಗಿದರು. ತಾಯಿ ಬಂದು ನೋಡಿ ಘಾಬರಿಗೊಂಡಳು. ಆಕೆಯೊಡನೆ ಅವರು 'ಸಂನ್ಯಾಸವೆಂದರೆ ಎಲ್ಲರಿಗೂ ಅಭಯವನ್ನು ಕೊಡುವುದು, ನನ್ನಿಂದ ಭಯಗೊಂಡು ಮೊಸಳೆ ನನ್ನನ್ನು ಹಿಡಿದುಕೊಂಡಿದೆ. ನನ್ನಿಂದ ಎಲ್ಲರಿಗೂ ಅಭಯವಾದರೆ ಇದು ನನ್ನನ್ನು ಬಿಟ್ಟು ಬಿಡುವುದು. ಆದ್ದರಿಂದ ನಾನು ಸಂನ್ಯಾಸ ಸ್ವೀಕರಿಸಬೇಕು' ಎಂದರು. ನನ್ನ... ಒಪ್ಪಿಕೊಂಡಳು. ಅವರು

Sri Vidyabharathi Book Centre, Sringeri

 CC-O. In Public Domain. Digitized by eGangotri

ಗುರುವನ್ನು ಹುಡುಕಿಕೊಂಡು ನರ್ಮದಾ ತೀರಕ್ಕೆ ಬಂದರು. ಅಲ್ಲಿ ಶ್ರೀ ಗೋವಿಂದ ಭಗವತ್ಪಾದರಿಂದ ಕ್ರಮ ಸಂನ್ಯಾಸವನ್ನು ಸ್ವೀಕರಿದರು. ಆ ಗುರುವಿನಲ್ಲಿ ಪಡೆದ ವಿದ್ಯೆಯೇ ಫಲಿಸಿತು.

ಶ್ರೀ ಶಂಕರರ ಶಕ್ತಿಸಾಮರ್ಥ್ಯಗಳನ್ನು ಕಂಡು ಅವರ ಗುರುಗಳು ವಿಸ್ಮಯಾನಂದಚಕಿತರಾದರು. ಲೋಕಸಂಗ್ರಹಕ್ಕಾಗಿ ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆಯುವಂತೆ ಗುರುಗಳು ಅವರಿಗೆ ಅಪ್ಪಣೆ ಕೊಟ್ಟರು. ಗುರುಗಳ ಅಪ್ಪಣೆ ಪ್ರಕಾರ ಶ್ರೀಶಂಕರರು ಬ್ರಹ್ಮಸೂತ್ರ–ಭಗವದ್ಗೀತಾ ಉಪನಿಷದ್ಭಾಷ್ಯಗಳನ್ನು ರಚಿಸಿದರು. ಶ್ವೇತಾಶ್ವತರೋಪನಿಷತ್ತಿಗೂ ಭಾಷ್ಯವನ್ನು ಬರೆದರು. ಮಹಾಭಾರತದಲ್ಲಿರುವ ಸನತ್ಸುಜಾತೀಯಕ್ಕೆ ಕೂಡ ವ್ಯಾಖ್ಯೆ ಬರೆದರು. ಮತ್ತೂ ಎಷ್ಟೋ ಗ್ರಂಥಗಳನ್ನು ರಚಿಸಿದರು. ಸರ್ವವ್ಯಾಪಿಯಾದ ಬ್ರಹ್ಮವೊಂದೇ ಸತ್ಯವೆಂದು ದೃಢಪಡಿಸಿದರು. ಅದೇ ತುರೀಯವೆಂದರು.

ಶ್ರೀಶಂಕರರ ಭಾಷ್ಯಗಳಲ್ಲಿ ಸುಂದರವಾದ ಉದಾಹರಣೆಗಳಿವೆ. ಶಾಸ್ತ್ರಜ್ಞಾನವಿರುವವರಿಗೆ ಶ್ರೀಶಂಕರರ ಗ್ರಂಥಗಳು ಚೆನ್ನಾಗಿ ಅರ್ಥವಾಗುತ್ತವೆ. ತಾರ್ಕಿಕರ ವಾದಗಳಿಗೆಲ್ಲ ಅವರು ಸಮಾಧಾನ ಹೇಳಿ ಅವರ ವಾದಗಳನ್ನು ಪೂರ್ವಪಕ್ಷ ಮಾಡಿದರು. ಅವರ ಗ್ರಂಥಗಳು ಪಂಡಿತರಿಗೆ ಎಷ್ಟೋ ಮೋದವನ್ನುಂಟುಮಾಡುತ್ತದೆ. ಆದರೆ ಶ್ರೀ ಶಂಕರರು ಪಂಡಿತರಿಗಾಗಿ ಮಾತ್ರವಲ್ಲ ಭೂಮಿಯ ಮೇಲೆ ಅವತರಿಸಿದುದು. ಪ್ರತಿಯೊಬ್ಬರಿಗೂ ಪ್ರಯೋಜನವಾಗಬೇಕು., ಪ್ರತಿಯೊಬ್ಬರೂ ಸಂಸಾರ ಸಾಗರವನ್ನು ದಾಟಬೇಕು ಎನ್ನುವುದು ಅವರ ಭಾವನೆ. ಅದಕ್ಕಾಗಿ ಅವರು ವಿವೇಕಚೂಡಮಣಿ, ಉಪದೇಶಸಾಹಸ್ರೀ, ಪ್ರಬೋಧಸುಧಾಕರ ಮುಂತಾದ ಗ್ರಂಥಗಳನ್ನು ರಚಿಸಿದರು.

ಈ ಗ್ರಂಥಗಳನ್ನು ಓದಲು ಬಹಳ ದಿನಗಳು ಬೇಕಾಗಿಲ್ಲ. ಈ ಗ್ರಂಥಗಳನ್ನು ಅರ್ಥ ಮಾಡಿಕೊಳ್ಳಲು ಶಾಸ್ತ್ರಜ್ಞಾನ ಕೂಡ ಆವಶ್ಯಕವಿಲ್ಲ. ಸ್ವಲ್ಪ ಶ್ರದ್ಧೆ ಮತ್ತು ಸ್ವಲ್ಪ ಸಂಸ್ಕೃತ ಭಾಷಾಜ್ಞಾನವಿದ್ದರೆ ಸಾಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶಂಕರರ ಜನ್ಮಸ್ಥಾನ ಕೇರಳ. ಆ ಪ್ರಾಂತೀಯ ಭಾಷೆ ಅವರ ಮಾತೃಭಾಷೆಯಾಗಿದ್ದಿರಬಹುದು. ಆದರೆ ಅವರು ತಮ್ಮ ಮಾತೃಭಾಷೆಯಲ್ಲಿ ಗ್ರಂಥಗಳನ್ನು ಬರೆಯಲಿಲ್ಲ. ವಿಶಾಲ-ದೃಷ್ಟಿಯಿಂದ ಸಂಸ್ಕೃತ ಆ ಕಾಲದಲ್ಲಿ ಅಖಿಲ ಭಾರತ ವಿದ್ವದ್ಭಾಷೆಯಾದುದರಿಂದ ಆ ಭಾಷೆಯಲ್ಲಿ ಎಲ್ಲರಿಗೂ ಉಪದೇಶ ಯೋಗ್ಯವಾದ ತಮ್ಮ ಗ್ರಂಥಗಳನ್ನು ಬರೆದರು. ಎಲ್ಲ ಧರ್ಮಗಳಿಗೂ ವೇದಗಳು ಮೂಲ, ವೇದಗಳು ಸಂಸ್ಕೃತದಲ್ಲಿವೆ. ಆದ್ದರಿಂದ ಸಂಸ್ಕೃತದಲ್ಲಿ ಅವರು ಗ್ರಂಥರಚನೆ ಮಾಡಿದುದು ಸಮುಚಿತವೇ.

ಶ್ರೀಶಂಕರರು ಒಂದು ಹೊಸ ಮತವನ್ನು ಪ್ರಚಾರಮಾಡಲು ಪ್ರಯತ್ನಿಸಲಿಲ್ಲ. ಹಾಗೆ ಮಾಡುವುದು ನಿಷ್ಪ್ರಯೋಜನಕರ. 'ವೇದ ಸಾರವೇನು? ವೇದವಿಹಿತ ಧರ್ಮಗಳನ್ನು ಬಿಡಬಹುದೇ? ಅವುಗಳನ್ನು ವಿಸ್ಮರಿಸಿದರೆ ನಮಗೆ ಶ್ರೇಯಸ್ಸಿಲ್ಲ, ಸತ್ಯದ ಬಗ್ಗೆ ನಮಗೆ ತಿಳಿಯದು' —ಇವು ಅವರ ಉಪದೇಶ. ಇದು ಹೊಸ ಮತವಲ್ಲ. ಹೊಸ ಆಂದೋಳನವಲ್ಲ. ವೇದಗಳು ಸಂಸ್ಕೃತದಲ್ಲಿರುವಾಗ ವೇದಸಾರವನ್ನು ಬೇರೆ ಭಾಷೆಯಲ್ಲಿ ಹೇಳುವುದು ಶಂಕರರಿಗೆ ಹೇಗೆ ಸಮಂಜಸ? ಪ್ರತಿಯೊಬ್ಬರಲ್ಲೂ ನಿತ್ಯಾನಿತ್ಯ ವಸ್ತುವಿವೇಕ, ವೈರಾಗ್ಯ, ಶಮಾದಿಷಟ್ಕ ಮತ್ತು ಮೋಕ್ಷೇಚ್ಛೆ ಇರುವುದಿಲ್ಲ. ಅವು ಇಲ್ಲದವರಿಗೆ ವೇದಾಂತ ಶ್ರವಣಯೋಗ್ಯತೆ ಇಲ್ಲ, ಇನ್ನು ಮನನ, ನಿಧಿಧ್ಯಾಸಗಳು ಹೇಗೆ? ಅವರಿಗೆ ವೇದಜ್ಞಾನಲಾಭಯೋಗ್ಯತೆ ಇಲ್ಲ. ಅವರಿಗೂ ಒಳ್ಳೆಯದು ಆಗಬೇಕು. ಭಗವಂತ ಅನುಗ್ರಹವಾದರೆ ಎಲ್ಲವನ್ನು ಸಾಧಿಸಬಹುದು. ಅದಕ್ಕಾಗಿ ಶ್ರೀಶಂಕರರು 'ಪ್ರಪಂಚಸಾರ' ವೆನ್ನುವ ಮಂತ್ರ ಶಾಸ್ತ್ರಗ್ರಂಥ ಒಂದನ್ನು ರಚಿಸಿದರು. ದೇವತೆಗಳನ್ನು ಎಲ್ಲರೂ ಪ್ರಾರ್ಥಿಸಬೇಕೆನ್ನುವುದು ಅವರ ಸದಭಿಪ್ರಾಯ. ಹಾಗೆ ಪ್ರಾರ್ಥಿಸಿ ಭಗವದನುಗ್ರಹವನ್ನು ಸಂಪಾದಿಸಿ ಶ್ರೇಯ-ಪ್ರೇಯಸ್ಸುಗಳನ್ನು ಸಾಧಿಸಿಕೊಳ್ಳಲೆಂದೂ ದೇವತಾನುಗ್ರದಿಂದ ಪ್ರತಿಯೊಬ್ಬರೂ ವೇದಾದುಂತತ್ತ್ವಗಳನ್ನು ತಿಳಿಯಬಲ್ಲರೆಂದೂ ಅವರು ಭಾವಿಸಿದರು. ಇಂಥ ದೊಡ್ಡ ಔದಾರ್ಯ ಭಾವದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರು ರಚಿಸಿರುವ ಸ್ತೋತ್ರಗಳನ್ನು ಪಠಿಸಿ ಯಾರು ಬೇಕಾದರೂ ಅವುಗಳ ಪ್ರಯೋಜನವನ್ನು ಪಡೆಯಬಹುದು.

ಶ್ರೀಭಗವತ್ಪಾದರು ಆಸೇತು ಹಿಮಾಚಲ ಪರ್ಯಂತ ಎರಡು ಸಾರಿ ಪರ್ಯಟನೆ ಮಾಡಿದರು. ಅವರು ತಮ್ಮ ವಿದ್ವತ್ತಿನಿಂದ ಪಂಡಿತರೆಲ್ಲರೂ ಅವರ ವಾದವನ್ನು ಅಂಗೀಕರಿಸುವಂತೆ ಮಾಡಿದರು. ಆ ದಿನಗಳಲ್ಲಿ ಎಷ್ಟೋ ಚಿಕ್ಕ ಚಿಕ್ಕ ಮತಗಳು ಹುಟ್ಟಿಕೊಂಡಿದ್ದುವು, ಅಂಥವರನ್ನು ವೇದಮತಾನುಯಾಯಿಗಳನ್ನಾಗಿ ಮಾಡಿ 'ನೀನು ಶಿವನನ್ನಾಗಲಿ, ದೇವಿಯನ್ನಾಗಲಿ, ಗಣಪತಿಯನ್ನಾಗಲಿ, ಸೂರ್ಯನನ್ನಾಗಲಿ, ಸುಬ್ರಹ್ಮಣ್ಯನನ್ನಾಗಲಿ, ಬೇರೆ ಯಾವ ದೇವರನ್ನಾಗಲಿ ಪೂಜಿಸಿದರೂ ನಿಜಕ್ಕೂ ಸಚ್ಚಿದಾನಂದ ರೂಪನಾದ ಪರಬ್ರಹ್ಮನನ್ನೇ ಆರಾಧಿಸುತ್ತಿರುವೆ' ಎಂದು ಅವರು ಬೋಧಿಸಿದರು. ಯಾರಾದರೂ ತಮ್ಮ ಅಭಿರುಚಿಗೆ ಅನುಗುಣವಾಗಿ ಆರಾಧಿಸಬಹುದು. 'ಏಕಂ ಸದ್ವಿಪ್ರಾ ಬಹುಧಾ ವದನ್ತಿ'—ಬ್ರಹ್ಮ ಒಂದೇ, ಜ್ಞಾನಿಗಳು ಪಲವು ವಿಧವಾಗಿ ಹೇಳುತ್ತಾರೆ.

ಇದನ್ನು ನಾವು ಮರೆಯಬಾರದು. 'ಧರ್ಮಭೂಮಿ' ಎಂದರೆ ನಾವು ವಾಸಿಸುವ ಪಟ್ಟಣ, ಸುತ್ತ ಮುತ್ತಿನ ಪ್ರದೇಶ ಮಾತ್ರವೇ ಅಲ್ಲ. ಭಾರತದೇಶವೆಲ್ಲ 'ಧರ್ಮ ಭೂಮಿ' ಎಂದು ಶ್ರೀಶಂಕರರು ಹೇಳಿದರು. ಅವರು ಭಾರತದೇಶದ ನಾಲ್ಕು ದಿಕ್ಕುಗಳಲ್ಲಿಯೂ ಪ್ರಾಕ್ ದಕ್ಷಿಣ ಪೂರ್ವೋತ್ತರಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿ ಅವುಗಳಿಗೆ ನಾಲ್ಕು ಮಹಾವಾಕ್ಯಗಳನ್ನು ಕೊಟ್ಟರು. ಈಗಲೂ ಆ ಮಠಗಳನ್ನು ನೋಡಬಹುದು.

ಅವರ ಕಾರಣದಿಂದಾಗಿ ವೇದಗಳು ಈಗಲೂ ಸ್ಥಿರವಾಗಿವೆ. ಶಿವ-ವಿಷ್ಣು ದೇವತೆಗಳ ದೇವಾಲಯಗಳು ನಿಂತಿವೆ. ಅವರು ಇಲ್ಲದೆ ಹೋಗಿದ್ದರೆ ಧರ್ಮದ ಸ್ವರೂಪ ನಮಗೆ ತಿಳಿಯುತ್ತಿರಲಿಲ್ಲ. ಸಂಸಾರ ಬದ್ಧನಾದ ಜೀವನು ವಿಮುಕ್ತಿಯನ್ನು ಪಡೆದು ಕೈವಲ್ಯವನ್ನು ಸಾಧಿಸುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾರ್ಗವನ್ನು ಅವರು ನಮಗೆ ಬೋಧಿಸಿದರು, ಅನುಗ್ರಹಿಸಿದರು. ಅವರು ರಚನೆಯಾದ 'ಮೋಹ ಮುದ್ಗರ'ದಲ್ಲಿನ ಈ ಶ್ಲೋಕ ಮನನೀಯವಾಗಿದೆ–

ತ್ವಯಿ ಮಯಿ ಚಾನ್ಯತ್ರೈಕೋ ವಿಷ್ಣುಃ ವ್ಯರ್ಥಂ ಕುಪ್ಯಸಿ
ಕಿಮಸಹಿಷ್ಣುಃ ।
ಸರ್ವಸ್ಮಿನ್ನಪಿ ಪಶ್ಯಾತ್ಮಾನಂ ಸರ್ವತ್ರೋಽತ್ಸೃಜ ಭೇದ
ಜ್ಞಾನವಮ್ ॥

ನಿನ್ನಲ್ಲಿ, ನನ್ನಲ್ಲಿ ಎಲ್ಲರಲ್ಲಿಯೂ ಒಬ್ಬನೇ ಪ್ರಭುವಿದ್ದಾನೆ, ವ್ಯರ್ಥವಾಗಿ ನನ್ನ ಮೇಲೆ ಕೋಪಿಸಿಕೊಳ್ಳಬೇಡ. ಎಲ್ಲರಲ್ಲಿಯೂ ಆತ್ಮನನ್ನು ನೋಡು, ಭೇದಜ್ಞಾನವನ್ನು ಬಿಡು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಉಪದೇಶ

೪ ಧ್ಯಾನ

ಪರಮಾರ್ಥಕ್ಕೆ ಸಾಧನವಾಗಿ ಕರ್ಮ, ಭಕ್ತಿ, ಮತ್ತು ಜ್ಞಾನ ಎಂಬ ಮೂರು ಮಾರ್ಗಗಳು ಇವೆ. ಇವುಗಳಲ್ಲಿ ಉಪಾಸನೆ ಎನ್ನುವುದು ಭಕ್ತಿಯಲ್ಲಿ ಸೇರುತ್ತದೆ. ಕರ್ಮ ಮತ್ತು ಭಕ್ತಿಯ ವಿಷಯವಾಗಿ ಈಗ ವಿಚಾರ ಮಾಡಲಾಗುವುದಿಲ್ಲ. ಉಪಾಸನೆ ಎಂದರೇನು? ಈ ವಿಷಯವನ್ನು ಕುರಿತು ಶಂಕರಭಗವತ್ಪಾದರು ತಾವು ಬರೆದ ಛಾಂದೋಗ್ಯೋಪನಿಷತ್ ಭಾಷ್ಯದ ಪ್ರಾರಂಭದಲ್ಲಿ ಚೆನ್ನಾಗಿ ಸ್ಪಷ್ಟ ಪಡಿಸಿದ್ದಾರೆ. ಉಪಾಸನೆ ಎನ್ನುವುದು ಒಂದು ಮನೋಧರ್ಮ. ಜ್ಞಾನ ಎನ್ನುವುದು ಕೂಡ ಒಂದು ಮನೋಧರ್ಮ, ಹೀಗಿರುವಾಗ ಜ್ಞಾನಕ್ಕೂ ಉಪಾಸನೆಗೂ ವ್ಯತ್ಯಾಸವೇನು? ಉಪಾಸನೆ ಮಾಡುವಾಗಲೂ ಒಂದು ಜ್ಞಾನ ಇದ್ದೇ ಇರಬೇಕು. ಉದಾಹರಣೆಗೆ ದೇವಿಯನ್ನು ಧ್ಯಾನಿಸುತ್ತೇವೆ. ಹಾಗೆ ದೇವಿಯನ್ನು ಧ್ಯಾನಿಸುವಾಗ ದೇವಿಗೆ ಸಂಬಂಧಪಟ್ಟ ಜ್ಞಾನ ಉಂಟಾಗುತ್ತದೆ. ಏಕೆಂದರೆ ಜ್ಞಾನವಿಲ್ಲದೆ ಉಪಾಸನೆ ಹೇಗೆ ಸಾಧ್ಯ? ಈ ಆಕ್ಷೇಪವನ್ನು ಮನಸ್ಸಿನಲ್ಲಿಟ್ಟುಕೊಂಡೇ ಜ್ಞಾನಕ್ಕೂ ಉಪಾಸನೆಗೂ ವ್ಯತ್ಯಾಸವೇನು ಎನ್ನುವ ಪ್ರಶ್ನೆ ಉಂಟಾಯಿತು. ವ್ಯತ್ಯಾಸವಿಲ್ಲ ಎನ್ನುವ ಒಂದು ಆಕ್ಷೇಪವನ್ನು ಸಾಮಾನ್ಯ ದೃಷ್ಟಿಯಿಂದ ಭಗವತ್ಪಾದರು ತೆಗೆದುಕೊಂಡು, 'ಕಸ್ತರ್ಹಿ ಅದ್ವೈತ ಜ್ಞಾನಸ್ಯ ಉಪಾಸನಾನಾಂ ಚ ವಿಶೇಷಃ?' ಎಂದು ಕೇಳಿದರು. 'ಅದ್ವೈತ' ಜ್ಞಾನಕ್ಕೂ ಉಪಾಸನೆಗೂ ಏನು ಭೇದ' ಎನ್ನುವುದು ತಾತ್ಪರ್ಯ. ಇದಕ್ಕೆ ಉತ್ತರವಾಗಿ 'ಉಚ್ಯತೇ— ಸ್ವಾಭಾವಿಕಸ್ಯಾತ್ಮನ್ಯಕ್ರಿಯೇಽಧ್ಯಾರೋಪಿತಸ್ಯ ಕರ್ತ್ರಾದಿಕಾರಕಕ್ರಿಯಾ ಫಲಭೇದವಿಜ್ಞಾನಸ್ಯ ನಿವರ್ತಕಮದ್ವೈತ ವಿಜ್ಞಾನಮ್, ರಜ್ಜ್ವಾದಾವಿವ ಸರ್ಪಾದ್ಯಧ್ಯಾರೋಪಲಕ್ಷಣ ಜ್ಞಾನಸ್ಯ ರಜ್ಜ್ವಾದಿ ಸ್ವರೂಪನಿಶ್ಚಯಃ ಪ್ರಕಾಶನಿಮಿತ್ತಃ ।' ಎಂದು ಅವರು ಸ್ಪಷ್ಟ ಪಡಿಸಿದರು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಅದ್ವೈತಜ್ಞಾನಕ್ಕೂ ಉಪಾಸನೆಗೂ ಬಹಳಷ್ಟು ವ್ಯತ್ಯಾಸವಿದೆ. ಆತ್ಮನು ಅಕ್ರಿಯ. ಹೀಗಿದ್ದರೂ 'ನಾನು ಮಾಡುತ್ತೇನೆ' ಎನ್ನುವ ಕರ್ತೃತ್ವ, 'ನಾನು ಕ್ರಿಯೆಗೆ ಕರ್ತೃವಾಗಿದ್ದೇನೆ.' ಎನ್ನುವ ಕರಣತ್ವ 'ನನ್ನಿಂದ ಕೆಲಸವಾಗುತ್ತದೆ' ಎನ್ನುವ ಅಧಿಷ್ಠಾನತ್ವ ಇಂಥ ಶಾಸ್ತ್ರದಲ್ಲಿ ಕಾರಕವೆಂದು ಹೇಳಲಾಗಿರುವ ಆರೂ ಆತ್ಮನ ಮೇಲೆ ಆರೋಪಣೆ ಮಾಡಲ್ಪಡುತ್ತವೆ. ಇವುಗಳು ನಿಜಕ್ಕೂ ಆತ್ಮನಲ್ಲಿ ಇಲ್ಲ ಆದ್ದರಿಂದಲೇ ಇವುಗಳು ಆತ್ಮನ ಮೇಲೆ ಆರೋಪಿತವಾಗಿದೆಯೆಂದು ಹೇಳಲಾಗಿದೆ. ಇದಕ್ಕೆ ಉಪಮಾನವೇನು? ಹೆಚ್ಚಾಗಿ ಬೆಳಕಿಲ್ಲದ ಜಾಗದಲ್ಲಿ ಹಗ್ಗ ಹಾವಾಗಿ ತೋರಬಹುದು. ಇದೇ ರೀತಿ ಇಲ್ಲಿ. ಹಗ್ಗದಲ್ಲಿ ಹಾವು ಕಲ್ಪಿಸಿದಂತೆ ಆತ್ಮನಲ್ಲಿ ಕರ್ತೃತ್ವದಂತಹ ಕಾರಕಗಳೂ ಮತ್ತು ಕ್ರಿಯೆ, ಫಲ ಇಂತಹವುಗಳ ಕಲ್ಪನೆಯನ್ನು ಯಾವುದು ದೂರಮಾಡುವುದೋ ಅದೇ ಅದ್ವೈತ ಜ್ಞಾನವೆನ್ನಲಾಗುವುದು. ಹೀಗಿರುವಾಗ ಉಪಾಸನೆ ಅಥವಾ ಧ್ಯಾನ ಎನ್ನುವುದು ಯಾವುದು?

'ಉಪಾಸನಂ ತು ಯಥಾ ಶಾಸ್ತ್ರಸಮರ್ಥಿತಂ ಕಿಂಚಿದಾಲಂಬನಮುಪಾದಾಯ ತಸ್ಮಿನ್ ಸಮಾನಚಿತ್ತವೃತ್ತಿ ಸಂತಾನಕರಣಂ ತದ್ವಿಲಕ್ಷಣ-ಪ್ರತ್ಯಯಾನನ್ತರಿತಮಿತಿ ವಿಶೇಷಃ। ತಾನಿ ಏತಾನಿ ಉಪಾಸನಾನಿ ಸತ್ತ್ವಶುದ್ಧಿಕರತ್ವೇನ ವಸ್ತುತತ್ತ್ವಾವಭಾಸಕತ್ವಾದದ್ವೈತಜ್ಞಾನೋಪಕಾರಕಾಣಿ।'

ಎನ್ನುವುದು ಭಗವತ್ಪಾದರು ಕೊಟ್ಟ ಉತ್ತರ. ಒಂದು ವಸ್ತು ಒಂದು ವಿಧವಾಗಿ ಇಲ್ಲವೆಂದುಕೊಳ್ಳೋಣ. ಹಾಗಿದ್ದರೂ ಆ ವಸ್ತು ಇಲ್ಲದಿರುವ ರೀತಿಯಲ್ಲಿ ಅದು ಇರುವಂತೆ ಚಿಂತನೆ ಮಾಡಬಹುದು. ಹೀಗೆ ಚಿಂತನೆ ಮಾಡಿದರೆ ಯಾವುದಾದರೂ ಪ್ರಯೋಜನವಿದೆಯೆ ಎಂದು ಕೇಳಿದರೆ ವಿಶೇಷವಾದ ಫಲವಿದೆ ಎನ್ನುವುದು ಉತ್ತರವಾಗುತ್ತದೆ. ಈ ಚಿಂತನೆ ಯಾವ ವಿಧವಾಗಿರಬೇಕು ಎನ್ನುವುದಕ್ಕೆ 'ಯಥಾಶಾಸ್ತ್ರಂ' 'ಶಾಸ್ತ್ರದಲ್ಲಿ ಹೇಳಿದಂತೆ' ಎಂದು ಹೇಳಿದರು. ಉದಾಹರಣೆಗೆ ಶಾಸ್ತ್ರದಲ್ಲಿ,

'ಮನೋ ಬ್ರಹ್ಮೇತಿ ಉಪಾಸೀತ' ಎಂದಿದೆ. ಮನಸ್ಸೆನ್ನುವುದು ಎಲ್ಲೆಯುಳ್ಳದ್ದು. ಆದರೆ ಬ್ರಹ್ಮವೆನ್ನುವುದು ಎಲ್ಲೆ ಇಲ್ಲದಿರುವುದು. ಆದರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂಥ ಮನಸ್ಸನ್ನು ಬ್ರಹ್ಮವೆಂದು ಉಪಾಸನೆ ಮಾಡಿಕೊಂಡು ಬಾ ಎಂದು ಮೇಲೆ ಹೇಳಿದ ಶಾಸ್ತ್ರವಾಕ್ಯದಲ್ಲಿರುವ ಅಪ್ಪಣೆ. ಹೀಗೆ ಮಾಡಿದರೆ ಒಳ್ಳೆಯ ಫಲವುಂಟು. ಈ ಧ್ಯಾನ ಜ್ಞಾನವಾಗುವುದಿಲ್ಲ. ಇದರ ಬಗ್ಗೆ' 'ಅಲ್ಪಾಲಂಬನ ತಿರಸ್ಕಾರೇಣ ಉತ್ಕೃಷ್ಟ ವಸ್ತ್ವಭೇದಧ್ಯಾನಂ ಸಂಪತ್' ಎಂದು ಹೇಳಲ್ಪಟ್ಟಿದೆ. ಮನಸ್ಸೆನ್ನುವುದು ಒಂದು ಅಲ್ಪವಾದ ಅವಲಂಬ. ಇದನ್ನು ತಿರಸ್ಕರಿಸಿ ಉತ್ತಮವಾದ ಬ್ರಹ್ಮವನ್ನು ಧ್ಯಾನಮಾಡುವುದನ್ನು 'ಸಂಪತ್' ಎನ್ನಲಾಗುವುದು ಶಾಸ್ತ್ರಗಳಲ್ಲಿ ಪ್ರತೀಕೋಪಾಸನೆಯ ಬಗ್ಗೆ ವಿವರವಿದೆ. ಅದರ ಪ್ರಕಾರ ನಾವು ಒಂದು ಸಾಲಿಗ್ರಾಮವನ್ನು ವಿಷ್ಣುವೆಂದು ಕೊಳ್ಳುತ್ತೇವೆ. ನಮಗೆ ಸಾಲಿಗ್ರಾಮ ಒಂದು ಕಲ್ಲೆಂದು ಗೊತ್ತು. ಆದರೂ ಅದರಲ್ಲಿ ವಿಷ್ಣು ಭಾವನೆಯನ್ನು ಇಟ್ಟುಕೊಳ್ಳುತ್ತೇವೆ. ಹೀಗೆ ಮಾಡುವುದಕ್ಕೆ ಪ್ರತೀಕೋಪಾಸನೆ ಎಂದು ಹೆಸರು. ಇದೇ ರೀತಿ ಅಂಗಾವಬದ್ಧ ಉಪಾಸನೆ ಎನ್ನುವುದೂ ಇದೆ. ಒಂದು ಯಜ್ಞದಲ್ಲಿ ಒಂದು ಸಾಮಗಾನ ಮಾಡಬೇಕಾಗಿ ಬರುತ್ತದೆ. ಆ ಸಾಮಕ್ಕೆ ಐದು ಭಾಗಗಳಿವೆ. ಆ ಒಂದೊಂದು ಭಾಗದಲ್ಲೂ ಒಂದೊಂದು ವಿಧವಾದ ದೃಷ್ಟಿಯನ್ನು ಇಟ್ಟುಕೊಂಡಿರಬೇಕು. ಹೀಗೆ ಮಾಡುವುದಕ್ಕೆ ಅಂಗಾವಬದ್ಧ ಉಪಾಸನೆಯೆಂದು ಹೆಸರು. ಈ ಉಪಾಸನೆ ಏತಕ್ಕಾಗಿ ಮಾಡಬೇಕು? ಯಾಗವನ್ನು ಮಾಡಿದರೆ ಫಲವುಂಟು. ಆದರೆ ಆ ಉಪಾಸನೆಯನ್ನೂ ಮಾಡಿದರೆ ಒಂದು ವಿಶೇಷವಾದ ಫಲವುಂಟೆನ್ನುವುದು ಇದಕ್ಕೆ ಉತ್ತರ.

ಇವುಗಳಿಂದ ಜ್ಞಾನಕ್ಕೂ ಉಪಾಸನೆಗೂ ವ್ಯತ್ಯಾಸವಿದೆಯೆಂದು ಸ್ಪಷ್ಟವಾಗುತ್ತದೆ. ಹೀಗಿದ್ದರೂ ಉಪಾಸನೆ ಜ್ಞಾನಕ್ಕೆ ಸಾಧನ ವಾಗಿದೆ. ಆದ್ದರಿಂದ ಮನುಷ್ಯ ಜನ್ಮವನ್ನು ಪಡೆದವನು ಯಾವು ದಾದರೂ ಉಪಾಸನೆಯನ್ನು ಮಾಡಿ ಶ್ರೇಯಸ್ಸು ಪಡೆಯುವುದು ಒಳ್ಳೆಯದು.

ಉಪಾಸನೆ ಮಾಡುವುದು ಆವಶ್ಯಕವೆಂದು ನೋಡಿಯಾಯಿತು. ಇದು ಮಾಡಬಹುದೇ? ಈ ವಿಷಯವನ್ನು ಕುರಿತು ಯೋಗಶಾಸ್ತ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಉತ್ತರ ಹೇಳಿದೆ. ಅಲ್ಲಿ, ಮನಸ್ಸು ಐದು ವಿಧವಾಗಿ ವಿಂಗಡಿಸಲ್ಪಟ್ಟಿದೆ. ಮನಸ್ಸಿನ ಸ್ಥಿತಿಯನ್ನು ಕ್ಷಿಪ್ತ, ಮೂಢ, ವಿಕ್ಷಿಪ್ತ, ಏಕಾಗ್ರ ಮತ್ತು ನಿರುದ್ಧವೆಂದು ಐದು ವಿಧವಾಗಿ ವಿಂಗಡಿಸಿದರು. ಐದನೆಯದಾಗಿ ಹೇಳಲ್ಪಟ್ಟ ನಿರುದ್ಧವೆನ್ನುವ ಮನಸ್ಥಿತಿ ಪ್ರಾಪ್ತವಾದರೆ ಬೇರೆ ಯಾವುದೂ ಬೇಕಾಗಿಲ್ಲ. ಹೀಗೆ ಐದು ವಿಧವಾದ ಮನಸ್ಥಿತಿಗಳಿದ್ದರೂ ನಾವು ಸಾಮಾನ್ಯವಾಗಿ ಕ್ಷಿಪ್ತವಾಗಿರುವ ಮನಸ್ಸನ್ನೇ ನೋಡುತ್ತೇವೆ. ಕ್ಷಿಪ್ತ ಸ್ಥಿತಿಯಲ್ಲಿರುವ ಮನಸ್ಸನ್ನು ಕುರಿತು,

'ವಿಷಯೇಷು ಜ್ಞಾಪಕಂ ಮನಃ ಚಿತ್ತಮಿತ್ಯಭಿಧೀಯತೇ।' (ವಿಷಯಗಳನ್ನು ಅರಿಯುವ ಮನಸ್ಸಿಗೆ ಚಿತ್ತವೆಂದು ಹೆಸರು) ಎಂದು ಯೋಗ ಶಾಸ್ತ್ರದಲ್ಲಿರುವಂತೆಯೇ ಹೇಳಬೇಕು. ಯಾವಾಗಲೂ ಮನಸ್ಸಿಗೆ ಹೊರಗಿನ ವಸ್ತುಗಳ ಬಗ್ಗೆ ಯಾವುದಾದರೂ ವಿಷಯ ತೋರುತ್ತಲೇ ಇರುತ್ತದೆ. ಜಾಗ್ರತ್, ಸ್ವಪ್ನ ಈ ಎರಡು ಸ್ಥಿತಿಗಳಲ್ಲಿಯೂ ವಿಷಯವಿಲ್ಲದ ಸಮಯವೆನ್ನುವುದು ಅಪರೂಪ. ಇದು ಕ್ಷಿಪ್ತವಾಗಿರುವ ಮನಸ್ಥಿತಿ, ಅದಾದಮೇಲೆ ಹೇಳಿರುವುದು ಮೂಢಸ್ಥಿತಿ. ದುಃಖದಲ್ಲೊ ಸೋಮಾರಿತನದಲ್ಲೊ ಈ ಸ್ಥಿತಿಗೆ ಪ್ರಿಯತ್ವವಿರುತ್ತದೆ. ಸೋಮಾರಿತನ್ನ ದುಃಖ ಮುಂತಾದವುಗಳಲ್ಲಿರುವ ಮನಃಸ್ಥಿತಿ 'ಮೂಢ' ಎನ್ನಲ್ಪಡುತ್ತದೆ. ಕ್ಷಿಪ್ತದಂತೆ ಮೂಢಸ್ಥಿತಿಯಲ್ಲಿರುವ ಮನಸ್ಸಿನಿಂದ ಪರವಸ್ತುವನ್ನು ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಮನಸ್ಸನ್ನು ಸ್ವಲ್ಪವಾದರೂ ಶುದ್ಧ ಪಡಿಸಿಕೊಳ್ಳಬೇಕೆಂದು ಹಿಂದಿನವರು ಹೇಳಿದರು. ಹೀಗೆ, ಸ್ವಲ್ಪವೇ ಶುದ್ಧವಾದ ಮನಸ್ಸಿನ ಸ್ಥಿತಿ ವಿಕ್ಷಿಪ್ತವೆನ್ನಲ್ಪಡುವುದು. ಯಾವುದೋ ಒಂದು ವಿಕ್ಷೇಪವಿರುವುದರಿಂದ ಇದಕ್ಕೆ 'ವಿಕ್ಷಿಪ್ತ' ವೆನ್ನುವ ಹೆಸರು ಬಂದಿದೆಯೆಂದೂ ಹೇಳಬಹುದು. ಇಂಥ ಮನಸ್ಸು, ಯಾವುದರ ಬಗ್ಗೆ ಚಿಂತಿಸಬೇಕೋ ಅದರ ಬಗ್ಗೆ ಚಿಂತನೆ ಮಾಡಲು ಯೋಗ್ಯವಾದುದು. ಆದರೆ, ಮಧ್ಯೆ ಮಧ್ಯೆ ಬೇರೆ ಯಾವುದಾದರೂ ವಿಚಾರ ಬರುತ್ತಿರುತ್ತದೆ. ನಾವು ಧ್ಯಾನ ಮಾಡುತ್ತಿರುತ್ತೇವೆ. ಆದರೆ ಮಧ್ಯೆ ಮಧ್ಯೆ ಆಫೀಸಿನ ವಿಷಯ ನೆನಪಿಗೆ ಬರುತ್ತದೆ. ಹಾಗೆ ನೆನಪಿಗೆ ಬಂದರೂ ಮತ್ತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತೆ ಧ್ಯಾನ ಮಾಡುತ್ತೇವೆ. ಹೀಗೆ ಮಧ್ಯೆ ಮಧ್ಯೆ ಬೇರೆ ವಿಷಯಗಳು ಬರುತ್ತಿದ್ದರೂ ಈ ಸ್ಥಿತಿ ಕ್ಷಿಪ್ತ ಮತ್ತು ಮೂಢಕ್ಕಿಂತಲೂ ಮೇಲಾದುದು. ಹೀಗಿದ್ದರೂ ವಿಕ್ಷಿಪ್ತ ಸ್ಥಿತಿಯಲ್ಲಿರುವ ಮನಸ್ಸು ಪರವಸ್ತುವನ್ನು ಪಡೆಯಲು ಉಪಯೋಗವಾಗುವುದಿಲ್ಲ. ಅದಕ್ಕೆ ಕಾರಣ, ಹೀಗೆ ಧ್ಯಾನಿಸಲ್ಪಡುವ ವಿಷಯಕ್ಕಿಂತಲೂ ಬೇರೆ ವಿಷಯಗಳಲ್ಲಿ ವಿಕ್ಷಿಪ್ತತೆಯುಳ್ಳ ಮನಸ್ಸು ತನ್ನ ಕೆಲಸವನ್ನು ಸಾಧಿಸಲು ಸಾಮರ್ಥ್ಯವಿಲ್ಲದುದೇ ಆಗುತ್ತದೆ. ಇಂಥ ಮನಸ್ಸು ಒಂದು ದಿನ ಧ್ಯಾನ ಮಾಡುತ್ತದೆ, ಮತ್ತೊಂದು ದಿನ ಧ್ಯಾನ ಮಾಡುವುದನ್ನು ಬಿಟ್ಟು ಬೇರೆ ಏನಾದರೂ ಮಾಡುವುದು. ಎಂಥ ಮನಸ್ಸು ಪರವಸ್ತುವನ್ನು ಪಡೆಯಲು ಉಪಯೋಗವಾಗುತ್ತದೆ ಎನ್ನುವುದಕ್ಕೆ ಉತ್ತರವಾಗಿ ಏಕಾಗ್ರ ಸ್ಥಿತಿಯಲ್ಲಿರುವ ಮನಸ್ಸು ಉಪಯೋಗಪಡುತ್ತದೆ ಎನ್ನುತ್ತಾರೆ. ಕೈವಲ್ಯೋಪನಿಷತ್ತಿನಲ್ಲಿ,

> 'ಉಮಾಸಹಾಯಂ ಪರಮೇಶ್ವರಂ ಪ್ರಭುಂ ತ್ರಿಲೋಚನಂ
> ನೀಲಕಂಠಂ ಪ್ರಶಾಂತಮ್ ।
> ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ ಸಮಸ್ತಸಾಕ್ಷಿಣಂ
> ತಮಸಃ ಪರಸ್ತಾತ್ ॥

ಎಂದಿದೆ. ದೇವಿ ('ಲಲಿತಾಸಹಸ್ರನಾಮ' ದಲ್ಲಿ) 'ಅಂತರ್ಮುಖ ಸಮಾರಾಧ್ಯಾ' ಮತ್ತು 'ಬಹಿರ್ಮುಖ ಸುದುರ್ಲಭಾ' ಎಂದು ಸ್ತುತಿಸಲ್ಪಟ್ಟಿದ್ದಾಳೆ. ಅದೇ ರೀತಿ ಭಗವಂತನನ್ನು ಅಂತರ್ಮುಖ ಮನಸ್ಸಿನಿಂದ ಧ್ಯಾನ ಮಾಡಬೇಕು.

ಈ ಸಂದರ್ಭದಲ್ಲಿ ನನಗೆ ನನ್ನ ಆಚಾರ್ಯರ (ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ) ಬಗ್ಗೆ ನೆನಪು ಬರುತ್ತದೆ. ಅವರು ಸಂನ್ಯಾಸವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ,

'ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವಶೋಽಪಿ ಸಃ'

(ತನ್ನ ಹಿಂದಿನ ಜನ್ಮದ ಅಭ್ಯಾಸದಿಂದ ತಾನು ಇಷ್ಟಪಡದಿದ್ದರೂ ಒಳ್ಳೆಯ ದಾರಿಯಲ್ಲಿ ಎಳೆಯಲ್ಪಡುತ್ತಾನೆ) ಎಂದು ಭಗವಂತನು ಗೀತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ ಹೇಳುವಂತೆ ಅವರು ಪಾಠಶಾಲೆಯಲ್ಲಿ ಓದುವಾಗ ಅವರದೊಂದು ಸ್ವಭಾವವಿತ್ತು. ಪ್ರತಿ ಪ್ರದೋಷದಲ್ಲೂ ವಿದ್ಯಾಶಂಕರ ದೇವಾಲಯದಲ್ಲಿರುವ ಒಂದು ಕಂಬದ ಹತ್ತಿರ ಕುಳಿತು. 'ರತ್ನೈಃ ಕಲ್ಪಿತಮಾಸನಂ' (ಭಗವಂತನಿಗೆ ರತ್ನಗಳಿಂದ ಕಲ್ಪಿತವಾದ ಆಸನವನ್ನು ಸಮರ್ಪಿಸುವೆನು) ಎಂದು ಹೇಗೆ 'ಶಿವಮಾನಸಪೂಜಾ ಸ್ತೋತ್ರ' ದಲ್ಲಿ ಹೇಳಿದೆಯೋ ಹಾಗೇಯೇ ಭಗವಂತನಿಗೆ ಆಸನ, ಅರ್ಘ್ಯ, ಪಾದ್ಯ ಮುಂತಾದವನ್ನು ಸಮರ್ಪಣೆ ಮಾಡಿ ನೈವೇದ್ಯ, ನೀರಾಜನ ಮಾಡಿ, ಮಂತ್ರ ಪುಷ್ಪ ಸಮರ್ಪಿಸಿ ಒಂದೇ ವಿಧವಾದ ಚಿತ್ತದಿಂದ ಮಾನಸಿಕವಾಗಿ ಪೂಜೆ ಮಾಡುವ ಪದ್ಧತಿ ಅವರಿಗಿತ್ತು. ಪೂಜೆ ಮುಗಿಯುವವರೆಗೆ ಅದರಲ್ಲೇ ಅವರ ಮನಸ್ಸು ತೊಡಗಿರುತ್ತಿತ್ತು. ಈ ವಿಷಯವನ್ನು ಕುರಿತು ಅವರು ನನಗೆ ಹೇಳಿದ್ದರು. ಇದು ಮನಸ್ಸಿನ ಏಕಾಗ್ರತೆಗೆ ನಿದರ್ಶನ. ಮೇಲೆ ಹೇಳಿದ ಕೈವಲ್ಯೋಪನಿಷತ್ತಿನಲ್ಲಿ ಹೇಳಲ್ಪಟ್ಟ 'ಉಮಾಸಹಾಯಂ' ಎನ್ನುವುದನ್ನು ಕುರಿತು ಚಿಂತಿಸೋಣ. ನಾವು ಸಗುಣನಾದ ಭಗವಂತನನ್ನು ಚಿಂತಿಸುವಾಗ 'ಉಮಾಸಹಾಯಂ ಪರಮೇಶ್ವರಂ' ಎಂದು ಹೇಳಿದ ಪ್ರಕಾರ ಶಕ್ತಿಯೊಡನೆ ಪರಮೇಶ್ವರನನ್ನು ಚಿಂತಿಸುವುದು ವಿಶೇಷ. ಸಕಲ ಜಗತ್ತಿಗೆ ನಾಯಕನಾಗಿರುವುದರಿಂದ 'ಪ್ರಭು' ಎನ್ನುತ್ತಾರೆ. 'ತ್ರಿಲೋಚನಂ' — ಭಗವಂತನಿಗೆ ಮೂರು ಕಣ್ಣುಗಳು. ಧ್ಯಾನವೇ ಮೂರನೆಯ ಕಣ್ಣು. ಅದನ್ನು ತಿಳಿಸುವುದಕ್ಕಾಗಿಯೇ ಭಗವಂತನು ಮೂರು ಕಣ್ಣುಗಳುಳ್ಳವನೆಂದು ನಾವು ಹೇಳುತ್ತೇವೆ. 'ನೀಲಕಂಠ' - ಲೋಕಕ್ಕೆ ಒಂದು ದೊಡ್ಡ ಆಪತ್ತು ಉಂಟಾದಾಗ ಭಗವಂತನು ನಮ್ಮನ್ನು ಕಾಪಾಡಿದನು. 'ನಗಿಲಿತಂ ನೋದ್ಗೀರ್ಣಮೇವ ತ್ವಯಾ' (ಆ ವಿಷವನ್ನು ಬಾಯಿಂದ ಹೊರಗೂ ಬಿಡಲಿಲ್ಲ, ನುಂಗಲೂ ಇಲ್ಲ,) ಎಂದು ಹೇಳಿ —

> 'ಜ್ವಾಲೋಗ್ರಃ ಸಕಲಾಮರಾತಿಭಯದಃ ಕ್ಷ್ವೇಲಃ ಕಥಂ ವಾ ತ್ವಯಾ
> ದೃಷ್ಟಃ ಕಿಂ ಚ ಕರೇ ಧೃತಃ ಕರತಲೇ ಕಿಂ ಪಕ್ವಜಂಬೂಫಲಮ್ ।
> ಜಿಹ್ವಾಯಾಂ ನಿಹಿತಶ್ಚ ಸಿದ್ಧಘುಟಿಕಾ ವಾ ಕಂಠದೇಶೇ ಭೃತಃ
> ಕಿಂ ತೇ ನೀಲಮಣಿರ್ವಿಭೂಷಣಮಯಂ ಶಂಭೋ ಮಹಾತ್ಮನ್ವದ ॥'

Sri Vidyabharathi Book Centre, Sringeri

 CC-O. In Public Domain. Digitized by eGangotri

(ಆ ಜ್ವಲಿಸುವ, ಎಲ್ಲ ದೇವತೆಗಳಿಗೂ ಭಯವನ್ನುಂಟುಮಾಡುವ ವಿಷ ನಿನ್ನಿಂದ ಹೇಗೆ ನೋಡಲಾಯಿತು? ನೇರಳೆ ಹಣ್ಣಿನಂತೆ ಇದನ್ನು ನೀನು ಕೈಯಲ್ಲಿಟ್ಟುಕೊಂಡೆಯಾ? ಸಿದ್ಧ ಔಷಧಿಯಂತೆ ಬಗೆದು ನಾಲಿಗೆಯ ಮೇಲೆ ಈ ವಿಷವನ್ನು ಹಾಕಿಕೊಂಡೆಯಾ? ಎಲೈ ಶಂಭುವೇ! ಮಹಾತ್ಮನೇ! ವಿಷವನ್ನು ನೀಲಿ ಆಭರಣದಂತೆ ಕಂಠದಲ್ಲಿ ಧರಿಸಿದೆಯಾ? ಹೇಳು.) — ಈ ವಿಧವಾಗಿ ಭಗವತ್ಪಾದರು ನೀಲಕಂಠನನ್ನು ಸ್ತುತಿಸಿದರು. ಒಮ್ಮೆ ದೇವತೆಗಳೂ ರಾಕ್ಷಸರು ಸಮುದ್ರವನ್ನು ಕಡೆಯಲು ತೊಡಗಿದರು. ಒಂದು ದೊಡ್ಡ ವಿಚಾರಕ್ಕೆ ಕುಳಿತುಕೊಂಡರೆ ಮೊದಲು ಏನೋ ತೋರಿ ಕೊನೆಯಲ್ಲಿ ಸಿದ್ಧಾಂತ ತೀರ್ಮಾನವಾಗುವಂತೆ ಸಮುದ್ರವನ್ನು ಕಡೆಯುವಾಗ ಮೊದಲು ವಿಷ ಬಂದು ಬಿಟ್ಟಿತು. ಏನು ಮಾಡಬೇಕೆಂದು ಯಾರಿಗೂ ತೋರಲಿಲ್ಲ. ಆ ವಿಷದಿಂದ ದೊಡ್ಡ ಜ್ವಾಲೆ ಉಂಟಾಯಿತು. ಆಗ ಭಗವಂತನು ಬಂದು ಅದನ್ನು ತೆಗೆದುಕೊಂಡು ಬಾಯಿಯಲ್ಲಿ ಹಾಕಿಕೊಳ್ಳುವುದಬಿಟ್ಟನು. ಅದನ್ನು ನುಂಗದೆ ತನ್ನ ಗಂಟಲಿನಲ್ಲೇ ಇಟ್ಟು ಕೊಂಡನು. ಪುರಾಣ ಹೇಳುವವರು 'ಭಗವಂತನಲ್ಲಿ ಒಳಗೂ ಹೊರಗೂ ಬ್ರಹ್ಮಾಂಡವಿದೆ. ಆ ವಿಷವನ್ನು ಹೊರಗಿಟ್ಟರೆ ಹೊರಗಿನ ಬ್ರಹ್ಮಾಂಡ ಸುಟ್ಟು ಹೋಗುತ್ತದೆ, ಒಳಗಿಟ್ಟರೆ ಒಳಗಿರುವ ಬ್ರಹ್ಮಾಂಡ ಸುಟ್ಟು ಹೋಗುತ್ತದೆ. ಆದ್ದರಿಂದಲೇ ಗಂಟಲಿನಲ್ಲೇ ಇಟ್ಟುಕೊಂಡನು' ಎಂದು ಕಥೆ ಹೇಳುತ್ತಾರೆ.

'ನೀಲಕಂಠಂ ಪ್ರಶಾಂತಮ್'–ನೀಲಕಂಠನೆಂದು ನಾವು ನೆನೆಯುತ್ತಲೇ ಭಗವಂತನು ಎಲ್ಲಾ ಲೋಕಗಳನ್ನೂ ಕಾಪಾಡುವನೆಂದು ಜ್ಞಾನವಾಗುತ್ತದೆ.

'ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ'–ಹಾಗೆ ಯಾರು ಚಿಂತನೆ ಮಾಡುವವರು, 'ತಮಸಃ ಪರಸ್ತಾತ್ ಭೂತಯೋನಿಂ' ಎಂದು ಹೇಳಿದಂತೆ ಜ್ಯೋತಿರ್ಮಯವಾಗಿರುವ ಈ ಸಕಲ ಜಗತ್ತಿಗೂ ಕಾರಣನಾದ ಪರಮೇಶ್ವರನನ್ನು ಪಡೆಯುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ' ಎಂದು ಹೇಳಿದಂತೆ ಅವನನ್ನು ಪಡೆದ ಮೇಲೆ ಮತ್ತೆ ಜನ್ಮವಿಲ್ಲ. 'ಧ್ಯಾತ್ವಾಮುನಿಃ' (ಮುನಿ ಧ್ಯಾನವನ್ನು ಮಾಡಿ)–ಧ್ಯಾನವೆಂದರೇನು ?

ಕ್ಷಿಪ್ತ, ಮೂಢ, ವಿಕ್ಷಿಪ್ತ– ಈ ಮೂರು ಚಿತ್ತವನ್ನೂ ಇಟ್ಟುಕೊಂಡು ನಾವು ಧ್ಯಾನ ಮಾಡಲಾಗುವುದಿಲ್ಲವೆಂದು ನೋಡಿದೆವು. ಆದ್ದರಿಂದ ಧ್ಯಾನ ಮಾಡುವುದಕ್ಕೆ ಶಾಸ್ತ್ರದಲ್ಲಿ ಏಕಾಗ್ರವಾದ ಚಿತ್ತವಿರಬೇಕೆಂದು ಹೇಳಲ್ಪಟ್ಟಿದೆ. ಏಕಾಗ್ರವೆಂದರೆ– 'ವಿಜಾತೀಯ ಪ್ರತ್ಯಯಾ ತಿರಸ್ಕೃತ ಸಜಾತೀಯ ಪ್ರತ್ಯಯ ಪ್ರವಾಹಃ ಧ್ಯಾನಮ್' ಎಂದು ನಾವು ಸಾಮಾನ್ಯವಾಗಿ ಹೇಳುತ್ತೇವೆ.

'ಪ್ರೋಷಿತಭರ್ತೃಕಾ ಪತಿಂ ಧ್ಯಾಯತೀವ' ಎಂದು ಒಬ್ಬರು ಹೇಳಿದರು. ಗಂಡ ಊರಿನಲಿಲ್ಲ. ಹೆಂಡತಿಗೆ ಗಂಡನ ಮೇಲೆ ಬಹಳ ಪ್ರೀತಿ. ಅವಳು ತನ್ನ ಗಂಡನನ್ನು ಕುರಿತೇ ಚಿಂತಿಸುತ್ತಾಳೆ. ಹೇಗೆ ಚಿಂತಿಸುತ್ತಾಳೆ ಎಂದರೆ ನಾವು ಶಾಕುಂತಲ ನಾಟಕದಲ್ಲಿ ನೋಡಿದರೆ ಗೊತ್ತಾಗುತ್ತದೆ. ದುರ್ವಾಸರ ಶಾಪ ಏತಕ್ಕೆ ಶಕುಂತಲೆಗೆ ಬಂದಿತು? ತನ್ನ ಗಂಡನನ್ನು ಕುರಿತು ಯೋಚಿಸುತ್ತಿದ್ದ ಶಕುಂತಲೆ ದುರ್ವಾಸರನ್ನು ನೋಡಲಿಲ್ಲ. ಆಗ ದುರ್ವಾಸರು, 'ನೀನು ಯಾರನ್ನು ಕುರಿತು ಯೋಚಿಸುತ್ತಿದ್ದು ಎದುರಿಗೆ ಬಂದ ಋಷಿಯನ್ನು ಗೌರವಿಸಲಿಲ್ಲವೋ, ಅವನು ನಿನ್ನನ್ನು ಮರೆತುಬಿಡಲಿ' ಎಂದು ಶಪಿಸಿದರು.

ಹೀಗೆ ಏಕಾಗ್ರಚಿತ್ತವಿದ್ದರೆ ಎದುರಿಗೆ ಯಾವುದಾದರೂ ವಸ್ತುವಿದ್ದರೂ ಅದು ಕಣ್ಣಿಗೆ ತೋರುವುದಿಲ್ಲ. ಅದಕ್ಕೆ ಶಾಸ್ತ್ರದಲ್ಲಿ 'ವಿಜಾತೀಯ ಪ್ರತ್ಯಯಾ ತಿರಸ್ಕೃತ' ಎಂದು ಹೇಳುತ್ತಾರೆ. ಭಗವಂತನ ರೂಪದ ಜ್ಞಾನ ವಿರುವಾಗ ಬೇರೆ ಯಾವ ವಿಧವಾದ ಜ್ಞಾನವೂ ಇರುವುದಿಲ್ಲ. ಒಂದು ಚಿತ್ರವನ್ನು ನೋಡಿದರೆ, ಆ ಚಿತ್ರ ಮನಸ್ಸಿನಲ್ಲಿ ನಾಟಿಕೊಂಡಿರುವಾಗ ಅದು ಮಾತ್ರ ಮನಸ್ಸಿನಲ್ಲಿರುತ್ತದೆಯೇ ಹೊರತು ಬೇರೆ ವಿಚಾರವೇ ಇರುವುದಿಲ್ಲ. ಇದನ್ನೇ ಶಾಸ್ತ್ರದಲ್ಲಿ 'ವಿಜಾತೀಯ ಪ್ರತ್ಯಯಾ ತಿರಸ್ಕೃತ ಸ್ವಜಾತೀಯ ಪ್ರತ್ಯಯ ಪ್ರವಾಹಃ' ಎಂದು ಹೇಳಿರುವುದು. ಇದು ಧ್ಯಾನವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪಾಸನೆಯ ಉಚ್ಚಸ್ಥಿತಿ ಯೋಗವೆನ್ನಲ್ಪಡುತ್ತದೆ. ಈಗ ಯೋಗವನ್ನು ಕುರಿತು ನೋಡೋಣ. ಮಹರ್ಷಿ ಪತಂಜಲಿ ತಮ್ಮ ಯೋಗಸೂತ್ರದಲ್ಲಿ 'ಯೋಗಶ್ಚಿತ್ತವೃತ್ತಿ ನಿರೋಧಃ' ಎಂದಿದ್ದಾರೆ, ಚಿತ್ತ ವೃತ್ತಿಯನ್ನು ನಿರೋಧಿಸುವುದು (ತಡೆಯುವುದು) ಯೋಗ. ಯೋಗಕ್ಕೆ ಸಮಾಧಿ ಎಂದು ಅರ್ಥ. ಸಮಾಧಿ ಸಂಪ್ರಜ್ಞಾತ ಸಮಾಧಿ, ಅಸಂಪ್ರಜ್ಞಾತ ಸಮಾಧಿ ಎಂದು ಎರಡು ಬಗೆ. ಏಕಾಗ್ರ ಮನಸ್ಥಿತಿಗೆ ಸಂಬಂಧ ಪಟ್ಟಿದ್ದು ಸಂಪ್ರಜ್ಞಾತ ಸಮಾಧಿ. ನಿರುದ್ಧ ಸ್ಥಿತಿಗೆ ಸಂಬಂಧ ಪಟ್ಟಿದ್ದು ಅಸಂಪ್ರಜ್ಞಾತ ಸಮಾಧಿ. ಮೊದಲು ಸಂಪ್ರಜ್ಞಾತ ಸಮಾಧಿಯನ್ನು ಕುರಿತು ಚಿಂತಿಸೋಣ. ಯಾವುದಾದರೂ ಆಲಂಬನ (ಆಧಾರ) ವನ್ನು ಇಟ್ಟುಕೊಂಡು ಅದರ ಮೇಲೆ ಮನಸ್ಸನ್ನು ಸ್ಥಿರ ಪಡಿಸಿದರೆ ಅದು ಸಂಪ್ರಜ್ಞಾತ ಯೋಗವಾಗುತ್ತದೆ. ಹೀಗೆ ಏಕಾಗ್ರತೆಯಿಂದ ಕೂಡಿದ ಮನಸ್ಸಿನೊಡನೆ ಮಾಡುವ ಧ್ಯಾನದಲ್ಲಿ ಒಂದು ವಿಶೇಷವಿದೆ. ಇದನ್ನು ವಿವರಿಸುವುದಕ್ಕೆ ಮೊದಲು 'ತ್ರಿಪುಟಿ ಭಾನಂ' ಎನ್ನುವುದನ್ನು ಕುರಿತು ಗಮನ ಸೆಳೆಯಬೇಕು. ಜ್ಞಾನಂ, ಜ್ಞೇಯಂ, ಜ್ಞಾತಾ ಎಂದು ಮೂರು ತೋರುವಿಕೆಗೆ 'ತ್ರಿ ಪುಟಿ ಭಾನಂ' ಎಂದು ಹೆಸರು. ಜ್ಞಾನವೆನ್ನುವುದು ಅರಿವು, ಜ್ಞಾನದ ವಸ್ತು ಜ್ಞೇಯ. ಈ ಜ್ಞಾನಕ್ಕೆ ಆಧಾರವಾಗಿರುವವನು ಜ್ಞಾತಾ. ನಾವು ಮತ್ತೊಬ್ಬನೊಡನೆ ಮಾತನಾಡುವಾಗ 'ನಾನು ಇದ್ದೇನೋ ಇಲ್ಲವೋ' ಎನ್ನುವ ಭಿನ್ನತೆಯನ್ನು ಇಟ್ಟು ಕೊಂಡಿರುವುದಿಲ್ಲ. 'ನಾನು ಇದ್ದೇನೆ' ಎನ್ನುವ ತೀರ್ಮಾನ ನಮಗೆ ಯಾವಾಗಲೂ ಇರುತ್ತದೆ, ಏಕೆಂದರೆ 'ನಾನು ಇದ್ದೇನೆ' ಎನ್ನುವ ಜ್ಞಾನ ಸೂಕ್ಷ್ಮವಾಗಿ ಯಾವಾಗಲೂ ಇದ್ದೇ ಇರುತ್ತದೆ. ಅದರಿಂದ ಆತ್ಮನು ತಾನೇ ಪ್ರಕಾಶಿಸುತ್ತಾನೆಂದು ತಿಳಿಯಬಹುದು. ಜ್ಞಾನವಿರುವಾಗ ವಿಷಯ ತೋರುತ್ತದೆ. ಇಲ್ಲಿ ಜ್ಞೇಯವನ್ನು ವಿಷಯವಾಗುಳ್ಳದ್ದು ಜ್ಞಾನ. ಧ್ಯಾನ ಮಾಡುವಾಗ 'ಧ್ಯಾನ ಮಾಡುತ್ತೇನೆ' ಎನ್ನುವ ಅರಿವು ಇದ್ದೇ ಇರುತ್ತದೆ, ಧ್ಯಾನ ಮಾಡುವಾಗ ಈ ತ್ರಿಪುಟಿ ಭಾನವಿದ್ದು ಧ್ಯಾನದ ಉಚ್ಚಸ್ಥಿತಿಯಲ್ಲಿ ಬರುವ ಈ ಏಕಾಗ್ರ ವೃತ್ತಿಗೆ ಸಂಪ್ರಜ್ಞಾತ ಸಮಾಧಿ ಎನ್ನುತ್ತೇವೆ. ಭಗವಂತನನ್ನು ಚಿಂತಿಸುವಾಗ 'ನಾನು ಇದ್ದೇನೆ' ಎಂದೂ 'ಭಗವಂತನನ್ನು ಚಿಂತಿಸುತ್ತಿದ್ದೇನೆ'

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದೂ ಸೂಕ್ಷ್ಮವಾಗಿ ತೋರುತ್ತಿರುತ್ತದೆ. ಹೀಗೆ ಮಾಡುವ ಧ್ಯಾನದ ಉತ್ತಮವಾದ ಸ್ಥಿತಿಗೆ ಸಂಪ್ರಜ್ಞಾತ ಸಮಾಧಿಯೆಂದು ಹೆಸರು. ಏಕಾಗ್ರ ಮನಸ್ಥಿತಿಗೂ ಮೇಲಾದ ಸ್ಥಿತಿ ನಿರುದ್ಧ. ಈ ಸ್ಥಿತಿಯಲ್ಲಿ, 'ನಾನು ಜ್ಞಾನವನ್ನು ಅನುಭವಿಸುತ್ತಿದ್ದೇನೆ' ಎಂದು ಈ ವಿಧವಾಗಿ ತ್ರಿಪುಟಿ ಭಾನವಿಲ್ಲದ ಕೇವಲ ವಸ್ತ್ವಾಕಾರ ವಿಷಯ ಜ್ಞಾನ (ಧ್ಯಾನಮಾಡುವ ವಸ್ತುವಿನ ಬಗ್ಗೆ ಇರುವ ಅರಿವು) ವಿದ್ದು ಅದು ಅಸಂಪ್ರಜ್ಞಾತ ಸಮಾಧಿ ಎನ್ನಲಾಗುವುದು. ನಾವು ಇದನ್ನು ಅನುಭವದಲ್ಲಿ ಕಾಣಬಹುದು. ಕೆಲವೊಮ್ಮೆ ಈ ಜ್ಞಾನ ಬಂದಿದೆಯೆಂದು ತೋರುತ್ತದೆ. ಕೆಲವೊಮ್ಮೆ ಜ್ಞಾನ ಬರುತ್ತದೆಯೆಂದು ತೋರುತ್ತದೆ. ಇದಕ್ಕೂ ಸುಷುಪ್ತಿಗೂ ಏನು ಭೇದವೆಂದು ಕೇಳಿದರೆ ಸುಷುಪ್ತಿಯಲ್ಲಿ ಅಜ್ಞಾನವಿರುತ್ತದೆ. ವಿಷಯವಿಲ್ಲ. ಅಸಂಪ್ರಜ್ಞಾತ ಸಮಾಧಿಯಲ್ಲಿ ವಿಷಯ ತೋರುತ್ತಿರುತ್ತದೆ. ಆದರೆ ವಿಷಯ ತೋರುತ್ತಿದೆ ಎನ್ನುವುದು ಮಾತ್ರ ತೋರುವುದಿಲ್ಲ. ಅಂದರೆ ತರ್ಕದಲ್ಲಿ ಹೇಳುವ ಅನುವ್ಯವಸಾಯವೆನ್ನುವುದು ಇಲ್ಲ. ಹೀಗೆ ಸಮಾಧಿಯನ್ನು ಸಂಪ್ರಜ್ಞಾತ ಸಮಾಧಿ, ಅಸಂಪ್ರಜ್ಞಾತ ಸಮಾಧಿಯೆಂದು ಎರಡು ವಿಧವಾಗಿ ವಿಭಜಿಸಿ. ಏಕಾಗ್ರವಾದ ಮನಸ್ಸಿನಿಂದ ಚಿಂತನೆ ಮಾಡುವಾಗ ಸಂಪ್ರಜ್ಞಾತ ಸಮಾಧಿ ಎನ್ನುವ ನಿರುದ್ಧ ಸ್ಥಿತಿಯಲ್ಲಿ ಅಸಂಪ್ರಜ್ಞಾತ ಸಮಾಧಿಯನ್ನು ಹೇಳಿದರು. ಚಿತ್ತ ವೃತ್ತಿನಿರೋಧವೆಂದರೆ ಏನು? ಚಿತ್ತಕ್ಕೆ ಆತ್ಮನಾದಿಯಾಗಿ ಯಾವ ವಿಷಯವೂ ಇಲ್ಲದೆ ನಿರೋಧವೆನ್ನುವುದು ಇಲ್ಲ. ಚಿತ್ತಕ್ಕೆ ವಿಷಯವಿದೆ. ಆದರೆ ಅದು ಬೇರೆ ವಿಷಯಗಳಲ್ಲಿ ಚಲನವಿಲ್ಲದೆ ಒಂದೇ ವಿಷಯದಲ್ಲಿರುತ್ತದೆ ಎನ್ನುವುದನ್ನೇ 'ಯೋಗಶ್ಚಿತ್ತವೃತ್ತಿ ನಿರೋಧಃ' ಎಂದು ಹೇಳಿದ್ದಾರೆ. ಈ ವಿಧವಾಗಿ ಮನಸ್ಸನ್ನು ವಶದಲ್ಲಿಟ್ಟುಕೊಂಡು ಈಶ್ವರನನ್ನು ಧ್ಯಾನಿಸುತ್ತೇವೆ.

ಜಪಮಾಡುವಾಗ ಮನಸ್ಸು ಏಕಾಗ್ರವಾಗಿರುವುದಲ್ಲದೆ ನಿರುದ್ಧವಾಗಿರುವುದಿಲ್ಲ. ಮಂತ್ರಜಪದಲ್ಲಿ ಮಂತ್ರದ ವಸ್ತುಜ್ಞಾನವೂ, ಶಬ್ದಜ್ಞಾನವೂ ಇರುತ್ತವೆ. ಪ್ರಣವ ಗಾಯತ್ರಿಯಂಥ ಮಂತ್ರಗಳನ್ನು ಮನಸ್ಸು ಉಚ್ಚರಿಸಿಕೊಂಡಿರುವುದಕ್ಕೆ 'ಶಬ್ದಾನುವಿದ್ಧವು' ಎಂದು ಹೆಸರು. ಕೆಲವೊಮ್ಮೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನ ರೂಪವನ್ನು ಚಿಂತಿಸುತ್ತೇವೆ. ಅದು 'ರೂಪಾನುವಿದ್ಧಮ್' ಎನ್ನಲ್ಪಡುತ್ತದೆ. ಈ ಎರಡೂ ಇಲ್ಲದೆ ನಿರ್ಗುಣ ಬ್ರಹ್ಮವನ್ನು ಚಿಂತನೆ ಮಾಡಲು ಸಾಧ್ಯವೇ ಎನ್ನುವ ಪ್ರಶ್ನೆಗೆ, ಸಾಧ್ಯ ಎನ್ನುವುದೇ ಸಿದ್ಧಾಂತ ವಾಗುತ್ತದೆ. ನಿರ್ಗುಣ ಚಿಂತನೆಯಲ್ಲಿ ಜ್ಞಾನ ಬರುವುದೇ ಹೊರತು ಸಮಾಧಿ ಹೇಗೆ ಬರುತ್ತದೆಯೆಂದು ಕೇಳಿದರೆ, ಬರುತ್ತದೆಯೆಂದೇ ಉತ್ತರ ಹೇಳಿದ್ದಾರೆ, ಜ್ಞಾನ ಬೇರೆ, ಧ್ಯಾನಬೇರೆ, ಧ್ಯಾನವೆಂದರೆ ಪರಬ್ರಹ್ಮ ಸಾಕ್ಷಾತ್ಕಾರವಾಗಿ ಧ್ಯಾನಾತಿಶಯದಲ್ಲಿ ಒಂದು ಸ್ಫುರಣೆಯಾಗುತ್ತದೆ. ಆ ಸ್ಫುರಣೆಯಾದರೆ ಮತ್ತೆ ಧ್ಯಾನ ಮಾಡಬೇಕಾಗಿಲ್ಲ. ಆ 'ಸ್ಫುರಣೆ' ಹಾಗೆಯೇ ಇದ್ದುಬಿಡುತ್ತದೆ. ಧ್ಯಾನಮಾಡಬೇಕೆನ್ನುವ ತೀರ್ಮಾನವನ್ನು ಮನಸ್ಸಿ ನಲ್ಲಿಟ್ಟುಕೊಂಡು ಚಿಂತನೆಮಾಡುವುದು ಧ್ಯಾನವಾಗುತ್ತದೆ. ಹೀಗೆ ಮಾಡುವಾಗ ಮನಸ್ಸಿನಲ್ಲಿ ಪ್ರಕಾಶ ತೋರುವವರೆಗೆ ಪ್ರಯತ್ನಮಾಡಬೇಕು. ಪ್ರಕಾಶ ತೋರಿದಮೇಲೆ ವಸ್ತು ತಾನಾಗಿಯೇ ತೋರುತ್ತದೆ. ಹಾಗಿರು ವುದು ಅಸಂಪ್ರಜ್ಞಾತ ಸಮಾಧಿ ಆಗುತ್ತದೆ. ನಾವು ಅಸಂಪ್ರಜ್ಞಾತ ಸಮಾಧಿಯಲ್ಲಿದ್ದುಕೊಂಡು ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯಬೇಕು. ಈ ಸ್ಥಿತಿಯನ್ನು ಪಡೆದರೆ,

'ಯೋಗಾಭ್ಯಾಸವಶೀಕೃತೇನ ಮನಸಾ ತನ್ನಿರ್ಗುಣಂ
ನಿಷ್ಕ್ರಿಯಮ್ ।
ಜ್ಯೋತಿಃ ಕಿಂಚನ ಯೋಗಿನೋ ಪಶ್ಯನ್ತಿ .... ॥'

(ಯೋಗಾಭ್ಯಾಸದಿಂದ ಮನಸ್ಸನ್ನು ವಶಪಡಿಸಿಕೊಂಡು ಯೋಗಿಗಳು ನಿರ್ಗುಣವೂ, ನಿಷ್ಕ್ರಿಯವೂ ಆದ ಜ್ಯೋತಿಯನ್ನು ಕಾಣುತ್ತಾರೆ) ಎಂದು ಹೇಳಿದಂತೆ ಬೇರೆ ಎಲ್ಲವನ್ನು ಬಿಟ್ಟುಬಿಡುತ್ತಾರೆ. ಹೀಗೆ ನಿರುದ್ಧವಾದ ಮನಸ್ಸಿನಿಂದ ಧ್ಯಾನಮಾಡಲು ಸಾಧ್ಯವಾಗದೇ ಹೋದರೆ ಮನಸ್ಸನ್ನು ಏಕಾಗ್ರವನ್ನಾಗಿ ಮಾಡಿಕೊಂಡು ಪರಮಾತ್ಮನನ್ನು ಚಿಂತಿಸಿದರೆ ಅದಕ್ಕೆ ಉಪಾಸನೆ ಎನ್ನುತ್ತಾರೆ.

ಈ ಉಪಾಸನೆ ಸಿದ್ಧಿಸಬೇಕಾದರೆ ಯಮ, ನಿಯಮಗಳು ಅವ ಶ್ಯಕ. ಈ ಯಮ ನಿಯಮಗಳಿಲ್ಲದೆ 'ನಾನು ಧ್ಯಾನ ಮಾಡುತ್ತಿದ್ದೇನೆ

Sri Vidyabharathi Book Centre, Sringeri

 CC-O. In Public Domain. Digitized by eGangotri

ನಾನು ಯಾವಾಗಲೂ ನಿರುದ್ಧವಾದ ಚಿತ್ತದಲ್ಲಿ, ಸಮಾಧಿಯಲ್ಲಿದ್ದೇನೆ ಎಂದು ಯಾರಾದರೂ ಹೇಳಿದರೆ ಅವುಗಳು ಕೇವಲ ಮಾತುಗಳೇ ಹೊರತು ನಿಜವಲ್ಲ. ನನ್ನಲ್ಲಿ ಕೋಟಿ ರೂಪಾಯಿಗಳಿವೆ ಎಂದು ಹೇಳಿಕೊಂಡು ಗುಡಿಸಿಲಿನಲ್ಲಿ ಕುಳಿತಿದ್ದರೆ ಅವನ ಬಳಿ ಕೋಟಿ ರೂಪಾಯಿಗಳಿವೆಯೆಂದು ಯಾರಾದರೂ ನಂಬುತ್ತಾರೆಯೇ ? ಅದಕ್ಕೆ ತಕ್ಕಂತೆ ಯಾವುದಾದರು ಒಂದು ದೊಡ್ಡ ಮನೆಯಲ್ಲಿ ಇದ್ದರೆ ಮಾತ್ರ ನಂಬುತ್ತಾರೆ.

ಯಮ – ನಿಯಮ ಎಂದರೇನು ?

'ಅಹಿಂಸಾಸತ್ಯಾಸ್ತೇಯಬ್ರಹ್ಮಚರ್ಯಾಪರಿಗ್ರಹಾಯಮಾಃ ।' ಎಂದು ಹೇಳಲ್ಪಟ್ಟಿದೆ.

'ಅಹಿಂಸಾಪ್ರತಿಷ್ಠಾಯಾಂ ತತ್ಸನ್ನಿಧೌ ವೈರತ್ಯಾಗಃ ।'

(ಅಹಿಂಸೆಯಲ್ಲಿ ಪ್ರತಿಷ್ಠೆ ಪಡೆದವನ ಸನ್ನಿಧಿಯಲ್ಲಿ ವಿರೋಧತನವನ್ನು ಬಿಟ್ಟು ಬಿಡುತ್ತಾರೆ.) ಅಹಿಂಸಾ ಪ್ರತಿಷ್ಠೆ ಎನ್ನುವುದು ಬೇರೆ, ಅಹಿಂಸೆ ಎನ್ನುವುದು ಬೇರೆ. 'ನನ್ನ ಬಾಳಿಗೆ ಬೇಕಾದ ಹಿಂಸೆಯಾದರೆ ಅದು ಮಾಡಬಹುದು. ಆದರೆ, ಅನಾವಶ್ಯಕವಾಗಿ ಹಿಂಸೆ ಮಾಡುವುದಿಲ್ಲ' ಎನ್ನುವ ಭಾವನೆ ಇದ್ದರೆ ಅದು ಅಹಿಂಸೆ. ಯಾವ ಕಾಲದಲ್ಲಾದರೂ, ಯಾವ ಜಾಗದಲ್ಲಾದರೂ ಯಾವುದೊಂದು ಪ್ರಾಣಿಗೂ ಹಿಂಸೆಯಾಗುವುದಿಲ್ಲ ಎನ್ನುವ ತೀರ್ಮಾನವನ್ನು ಮಾಡಿಕೊಂಡು ಅದರ ಪ್ರಕಾರ ನಡೆಯುತ್ತಾ ಬಂದರೆ ಅದು ಅಹಿಂಸಾ ಪ್ರತಿಷ್ಠೆ ಯಾಗುತ್ತದೆ. ನಾವು ಪುರಾಣಗಳಲ್ಲಿ ಅಹಿಂಸಾ ಪ್ರತಿಷ್ಠೆಯನ್ನು ಎಲ್ಲೆ ಮುಟ್ಟಿದ ಋಷಿಗಳಲ್ಲಿ ಆಶ್ರಮದಲ್ಲಿ ಪರಸ್ಪರ ವಿರೋಧಿಗಳಾಗಿದ್ದ ಪ್ರಾಣಿಗಳೂ ತಮ್ಮ ಹಿಂದಿನ ವಿರೋಧವನ್ನು ಬಿಟ್ಟು ಸ್ವಾಭಾವಿಕವಾಗಿ ಹೊಂದಿಕೊಂಡು ಬಂದಿವೆಯೆಂದು ನೋಡುತ್ತೇವೆ. ಹೀಗೆ ಅಹಿಂಸೆಯಲ್ಲಿ ಸ್ಥಿರವಾಗಿದ್ದುದರಿಂದ ಅವರ ಅಂತಃಕರಣದಲ್ಲಿ ಅಂಥ ಶಕ್ತಿ ಉಂಟಾಯಿತು. ನಮಗೆಲ್ಲ ಅಹಿಂಸಾ ಪ್ರತಿಷ್ಠೆ ಬಂದು ಬಿಟ್ಟಿದೆಯೆಂದು ಹೇಳಲಾಗುವುದಿಲ್ಲ, ಏಕೆಂದರೆ ಯಾವುದಾದರೂ ಒಂದು ಕೆಲಸ ಮಾಡುವುದಕ್ಕೆ ಚಿಕ್ಕ ಹಿಂಸೆ ಮಾಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದರೂ ಕೆಲಸ ಆದರೆ ಸಾಕು' ಎಂದೆನಿಸುತ್ತದೆ. ಅಹಿಂಸಾಪ್ರತಿಷ್ಠೆ ಬಂದರೆ ಮಾತ್ರ ಅಜ್ಞಾನಕ್ಕೆ ದೂರವಿರುವ ಪರಮೇಶ್ವರನನ್ನು ಪಡೆಯ ಬಹುದು. ಇದೇ ಮೊದಲು ನುಡಿದ 'ಉಮಾ ಸಹಾಯಂ - - -' ಎಂದು ಆರಂಭಿಸಿದ ಉಪನಿಷತ್ತಿನ ವಾಕ್ಯದಲ್ಲಿರುವ 'ತಮಸಃ ಪರಸ್ತಾತ್' ಎನ್ನುವ ಮಾತುಗಳಿಂದ ಸೂಚಿತವಾಗಿದೆ. ಆದರೆ ಎಷ್ಟೋ ಮಂದಿ ಹಾಗೆ ಇಷ್ಟಪಡದೇ ಲೌಕಿಕವಾದ ಫಲಕ್ಕಾಗಿ ಧ್ಯಾನ ಮಾಡುತ್ತಾರೆ ಅದಕ್ಕೆ ಅಹಿಂಸೆಯಾದರೂ ಇರಬೇಕು. ಅಹಿಂಸೆ ಇದ್ದರೆ ಮಾತ್ರ ಶಾಸ್ತ್ರ ವಿಹಿತವಾದ ಕರ್ಮಗಳನ್ನು ಮಾಡುತ್ತಾ ಭಗವಂತನನ್ನು ಚಿಂತಿಸಬಹುದು

'ಪಥ್ಯಮೌಷಧಸೇವಾ ಚ ಕ್ರಿಯತೇ ಯೇನ ರೋಗಿಣಾ।
ಆರೋಗ್ಯ ಸಿದ್ಧಿರ್ದೃಷ್ಟಾಸ್ಯ - - - - - ॥'

ಔಷಧಿ ಕುಡಿದು ಪಥ್ಯವಿರುವುದಿಲ್ಲ ಎಂದರೆ ಔಷಧಿ ಸರಿಯಾಗಿ ಕೆಲಸ ಮಾಡುವುದಿಲ್ಲ. ಕೆಲವು ವೇಳೆ ಔಷಧಿ ಪೂರ್ತಿ ಕೆಲಸ ಮಾಡು ವುದಿಲ್ಲ. ಅದೇ ರೀತಿ ಪರಮಾರ್ಥವನ್ನು ಪಡೆಯಲು ನಾವು ಮಾಡುವ ಪ್ರಯತ್ನಗಳು ಸಿದ್ಧಿಸಬೇಕಾದರೆ ಅಹಿಂಸೆಯನ್ನು ಅವಲಂಬಿಸಬೇಕು.

ಅನಂತರ 'ಸತ್ಯ' ಎನ್ನುವುದು ಹೇಳಲಾಗಿದೆ. 'ನಿಜ ಹೇಳುತ್ತೇನೆ' ಎಂದು ಎಲ್ಲರೂ ಹೇಳಬಹುದು. ಆದರೆ ಪೂರ್ತಿಯಾಗಿ ಸತ್ಯವಾಗಿರು ವುದು ಸ್ವಲ್ಪ ಕಷ್ಟವೇ. ತಮಾಷೆಯಾಗಿ ಒಂದು ಕಥೆ ಹೇಳುವುದುಂಟು. 'ನಾನು ಸುಳ್ಳು ಹೇಳುವುದಿಲ್ಲ' ಎನ್ನುವ ಒಬ್ಬನು ಸಾಕ್ಷಿ ಹೇಳುವು ದಕ್ಕಾಗಿ ಹೋದನು. ನ್ಯಾಯಾಧೀಶನು ಅವನಿಗೆ 'ಸತ್ಯವನ್ನು ಹೇಳ ಬೇಕು' ಎಂದು ಹೇಳಿದಾಗ ಅವನು, 'ನನ್ನ ಕೈಯಲ್ಲಿ ಪ್ರಾಣವಿರು ವವರೆಗೂ ನಾನು ಸತ್ಯವನ್ನೇ ಹೇಳುತ್ತೇನೆ' ಎಂದನು. 'ಪ್ರಾಣ (ಜೀವ) ಇರುವವರೆಗೆ ಇವನು ಸತ್ಯವನ್ನೇ ಹೇಳುತ್ತಾನೆ' ಎಂದು ನ್ಯಾಯಾಧೀಶನು ಭಾವಿಸಿದನು. ಆದರೆ ಸಾಕ್ಷಿಹೇಳುವವನು ಹೇಳಿದ್ದೆಲ್ಲಾ ಸುಳ್ಳು. 'ಜೀವ ಇರುವವರೆಗೆ ಸತ್ಯವನ್ನೇ ಹೇಳುತ್ತೇನೆಂದು ಹೇಳಿದೆಯಲ್ಲಾ!' ಎಂದು ಕೇಳಿದಾಗ ಅವನು, 'ನಾನು ಸ್ವಾಮಿ, ಆದಕ್ಕಾಗಿಯೇ ಕೈಯಲ್ಲಿ ಒಂದು

Sri Vidyabharathi Book Centre, Sringeri

 CC-O. In Public Domain. Digitized by eGangotri

ಹುಳು ಇಟ್ಟುಕೊಂಡಿದ್ದೆ. ಸುಳ್ಳು ಹೇಳಬೇಕು ಎಂದು ತೋರಿದಾಗ ಹುಳುವನ್ನು ಸಾಯಿಸಿಬಿಟ್ಟೇ ಇಷ್ಟು ಸುಳ್ಳನ್ನು ಹೇಳಿದೆ. ಕೈಯಲ್ಲಿ ಜೀವ ಇರುವವರೆಗೆ ಸುಳ್ಳು ಹೇಳಲಿಲ್ಲ' ಎಂದನು. ಇದು ಸತ್ಯವೇ? ಸತ್ಯವೇ ಅಲ್ಲ.

ಯಾವ ಸಮಯದಲ್ಲೂ ಬೇರೊಬ್ಬರಿಗೆ ಯಾವ ವಿಷಯವನ್ನೂ ಬೇರೆ ಅರ್ಥ ಬರುವಂತೆ ಹೇಳಬಾರದು. ಬೇರೆ ಅರ್ಥ ಬರುವಂತೆ ಒಂದು ಮಾತನ್ನು ಹೇಳಿ ತಾನು ಸರಿಯಾಗಿಯೇ ಹೇಳಿದಂತೆ ತೋರಿಸಿ ಕೊಂಡರೆ ಅದಕ್ಕೆ ಛಲವೆಂದು ಹೆಸರು. ಅದು ಇರಬಾರದು.

ಅನಂತರ 'ಅಸ್ತೇಯ' ಎನ್ನುತ್ತಾರೆ. ಮನಸಾ, ವಾಚಾ, ಕರ್ಮಣಾ ಯಾರೂ ಕಳ್ಳತನ ಮಾಡಬಾರದು. ವಸ್ತುವನ್ನು ಕಳ್ಳತನ ಮಾಡಬೇಕೆಂದು ತೋರುತ್ತದೆಂದು ಮತ್ತೊಬ್ಬರೊಡನೆ ಹೇಳಿದರೆ ಅದು ಮಾತಿನಿಂದ (ವಾಚಾ) ಮಾಡಲ್ಪಟ್ಟ ಕಳ್ಳತನ. ಕಳ್ಳತನ ಮಾಡುವುದು ತಪ್ಪೆಂದು ಎಲ್ಲರಿಗೂ ಗೊತ್ತು. ಏಕೆಂದರೆ ಕಳ್ಳತನ ಮಾಡಿದುದು ತಿಳಿದರೆ ಪೋಲಿಸನು ಹಿಡಿದುಕೊಳ್ಳುತ್ತಾನೆ. ಆದರೆ ಮಾತಿನಿಂದಲೂ, ಮನಸ್ಸಿನಿಂದಲೂ ಮಾಡಬಹುದಾದ ಕಳ್ಳತನವನ್ನು ತಪ್ಪೆಂದು ಎಷ್ಟೋ ಜನ ಭಾವಿಸುವುದಿಲ್ಲ. ಆದರೆ, ಅದೂ ತಪ್ಪು. ಹೀಗೆ ಮನಸಾ, ವಾಚಾ, ಕರ್ಮಣಾ ಉಂಟಾಗುವ ಕಳ್ಳತನವಿಲ್ಲದೆ ಇದ್ದರೆ ಒಂದು ವಿಶೇಷವಾದ ಸಂಸ್ಕಾರ ಮತ್ತು ಶಕ್ತಿ ಇರುತ್ತದೆ. ನಾವು ಯಾರಾದರೂ ಹಾಗೆ ಕಳ್ಳತನ ಮಾಡುತ್ತೇವೆಯೇ ಎಂದರೆ, ಒಂದು ಕರ್ಚೀಫು ಎಲ್ಲಾದರೂ ಸಿಕ್ಕಿದರೆ ಯಾರೂ ಕಳ್ಳತನ ಮಾಡುವುದಿಲ್ಲ. ಆದರೆ ಒಂದು ತೋಡ ಒಂದು ಉಂಗುರ ಯಾರೂ ಇಲ್ಲದ ಸಮಯದಲ್ಲಿ ಸಿಕ್ಕಿದರೆ, ಯಾರೂ ಇಲ್ಲ, ತೆಗೆದುಕೊಳ್ಳೋಣ ಎನಿಸುತ್ತದೆ. ಕರ್ಚೀಫಿನ ವಿಷಯದಲ್ಲಿ ತೋರು ವಂತೆಯೇ ಉಂಗುರದ ವಿಷಯದಲ್ಲಿಯೂ ತೋರಿದರೆ ಆವಾಗಲೇ ನಿಜ ವಾಗಿಯೂ ಅಸ್ತೇಯವಿದೆಯೆಂದು ಹೇಳಬಹುದು. ಅದನ್ನು ಬಿಟ್ಟು, ಸಾಮಾನ್ಯವಾದ ವಸ್ತುವಿನ ವಿಷಯದಲ್ಲಿ 'ಇದು ಬೇಡ' ಎಂದು ತೋರಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ತಾನು ಸಂಪಾದಿಸುವುದಕ್ಕೆ ಆಗದೇ ಇರುವ ವಸ್ತುವಿನ ವಿಷಯದಲ್ಲಿ ಇದು ಮಾತ್ರ ಪರವಾಗಿಲ್ಲ' ಎಂದು ತೋರಿದರೆ ಅದು ಅಸ್ತೇಯವಲ್ಲ. ಅಸ್ತೇಯವೆನ್ನುವುದು ಇದ್ದರೆ ಏನು ಫಲ ಎಂದರೆ —

'ಅಸ್ತೇಯ ಪ್ರತಿಷ್ಠಾಯಾಂ ಸರ್ವರತ್ನೋಪಸ್ಥಾನಮ್ ।'

(ಅಸ್ತೆಯದಲ್ಲಿ ಪ್ರತಿಷ್ಠೆ ಉಂಟಾದರೆ ಎಲ್ಲಾ ರತ್ನಗಳ ಪ್ರಾಪ್ತಿಯೂ ಆಗುತ್ತದೆ.) ಎಂದು ಹೇಳಿದ್ದಾರೆ.

'ಬ್ರಹ್ಮಚರ್ಯಪ್ರತಿಷ್ಠಾಯಾಂ ವೀರ್ಯಲಾಭಃ ।'

ಬ್ರಹ್ಮಚರ್ಯ ಪ್ರತಿಷ್ಠೆ ಉಂಟಾದರೆ ಸಾಮರ್ಥ್ಯ ಉಂಟಾಗುತ್ತದೆ. ಬ್ರಹ್ಮಚರ್ಯವೆಂದರೆ ಇಂದ್ರಿಯನಿಗ್ರಹ. ಅದು ಶಾಸ್ತ್ರೀಯವಾದುದು. ಗೃಹಸ್ಥನು ಬ್ರಹ್ಮಚಾರಿಯೋ ಅಲ್ಲವೇ ಎನ್ನುವ ಪ್ರಶ್ನೆ ಇದೆ. ಒಂದು ಜಾಗದಲ್ಲಿ ಆಪಸ್ತಂಬರು, ಗೃಹಸ್ಥನು ಪುತ್ರನನ್ನು ಪಡೆಯುವುದು ಧರ್ಮ ಅನಂತರ ಅವನಿಗೆ ವಿಷಯ ಭೋಗ ಬೇಕೆ, ಬೇಡವೆ ಎಂದು ಕೇಳಿದರೆ ಅನ್ಯೇತು ಕಾಮಜಾಃ ಪ್ರೋಕ್ತಾಃ' ಎಂದು ಹೇಳಿದರು. ಮೊದಲು ಅವನು ಪುತ್ರನನ್ನು ಪಡೆಯುವುದು ನಿಯಮ. ಅನಂತರ ಅವನಿಗೆ ಪುತ್ರಪ್ರಾಪ್ತಿಯಾದರೆ ಅದು ಅವನ ಇಷ್ಟದಿಂದಲೇ ಆದದ್ದು. ಧರ್ಮದಿಂದ ಮಾತ್ರ ಬಂದದು ಎನ್ನುವುದಿಲ್ಲ. ಆದ್ದರಿಂದ ಗೃಹಸ್ಥನು ಈ ರೀತಿ ನಡೆದುಕೊಂಡರೆ ಅವನೂ ಬ್ರಹ್ಮಚಾರಿಯೋ ಎಂದು ಹೇಳಿದರು.

ಕೊನೆಯಲ್ಲಿ ಅಪರಿಗ್ರಹ ಎನ್ನುವುದನ್ನು ಹೇಳಿದರು. ಮತ್ತೊಬ್ಬರ ವಸ್ತುಗಳಿಗೆ ಆಸೆ ಪಡಬಾರದು, ಅಯಾಚಿತ ಭಟ್ಟಾಚಾರ್ಯರೆನ್ನುವವರು ಒಬ್ಬರಿದ್ದರು. ಅವರು ಯಾಚನೆ ಮಾಡುತ್ತಿರಲಿಲ್ಲ; ಆದರೆ ಯಾರು ಏನು ಕೊಟ್ಟರೂ ತೆಗೆದುಕೊಳ್ಳುತ್ತಿದ್ದರು. ಅದಕ್ಕೆ ಒಬ್ಬರು, 'ಇದು ಪ್ರಯೋಜನವಿಲ್ಲ. ನೀನು ಅಪರಿಗ್ರಹ ಭಟ್ಟಾಚಾರ್ಯನಾಗಬೇಕು' ಎಂದರು. ನಮಗೆ ಯಾರು ಏನು ಕೊಟ್ಟರೂ ತೆಗೆದುಕೊಳ್ಳಬೇಕೆಂಬ ಆಸೆ ಮನಸ್ಸಿನಲ್ಲಿದೆ. ನಾವಾಗಿಯೋ ಕೇಳಿದರೆ ಇತರರು ಕೊಡುತ್ತಾರೆಯೋ ಇಲ್ಲವೋ

Sri Vidyabharathi Book Centre, Sringeri

 CC-O. In Public Domain. Digitized by eGangotri

ಎನ್ನುವ ಸಂಕೋಚ, ಹಾಗಿರಬಾರದು. ಕೊಟ್ಟರೂ ಬೇಡ ಎಂದಿರಬೇಕು. ಸಂನ್ಯಾಸಿಗಳಾಗಿರುವವರಿಗೆ ಅಪರಿಗ್ರಹ ವ್ರತವಾಗುತ್ತದೆ. ಸಂನ್ಯಾಸಿ ತನ್ನ ಬದುಕಿಗೆ ಬೇಕಾದ ಕಮಂಡಲು, ಕಾಷಾಯ ವಸ್ತ್ರ, ಆಸನಗಳಂಥ ವಸ್ತುಗಳನ್ನು ಇಟ್ಟುಕೊಳ್ಳಬಹುದು. ಗೃಹಸ್ಥನೂ ತನ್ನ ಜೀವನಕ್ಕೆ ಬೇಕಾದವುಗಳನ್ನು ಮಾತ್ರ ಸಂಪಾದಿಸಿಕೊಂಡರೆ ಅದು ನಿಜವಾದ ಅಪರಿಗ್ರಹವಾಗುತ್ತವೆ.

ಕೆಲವರಿಗೆ ಪ್ರಪಂಚದಲ್ಲಿರುವ ಎಲ್ಲಾ ವಸ್ತುಗಳನ್ನು ಸಂಪಾದಿಸಿದರೂ ಕೂಡ ಎಲ್ಲಿಯಾದರೂ ನನ್ನ ಹತ್ತಿರ ಇಲ್ಲದ ವಸ್ತುಗಳಿರಬಹುದು. ಅವು ನನಗೆ ದೊರೆಯಲಿಲ್ಲವಲ್ಲಾ ಎನ್ನುವ ವ್ಯಥೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಕಥೆ ಇದೆ. ಶುಂಭ, ನಿಶುಂಭರಿಗೆ 'ನಾವು ದೊಡ್ಡ ಅಸುರರು 'ಪೃಥಿವ್ಯಾಂ ಯಾನಿ ರತ್ನಾನಿ' (ಎಂದು ಹೇಳಿದಂತೆ) ಯಾವ ಯಾವ ರತ್ನಗಳಿವೆಯೋ ಅವುಗಳೆಲ್ಲ ನಮಗೆ ಬೇಕು ಎನ್ನುವ ಅಭಿಪ್ರಾಯವಿತ್ತು. 'ಯತೋ ರತ್ನ ಭುಜೋ ವಯಂ'– ನಾವು ಎಲ್ಲ ರತ್ನಗಳನ್ನು ಅನುಭವಿಸುವವರು. 'ನೀನು ಸ್ತ್ರೀ ರತ್ನವಾಗಿದ್ದೀಯೆ. ಆದ್ದರಿಂದ ನೀನು ನಮ್ಮ ಹತ್ತಿರ ಬಂದು ಬಿಡು' ಎಂದು ಅವರು ದೇವಿಗೆ ಹೇಳಿಕಳುಹಿಸಿದರು. ದೇವಿ 'ನೀವು ಹೇಳುವುದು ನ್ಯಾಯವೇ. ರತ್ನಗಳನ್ನು ಅನುಭವಿಸುವವರು ಎನ್ನುವುದು ಸರಿ. ನಾನು ರತ್ನ ಎನ್ನುವುದೂ ಸರಿ. ನಾನು ನಿಮ್ಮ ಹತ್ತಿರ ಬರಬೇಕೆಂದೂ ನೀವು ಆಸೆ ಪಡುವುದೂ ಸರಿ. ಆದರೆ. ನಾನು ಪ್ರತಿಜ್ಞೆಯೊಂದು ಮಾಡಿದ್ದೇನೆ. 'ಯೋ ಮೇ ದರ್ಪಂ ವ್ಯಪೋಹತಿ'– ನನಗೆ ಸ್ವಲ್ಪ ದರ್ಪ (ಗರ್ವ)ವಿದೆ. ಆ ದರ್ಪದಿಂದ 'ಯೋ ಮೇ ಪ್ರತಿಬಲೋ ಲೋಕೇ' ಎನ್ನುವಂತೆ ನನಗೆ ಎದುರಾಗಿ ನಿಂತು ಯಾರು ನನ್ನನ್ನು ಯುದ್ಧದಲ್ಲಿ ಜಯಿಸುತ್ತಾರೋ ಅವರನ್ನು ಮದುವೆಯಾಗುವುದೆಂದು ಪ್ರತಿಜ್ಞೆ ಮಾಡಿದ್ದೇನೆ. ಆದ್ದರಿಂದ ಶುಂಭನೋ ನಿಶುಂಭನೋ ಯಾರಾದರೂ ಸರಿಯೆ ನನ್ನೊಡನೆ ಹೋರಾಡಲು ಬರಬಹುದು' ಎಂದಳು. ಈ ಕಥೆ ಏತಕ್ಕೆಂದರೆ 'ಯತೋ ರತ್ನ ಭುಜೋ ವಯಂ' ಎನ್ನುವ ಭ್ರಾಂತಿಯನ್ನಿಟ್ಟುಕೊಂಡು ಸ್ತ್ರೀ ರತ್ನಭೂತಾಚಾರ್ವಂಗೀ (ಸ್ತ್ರೀ ರತ್ನವಾಗಿ ಸ್ವಭಾವಸುಂದರವಾದವಳೂ, ಸುಂದರವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಗಗಳುಳ್ಳವಳಾಗಿಯೂ ಇರುವ, ಜಗನ್ಮಾತೆಯನ್ನು ಶುಂಭ-ನಿಶುಂಭರು ಅಪೇಕ್ಷಿಸಿದರು. ಈ ಬುದ್ಧಿ ಇದ್ದರೆ ಇದು ಅಪರಿಗ್ರಹವಾಗುತ್ತದೆಯೇ?

ನಮ್ಮ ಜೀವನಕ್ಕೆ ಏನು ಬೇಕೋ ಅದು ಬಿಟ್ಟು ಬೇರೆ ಯಾವುದನ್ನೂ ಸೇರಿಸಿಟ್ಟುಕೊಳ್ಳುವುದಿಲ್ಲ ಎಂದಿರಬೇಕು. ಇದುವರೆಗೆ 'ಯಮ' ವೆನ್ನುವುದು ಯಾವುದೆಂದು ನೋಡಿದೆವು. ಇದೇ ರೀತಿ 'ನಿಯಮ' ಯಾವುದು ಎನ್ನುವುದಕ್ಕೆ 'ಶೌಚ ಸಂತೋಷ ತಪಃ ಸ್ವಾಧ್ಯಾಯೇಶ್ವರ ಪ್ರಣಿಧಾನಾನಿ ನಿಯಮಾಃ' ಎಂದು ಹೇಳಿದರು. ಶೌಚವೆನ್ನುವುದು ಒಂದು ನಿಯಮ. 'ಮೃಜ್ಜಲಾಭ್ಯಾಂ ಬಹಿಃ ಶೌಚಂ' (ಮಣ್ಣಿನಿಂದಲೂ ನೀರಿನಿಂದಲೂ ಹೊರಗೆ ಇರುವಿಕೆ ಶೌಚ) ಮಣ್ಣಿನಲ್ಲಿ ಒಂದು ವಿಶೇಷವಾದ ಗುಣವಿದೆ. ಯಾವುದಾದರೂ ಅಶುದ್ಧಿಯಾದರೆ, ಆ ಮಣ್ಣನ್ನು ಮುಟ್ಟಿಸಿ ನೀರನ್ನು ಹಾಕಿದರೆ ಆ ಅಶುದ್ಧಿ ಹೊರಟು ಹೋಗುತ್ತದೆ. ಮರಳು ಸೇರಿರುವುದಾಗಲಿ, ಜೇಡಿ ಮಣ್ಣು ಸೇರಿರುವುದಾಗಲಿ, -ಹೀಗೆಲ್ಲಾ ಉಪಯೋಗ ಮಾಡಕೂಡದು. ಇದೆಲ್ಲವನ್ನು ಶೌಚವನ್ನು ಕುರಿತು ಹೇಳುವಾಗ ಹೇಳಿದ್ದಾರೆ.

ಅನಂತರ 'ಸಂತೋಷ' ವನ್ನು ಕುರಿತು ಹೇಳಿದರು. ಅಶುದ್ಧವಾದ ಮನಸ್ಸುಳ್ಳವನು ಐದು ನಿಮಿಷಗಳು ಕೂಡ ಏನೂ ಮಾಡದೆ ಕುಳಿತುಕೊಳ್ಳಲಾರನು. ಅವನ ಮನಸ್ಸು ಎಲ್ಲೆಲ್ಲೋ ತಿರುಗಾಡುತ್ತಿರುತ್ತದೆ. ಆದ್ದರಿಂದ 'ತೃಪ್ತಿ' ಎನ್ನುವುದು ಬೇಕು. 'ಅಸಂತುಷ್ಟೋ ದ್ವಿಜೋ ನಷ್ಟಃ' (ತೃಪ್ತಿ ಇಲ್ಲದ ಬ್ರಾಹ್ಮಣನು ನಾಶಹೊಂದುತ್ತಾನೆ). ಬ್ರಾಹ್ಮಣನಾದವನಿಗೆ ಸಂತೋಷವೇ ಉತ್ತಮವಾದ ಐಶ್ವರ್ಯ. ಇರುವುದನ್ನು ಇಟ್ಟುಕೊಂಡು ಸಂತೋಷವಾಗಿದ್ದರೆ ಮನಸ್ಸು ಏಕಾಗ್ರವಾಗಿರುವುದು.

'ತಪಸ್ಸು' ಎಂದರೆ ವ್ರತಗಳು. ಅದೇ ರೀತಿ 'ನಾನಶನಾತ್ ಪರಂ ತಪಃ' ಏಕಾದಶಿಯಂದು ನಾವು ಊಟಮಾಡದೆ ಇರುವುದು ದೊಡ್ಡ ತಪಸ್ಸು. ಸ್ವಾಧ್ಯಾಯ ಪ್ರವಚನ (ತಮ್ಮ ತಮ್ಮ ವೇದವನ್ನು ಅಧ್ಯಯನ ಮಾಡುವುದು), ತಪಸ್ಸು.

Sri Vidyabharathi Book Centre, Sringeri

CC-O. In Public Domain. Digitized by eGangotri

'ಈಶ್ವರಪ್ರಣಿಧಾನಾನಿ' – ಈಶ್ವರನನ್ನು ನಾವು ಮನಸ್ಸಿನಲ್ಲಿ ಚಿಂತಿಸಬೇಕು. ಮೇಲೆ ಹೇಳಿದ ಯಮ-ನಿಯಮಗಳೊಡನೆ ಈಶ್ವರನನ್ನು ಆರಾಧಿಸಿದರೆ ಅದು ಬಹಳ ವಿಶೇಷ. ಅದನ್ನು ಧ್ಯಾನವೆನ್ನುತ್ತಾರೆ. ಹೀಗೆ ಧ್ಯಾನ ಮಾಡಿದರೆ ಅದು ಉಪಾಸನೆ ಎನ್ನಲ್ಪಡುತ್ತದೆ. ಯಮ – ನಿಯಮಗಳಿಲ್ಲದೆ ನನಗೆ ಷೋಡಶಾಕ್ಷರೀ, ಪಂಚಾಕ್ಷರೀ, ಬಾಲಾ, ಗಣಪತಿ ಇಂಥ ಮಂತ್ರಗಳು ಉಪದೇಶವಾಗಿವೆಯೆಂದು ಹೇಳಿಕೊಂಡು ಜಪ ಮಾಲೆಯನ್ನು ಕೈಯಲ್ಲಿ ಮಾತ್ರ ಇಟ್ಟುಕೊಂಡಿದ್ದರೆ, ಅದು ಕೂಡ ಅವಕಾಶವಿದ್ದಾಗ ಮಾತ್ರ ಮಾಡಿಕೊಂಡಿದ್ದರೆ, ಅದು ಉಪಾಸನೆ ಆಗುವುದಿಲ್ಲ. ಸರಿಯಾಗಿ ಉಪಾಸನೆ ಮಾಡಿದರೆ ಲೌಕಿಕ ಫಲವನ್ನು ಸಂಪಾದಿಸಬಹುದು. ಈ ವಿಷಯವನ್ನು ಭಗವಂತನು ಗೀತೆಯಲ್ಲಿ ಹೇಳಿದ್ದಾನೆ –

'ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ ।
ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ ॥
ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ ।
ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನಕುಶೋತ್ತರಮ್ ॥
ತತ್ರೈಕಾಗ್ರ್ಯಂ ಮನಃ ಕೃತ್ವಾ ಯತ ಚಿತ್ತೇಂದ್ರಿಯಕ್ರಿಯಃ ।
ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ ॥
ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥
ಪ್ರಶಾಂತಾತ್ಮಾ ವಿಗತಭೀಃ ಬ್ರಹ್ಮಚಾರಿವ್ರತೇ ಸ್ಥಿತಃ ।
ಮನಃ ಸಂಯಮ್ಯಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ ॥

ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ – 'ಆತ್ಮಾನಂ' ಎಂದರೆ ಅಂತಃಕರಣ. 'ಯುಂಜೀತ' ಎಂದರೆ ಏಕಾಗ್ರವಾಗಿ ಅಂತಃ' ಕರಣವನ್ನು ಇಟ್ಟುಕೊಂಡು ಚಿಂತನೆ ಮಾಡುವುದು. ಕೆಲವರು ಸಭೆ ಯಲ್ಲಿ ಕುಳಿತು ಧ್ಯಾನ ಮಾಡುತ್ತಾರೆ. ಹಾಗೆ ಮಾಡಿದರೆ ಒಳ್ಳೆಯ ಯೋಗೀಶ್ವರರೆಂಬ ಹೆಸರು ಬರುತ್ತದೆ. ಹೀಗಿರಬಾರದು. 'ಏಕಾಕಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಬ್ಬಂಟಿಗನಾಗಿ, ಎನ್ನುತ್ತಾರೆ. ಭಗವಂತನ ಚಿಂತನೆ ಮಾಡಬೇಕಾದರೆ ಒಬ್ಬಂಟಿಗನಾಗಿ ಕುಳಿತುಕೊಳ್ಳಬೇಕು. ಇದನ್ನೇ 'ರಹಸಿ ಸ್ಥಿತಃ' ಎನ್ನುತ್ತಾರೆ. ಚಿತ್ತವು ಸ್ವಾಧೀನವಾಗಿರಬೇಕು. ಶರೀರವೂ ಸ್ವಾಧೀನವಾಗಿರಬೇಕು. ಶರೀರ ಸ್ವಾಧೀನವಾಗಿದ್ದರೇನೇ ಚಿತ್ತ ಸ್ವಾಧೀನದಲ್ಲಿರುತ್ತದೆ. ಆದ್ದರಿಂದ 'ಯತ ಚಿತ್ತಾತ್ಮಾ' ಎನ್ನುತ್ತಾರೆ. ಅದು ಬೇಕು, ಇದು ಬೇಕು ಎನ್ನುವ ಆಸೆಗಳಿಲ್ಲದೆ ಇರಬೇಕೆನ್ನುವುದಕ್ಕೆ 'ನಿರಾಶೀರಪರಿಗ್ರಹಃ (ಆಸೆ ಇಲ್ಲದೆಯೂ, ವಸ್ತುಸಂಗ್ರಹ ಮಾಡದೆಯೂ) ಎನ್ನುತ್ತಾರೆ.

'ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ' – ಜಾಗ ಸರಿಯಾಗಿದ್ದರೇನೇ ಅದು ಧ್ಯಾನಕ್ಕೆ ಸರಿಯಾಗುತ್ತದೆ. ತರ್ಕಶಾಸ್ತ್ರದಲ್ಲಿ ಒಂದು ಕಡೆ ಶುಚಿಯಾಗಿರುವುದನ್ನು ಕುರಿತು ಹೇಳುವಾಗ, ಪೂರ್ವಪಕ್ಷವನ್ನು ಮನಸ್ಸಿನಲ್ಲಿಟ್ಟುಕೊಂಡು ತಪ್ಪಾದ ಯುಕ್ತಿಯನ್ನು ಮೊದಲು ತೋರಿಸಿದರು. 'ನರಶಿರಃ ಕಪಾಲಂ ಶುಚಿ ಪ್ರಾಣ್ಯಂಗತ್ವಾತ್ ಶಂಖವತ್' – ಒಂದು ಪ್ರಾಣಿಯ ಅವಯವವಾದ ಶಂಖವನ್ನು ನಾವು ಪೂಜೆಗೆ ಉಪಯೋಗಿಸುತ್ತೇವೆ. ಏಕೆಂದರೆ ಅದನ್ನು ಶುಚಿಯೆಂದುಕೊಳ್ಳುತ್ತೇವೆ. ತಲೆ ಒಂದು ಓಡುವ ಪ್ರಾಣಿಯ (ಮನುಷ್ಯನ) ಅಂಗ ತಾನೇ! ಆದ್ದರಿಂದ ಅದನ್ನೂ ಶುಚಿಯೆಂದೇ ಇಟ್ಟುಕೊಳ್ಳಬಹುದು. ಹೀಗಿರುವಾಗ ಮೂಳೆಯನ್ನು ಮುಟ್ಟಿದರೆ ಏಕೆ ಸ್ನಾನ ಮಾಡಬೇಕು ಎನ್ನುವ ಪ್ರಶ್ನೆ ಕೆಲವರಿಗೆ. ಈ ಯುಕ್ತಿ ಸರಿಯಾಗಿಲ್ಲ ಎಂದು ತೋರಿಸುವುದಕ್ಕೆ 'ಶಾಸ್ತ್ರನಿಷಿದ್ಧತ್ವಾತ್' ಎಂದು ಉತ್ತರ ಹೇಳಿದರು. ಮನುಷ್ಯನ ಅಸ್ಥಿಯನ್ನು ಮುಟ್ಟಿದರೆ 'ಸಚೇಲಸ್ನಾನ ಮಾಚರೇತ್' (ಉಟ್ಟಿರುವ ಬಟ್ಟೆಯೊಡನೆ ಸಾನ್ನ ಮಾಡಬೇಕು) ಎಂದು ಹೇಳಿದ್ದಾರೆ. ಸಾಮಾನ್ಯವಾದ ಮೂಳೆಯನ್ನು ಮುಟ್ಟಿದರೆ ಸ್ನಾನ ಮಾಡಿದರೆ ಸಾಕು. ಆದರೆ (ಸತ್ತು) ಕೆಲವು ದಿನಗಳು ಮಾತ್ರವೇ ಆಗಿದ್ದು ಮೂಳೆಯಲ್ಲಿ ಮಾಂಸದಂಥವು ಇರುವುದನ್ನುಮುಟ್ಟಿದರೆ ಸಚೇಲ ಸ್ನಾನ ಮಾಡಬೇಕೆಂದು ಹೇಳಿದ್ದಾರೆ.

ಆದ್ದರಿಂದ ಶಾಸ್ತ್ರದಲ್ಲಿ ಹೇಳಿದಂತೆ ಇರುವುದೇ ನಿಜವಾದ ಶುಚಿ. ಇದು ಇರಬೇಕೆನ್ನುತ್ತಾರೆ. [illegible] ನದೀತೀರ,

Sri Vidyabharathi Book Centre, Sringeri

CC-O. In Public Domain. Digitized by eGangotri

ಮನೆಯಲ್ಲಿರುವ ಪ್ರತಿ ದಿನವೂ ಪೂಜೆ ಮಾಡುವ ಜಾಗ ಇವುಗಳೆಲ್ಲವನ್ನೂ ಶುಚಿ ಎನ್ನುತ್ತಾರೆ. ಈ ಕಾಲದಲ್ಲಿ 'ಎಲ್ಲವನ್ನೂ ಸುಂದರವಾಗಿ ಶುದ್ಧಿ ಮಾಡಿಬಿಟ್ಟೆ. ಎಲ್ಲವೂ ಶುದ್ಧ' ಎಂದು ಹೇಳುತ್ತಾರೆ. ಹಾಗಲ್ಲ. ಯಾವ ಯಾವ ಜಾಗವನ್ನು ಶುದ್ಧವೆಂದು ಶಾಸ್ತ್ರದಲ್ಲಿ ಹೇಳಿದ್ದಾರೆ. ಎಂಜಲು ಅಶುದ್ಧ ಎನ್ನುತ್ತಾರೆ, ಏಕೆ ಅದು ಅಶುದ್ಧ ಎಂದರೆ ಅದು ಅಶುದ್ಧ ಅಷ್ಟು ಮಾತ್ರ ಹೇಳಬಹುದು. ಎಂಜಲಾದ ಬಾಯನ್ನು ನಾವು ಮುಟ್ಟುತ್ತೇವೆ. 'ಅದು ಅಶುದ್ಧವಲ್ಲವೇ?' ಎಂದು ಕೇಳಿದರೆ ಎಂಜಲು ಒಳಗಡೆ ಇದ್ದರೆ ಶುದ್ಧ, ಹೊರಗಡೆ ಬಂದರೆ ಅಶುದ್ಧ. ಅಷ್ಟೇ. ಆದ್ದರಿಂದ ಶಾಸ್ತ್ರದಲ್ಲಿ ಹೇಳಲ್ಪಟ್ಟ ಶುಚಿಯಾದ ಜಾಗದಲ್ಲಿಯೇ ನಾವು ಕುಳಿತುಕೊಳ್ಳಬೇಕು. ಇದನ್ನು ಮನಸ್ಸಿನಲ್ಲಿಟ್ಟುಕೊಂಡೇ 'ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ' ಎನ್ನುತ್ತಾರೆ. ನಮ್ಮ ಆಸನವನ್ನು ಹಾಕಿಕೊಂಡು ನಾವು ಕುಳಿತುಕೊಳ್ಳಬೇಕೆಂದು ಅದರಲ್ಲಿ ಬರುತ್ತದೆ. ಇದರ ತಾತ್ಪರ್ಯವೇನೆಂದರೆ, ಇನ್ನೊಬ್ಬರ ಆಸನದಲ್ಲಿ ನಾವು ಕುಳಿತುಕೊಳ್ಳಬಾರದು. ಈ ಕಾಲದಲ್ಲಿ ಎಲ್ಲರೂ ಮತ್ತೊಬ್ಬರ ಆಸನಗಳಲ್ಲಿ ಕುಳಿತುಕೊಳ್ಳಬೇಕಾಗುವುದು. ಮತ್ತೊಬ್ಬರು ಕುಳಿತ ಆಸನದಲ್ಲಿ ಕುಳಿತು ಅದು ಅಶುಚಿ. ಅದೇ ರೀತಿ ನಮ್ಮ ಕಮಂಡಲುವನ್ನು ಮತ್ತೊಬ್ಬರು ಉಪಯೋಗಿಸಿದರೆ ಅದೂ ಅಶುಚಿ. ಆದ್ದರಿಂದಲೇ ಶಿಷ್ಟರು ತಮಗಾಗಿಯೇ ನೀರಿನ ಪಾತ್ರೆಯನ್ನು ಇಟ್ಟುಕೊಂಡಿರುತ್ತಾರೆ. ಅದನ್ನು ನೋಡಿ ಅವರಿಗೆ ಬೇರೆಯವರ ಮೇಲೆ ದ್ವೇಷವಿದೆಯೆಂದು ಹೇಳುವ ಹಾಗಿಲ್ಲ. ಆರೋಗ್ಯಶಾಸ್ತ್ರದಲ್ಲಿಯೂ ಇದಕ್ಕೆ ಕಾರಣಗಳಿವೆ. ಈಗ ಇವುಗಳನ್ನು ಕುರಿತು ನಾವು ಸಂಶೋಧನೆ ಮಾಡುವುದಿಲ್ಲ. ಏಕೆಂದರೆ ಮತ್ತೊಬ್ಬರ ಆಸನವನ್ನು ಉಪಯೋಗಿಸಿದರೂ ರೋಗ ಬರಲಿಲ್ಲವಲ್ಲಾ ಎಂದು ಕೆಲವರು ಕುತರ್ಕ ಮಾಡಲು ಅವಕಾಶವಿದೆ. 'ಶಾಸ್ತ್ರದಲ್ಲಿ ಪವಿತ್ರತೆ ಇಲ್ಲ ಎಂದು ಒಂದೇ ಮಾತಿನಲ್ಲಿ ಮುಗಿಸಿಬಿಡುತ್ತಾರೆ. ಈ ಕಾಲದಲ್ಲಿ ಯಾರದೋ ಬಟ್ಟೆಯನ್ನು ಯಾರೋ ಹಾಕಿಕೊಂಡು ಹೋಗುತ್ತಾರೆ. ಆ ಸಮಯದಲ್ಲಿ ಯಾವುದೋ ಒಂದು ಬಟ್ಟೆ ಸಿಕ್ಕಿದರೆ ಸಾಕು ಎನ್ನುವ ಭಾವನೆ! ಇವತ್ತು [illegible] ಹೀಗಿರಲಿಲ್ಲ. ಆದರೆ ಬಹಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೋಗ್ಯರಾದ ದೊಡ್ಡವರು ಉಪಯೋಗಿಸಿದುದು ಸಿಕ್ಕಿದರೆ ಅದನ್ನು ಪವಿತ್ರವೆಂದು ಇಟ್ಟುಕೊಂಡು ವಿಶೇಷ ಕಾಲದಲ್ಲಿ ಮಾತ್ರ ಹಾಕಿಕೊಳ್ಳುತ್ತಾರೆ. ಇದು ಪರಂಪರೆಯಾಗಿ ಬಂದ ವಿಶೇಷ. ಅನಂತರ ಭಗವಂತನು 'ನಾತ್ಯುಚ್ಛ್ರಿತಂ ನಾತಿ ನೀಚಂ ಚೈಲಾಜಿನ ಕುಶೋತ್ತರಮ್' ಎಂದನು. ಎಂಥ ಜಾಗ? ದೊಡ್ಡ ಮೇಜಿನ ಮೇಲೆ ಕುಳಿತು ಜಪ ಮಾಡಬಾರದು. ಭೂಮಿಯ ಮೇಲೂ ಕುಳಿತುಕೊಳ್ಳಬಾರದು. ಭೂಮಿಯ ಮೇಲೆ ಕುಳಿತುಕೊಂಡರೆ ಅದರಲ್ಲಿರುವ ಶೈತ್ಯಾದಿಗಳು ನಮಗೆ ಬಂದು ಬಿಡುತ್ತವೆ. ಬಹಳ ಎತ್ತರವಾದ ಜಾಗದಲ್ಲಿ ಕುಳಿತು ಸಮಾಧಿ ಸ್ಥಿತಿಗೆ ಬಂದವನು ಕೆಳಗೆ ಬಿದ್ದರೆ ಅಪಾಯವಾಗುತ್ತದೆ. ಆದ್ದರಿಂದ 'ನಾತ್ಯುಚ್ಛ್ರಿತಂ ನಾತಿ ನೀಚಂ' – ಎತ್ತರವಾದ ಜಾಗವು ಅಲ್ಲ, ಕೆಳಗಿನ ಜಾಗವೂ ಅಲ್ಲ ಎನ್ನುತ್ತಾರೆ. ದರ್ಭೆಯ ಮೇಲೆ ಕೃಷ್ಣಾಜಿನ ಹಾಕಿಕೊಂಡು ಅದರ ಮೇಲೆ ವಸ್ತ್ರವನ್ನು ಹಾಕಿಕೊಂಡು ಕುಳಿತುಕೊಂಡರೆ ಒಂದು ವಿಧವಾದ ದೋಷವೂ ಇರುವುದಿಲ್ಲ. ಆದ್ದರಿಂದಲೇ 'ಚೈಲಾಜಿನ ಕುಶೋತ್ತರಂ' ಎನ್ನುತ್ತಾರೆ. ಮನಸ್ಸು ಕೂಡ ಶಾಂತವಾಗಿರುತ್ತದೆ. ದರ್ಭೆ ಹಾಕಿಕೊಳ್ಳುವುದರಿಂದ ಶೈತ್ಯದೋಷ ಬರುವುದಿಲ್ಲ. ಕೃಷ್ಣಾಜಿನ ಸ್ವಲ್ಪ ರಕ್ಷೆ ಕೊಡುತ್ತದೆ. ವಸ್ತ್ರ ಹಾಕಿಕೊಂಡು ಅದರ ಮೇಲೆ ಕುಳಿತುಕೊಂಡರೆ ಇನ್ನೂ ವಿಶೇಷ. ಹೀಗೆ ಆಸನದ ಮೇಲೆ ಕುಳಿತು ಏನು ಮಾಡಬೇಕು ಎನ್ನುವುದಕ್ಕೆ ಭಗವಂತನು,

'ತತ್ರೈಕಾಗ್ರ್ಯಂ ಮನಃ ಕೃತ್ವಾ ಯತ ಚಿತ್ತೇಂದ್ರಿಯ ಕ್ರಿಯಃ' ಎಂದನು. ಇಂದ್ರಿಯಗಳು ಇಲ್ಲಿ - ಅಲ್ಲಿ ಅಲುಗಾಡಕೂಡದು. ಇಂದ್ರಿಗಳೂ, ಚಿತ್ತವೂ ನಮ್ಮ ವಶದಲ್ಲಿರಬೇಕು. ದೇಹದ ಕ್ರಿಯೆಯೂ ಹೀಗೆಯೇ ಇರಬೇಕು. ಅಂದರೆ ಶರೀರವನ್ನು ಯಾವಾಗಲೂ ಅಲ್ಲಾಡಿಸುತ್ತಾ ಇರಬಾರದು. ಶರೀರವನ್ನು ಅಲ್ಲಾಡಿಸುತ್ತಿದ್ದರೆ ಚಿತ್ತ ಒಂದೇ ಜಾಗದಲ್ಲಿ ನಿಲ್ಲುವುದಿಲ್ಲ. 'ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ' - ತಲೆ, ಕತ್ತು, ದೇಹ ಈ ಮೂರೂ ಸಮವಾಗಿರಬೇಕು. ಕೃಷ್ಣನನ್ನು ವರ್ಣಿಸುವಾಗ 'ಮೂರು ಜಾಗದಲ್ಲಿ ಶಿರುವ ಇರುವವನು' ಎನ್ನುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ಯಾನ ಮಾಡುವವನು ಹೀಗೆ ಕುಳಿತುಕೊಂಡರೆ ಅವನು ಫೋಟೋವಿಗಾಗಿ ಕುಳಿತುಕೊಂಡಿದ್ದಾನೆಂದೇ ತೋರುವುದು.

'ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್' ಎಂದರು. ನಾಸಿಕಾಗ್ರವೆಂದರೆ ನಾವು ಮೂಗಿನ ತುದಿಯನ್ನು ನೋಡಬೇಕೆಂಬುದು ಅರ್ಥ. ಹಾಗೆ ಮಾಡಿದರೆ ಅದು ಧ್ಯಾನವೇ ಆಗುತ್ತದೆ. ಮೂಗಿನ ತುದಿಯನ್ನು ನಾವು ನೋಡುತ್ತಿದ್ದರೆ ಹೇಗಿರುತ್ತದೋ ಅದೇ ರೀತಿ ಕಣ್ಣುಗಳು ಸ್ಥಿರವಾಗಿರಬೇಕೆನ್ನುವುದನ್ನು 'ನಾಸಿಕಾಗ್ರಂ ಪಶ್ಯನ್ನಿವ' ಎನ್ನುತ್ತಾರೆ. ಅನಂತರ 'ಪ್ರಶಾಂತಾತ್ಮಾ ವಿಗತಭೀಃ ಬ್ರಹ್ಮಚಾರಿವ್ರತೇ ಸ್ಥಿತಃ' – ಇದಕ್ಕೆ 'ಶಾಂತವಾಗಿಯೂ, ಭಯವಿಲ್ಲದೆಯೂ, ಬ್ರಹ್ಮಚಾರಿ ವ್ರತದಲ್ಲಿ ಸ್ಥಿತವಾಗಿರುವವನಾಗಿಯೂ' ಎಂದು ತಾತ್ಪರ್ಯ.

'ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ –

ಮನಸ್ಸನ್ನು ನಿಗ್ರಹಿಸಿ ಹೀಗೆ ಯುಕ್ತನಾದವನು 'ಮತ್ಪರ' ನಾಗಿ ಇರಬೇಕು. ನಾವು ಬೇರೆಯವರು ಧ್ಯಾನದಲ್ಲಿರುವುದನ್ನು ನೋಡಿ ಒಂದೆರಡು ದಿನಗಳು ಪ್ರಯತ್ನ ಪಟ್ಟು ಆಮೇಲೆ ಬಿಟ್ಟುಬಿಡೋಣವೆಂದುಕೊಂಡರೆ ಅದು ಧ್ಯಾನವಾಗುವುದಿಲ್ಲ.

'ಅಹಮೇವ ಉತ್ಕೃಷ್ಟಃ ಯಸ್ಯ ಸಃ ಮತ್ಪರಃ' [ಯಾರಿಗೆ ನಾನೇ (ಪರವಸ್ತು) ಉತ್ತಮವಾಗಿದ್ದೇನೋ ಅವನು ಮತ್ಪರಃ] ಹೀಗೆ ಇರುವವನಿಗೆ ಯಾವ ಫಲ ದೊರೆಯುವುದೆಂದರೆ,

'ಯುಂಜನ್ನೇವಂ ಸದಾಽಽತ್ಮಾನಂ ಯೋಗೀ ನಿಯತಮಾನಸಃ ।
ಶಾಂತಿಂ ನಿರ್ವಾಣ ಪರಮಾಂ ಮತ್ಸಂಸ್ಥಾಮಧಿಗಚ್ಛತಿ ॥'

(ಗೀತೆ VI, 15)

'ಹೀಗೆ ಮನೋನಿಗ್ರಹವಿರುವ ಯೋಗಿ ಯಾವಾಗಲೂ ಮನಸ್ಸನ್ನು ವಶಪಡಿಸಿಕೊಂಡು ಬಂದರೆ ಮೋಕ್ಷವನ್ನು ಪರಿಣಾಮವಾಗುಳ್ಳ ಶಾಂತಿಯಾದ ನನ್ನ ಸ್ಥಿತಿಯನ್ನು ಪಡೆಯುತ್ತಾನೆಂದು ಕೃಷ್ಣನು ಹೇಳಿದುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ದರಿಂದ ದೇವತೆಗಳನ್ನು ಧ್ಯಾನಮಾಡುತ್ತಾ ಬಂದರೆ ಅದು ಸಂಪ್ರಜ್ಞಾತ ಸಮಾಧಿವರೆಗಾದರೂ ಹೋಗಬೇಕು. ಕೆಲವರಿಗೆ ಸಗುಣದಲ್ಲಿರುವ ರುಚಿಯನ್ನು ಮೀರಿ ಅದಕ್ಕೆ ಮೇಲೆ ಹೋಗಬೇಕೆಂದಿರುತ್ತದೆ. ಅವರು ನಿರ್ಗುಣ ಧ್ಯಾನ ಮಾಡಲು ಸಾಧ್ಯವೇ ಎಂದು ಕೇಳುತ್ತಾರೆ. ಹಾಗೆ ಮಾಡಬಹುದು. ಹೇಗೆ ಮಾಡಬೇಕು?.

ಮೊದಲು ಒಂದು ನಿಮಿಷ ಪ್ರಕಾಶವನ್ನು ನೋಡಬೇಕು, ಹಾಗೆ ನೋಡುವಾಗ ಪ್ರಪಂಚ ಮರೆತು ಹೋಗುತ್ತದೆ. ಮರೆತು ಹೋದಾಗ 'ನಾನು ಮರೆಯುತ್ತಿದ್ದೇನೆ' ಎನ್ನುವ ಅರಿವು ಇರುವುದಿಲ್ಲ. ಹಾಗೆ ಮರೆತಿರುವ ಸಮಯದಲ್ಲಿ ಕಣ್ಣುಗಳನ್ನು ಮುಚ್ಚಿಕೊಳ್ಳಬೇಕು. ಅನಂತರ ಎರಡು ಕಣ್ಣುಗಳೂ ಅಂತರ್ಮುಖವಾಗಿ ಹೋಗುತ್ತಿವೆಯೆಂಬುದಾಗಿ ಚಿಂತನೆ ಮಾಡಬೇಕು. ಆಗ ಒಂದು ಪ್ರಕಾಶ ತಾನಾಗಿಯೇ ತೋರುತ್ತದೆ. ಆ ಪ್ರಕಾಶ ನಾವು ಲೋಕದಲ್ಲಿ ನೋಡುವ ಪ್ರಕಾಶದಂತೆ ಇರದೆ ನೀಲಿಯಾಗಿರುತ್ತದೆ. ಕೆಲವು ವೇಳೆ ಚಂದ್ರನ ಪ್ರಕಾಶದಂತೆ ಇರುತ್ತದೆ. ಆ ಪ್ರಕಾಶ ತೋರಿದೊಡನೆ ಕಣ್ಣುಗಳು ಒಳಗೆ ನೋಡುತ್ತಿದೆಯೆಂದು ಭಾವಿಸಿ ನಾನು ಶುದ್ಧ ಚೈತನ್ಯನಾಗಿರುವವನು ಎನ್ನುವ ಭಾವವನ್ನು ಸ್ಥಿರಪಡಿಸಿಕೊಳ್ಳಬೇಕು. 'ಚೈತ್ಯಂ ಸರ್ವವ್ಯಾಪಿ' ಎಂದು ಕಾಣಬೇಕು. ಹೀಗೆ ಮಾಡುತ್ತಾ ಬಂದರೆ ಅದು ಅಸಂಪ್ರಜ್ಞಾತ ಸಮಾಧಿಯಲ್ಲಿ ಕೊನೆಗೊಳ್ಳುತ್ತದೆ. ಅದರಿಂದ ಆತ್ಮ ಸಾಕ್ಷಾತ್ಕಾರ ಪಡೆಯಬಹುದು. ಸಂಪ್ರಜ್ಞಾತ ಸಮಾಧಿ ಪಡೆಯಬೇಕಾದರೆ ಕಣ್ಣುಗಳನ್ನು ಮುಚ್ಚಿಕೊಂಡು ಭಗವಂತನ ಸ್ವರೂಪವನ್ನು ಧ್ಯಾನಮಾಡಬೇಕು. ಹೀಗೆ ಅಭ್ಯಾಸಮಾಡಿಕೊಂಡೇ ಬಂದರೆ ಒಂದು ದಿನ ಸ್ವರೂಪ ಎದುರಿಗೆ ಬಂದು ನಿಂತಂತಾಗುತ್ತದೆ. ಕಣ್ಣುಗಳನ್ನು ತೆರೆದರೂ ಕೂಡ ಆ ಸ್ವರೂಪವನ್ನು ಕಾಣಬಹುದು, ಇದನ್ನೇ 'ದೇವತಾ ಸಾಕ್ಷಾತ್ಕಾರ' ವೆನ್ನುತ್ತಾರೆ. ಈ ಸ್ಥಿತಿ ಉಂಟಾದಮೇಲೆ ಆ ಕಾಲದಲ್ಲಿ ಮನಸ್ಸಿನಲ್ಲಿ ಯಾವುದಾದರೊಂದು ಚಿಂತನೆ ಮಾಡಿದರೆ ಅದಕ್ಕೆ ಉತ್ತರ ಕೂಡ ದೊರೆಯುತ್ತದೆ. ಆ ಉತ್ತರ ದೈವವಾಕ್ಯವಾಗುತ್ತದೆ, ಹೀಗಿರುವವನು ತನ್ನನ್ನೂ ಇತರರನ್ನೂ ಉದ್ಧಾರ ಮಾಡಬಲ್ಲನು. ಇದನ್ನು

Sri Vidyabharathi Book Centre, Sringeri

 CC-O. In Public Domain. Digitized by eGangotri

ಸಾಧಿಸುವುದರಲ್ಲಿ ಸ್ವಲ್ಪ ವಿಳಂಬವಾದರೂ ಇದನ್ನು ಖಂಡಿತ ಸಾಧಿಸಬಹುದು. ಆದ್ದರಿಂದ 'ಶಾಂತಿಂ ನಿರ್ವಾಣ ಪರಮಾಂ ಮತ್ಸಂಸ್ಥಾಮಧಿಗಚ್ಛತಿ' ಎಂದು ಕೃಷ್ಣನು ಹೇಳಿದ ರೀತಿಯಲ್ಲಿ, ಅದನ್ನು ಇಷ್ಟ ಪಟ್ಟೇ ನಾವು ಧ್ಯಾನ ಮೊದಲಾದವುಗಳನ್ನು ಮಾಡುತ್ತೇವೆ. ಇದಕ್ಕೆ ಬೇಕಾದ ಸಾಧನ-ಸಂಪತ್ತುಗಳನ್ನು ಇಟ್ಟುಕೊಂಡು ನಾವು ಧ್ಯಾನ ಮಾಡುತ್ತಾ ಬಂದರೆ ಶ್ರೇಯಸ್ಸನ್ನು ಪಡೆಯಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಸ ಮಾಡಿದನು. ರಾಮನು ಭಗವಂತನೆಂದೇ ನಾವು ಖಂಡಿತವಾಗಿಯೂ ಹೇಳುತ್ತೇವೆ. ವಾಲ್ಮೀಕಿ, ರಾಮನಿಗೆ ಕರ್ಮವಿದೆ ಎಂದು ಬರೆದಿದ್ದಾರಲ್ಲಾ ! ಆದ್ದರಿಂದ ಭಗವಂತನಾದ ರಾಮನು ವನವಾಸದಂಥವುಗಳನ್ನು ಅನಭವಿಸ ಬೇಕಾಗಿದ್ದರಿಂದ ಅವನು ಕರ್ಮಕ್ಕೆ ಸಿಕ್ಕಿಕೊಂಡವನೇ ಎಂದು ಅದರ ತಾತ್ಪರ್ಯವನ್ನು ತಿಳಿಯದೆ ಕೆಲವರು ಕೇಳಬಹುದು. ಮನುಷ್ಯ ಜನ್ಮ ವನ್ನು ಪಡೆದರೆ ಹೀಗೆಲ್ಲಾ ಅನುಭವಿಸಬೇಕೆಂದು ತೋರಿಸುವುದಕ್ಕಾಗಿಯೇ ಭಗವಂತನು ಲೀಲೆ ಮಾಡಿದನು. 'ದಶರಥನು ರಾಜ ಅವನ ಮಗ ರಾಮ' ಎಂದು ಸಾಮಾನ್ಯವಾಗಿ ರಾಮಾಯಣ ಓದುವವರಿಗೆ 'ರಾಮ ದೊಡ್ಡ ಮಹಾತ್ಮ. ಆದರೂ ಹೀಗೆಲ್ಲ ಕಷ್ಟಪಟ್ಟನು' ಎಂದೇ ತೋರುತ್ತದೆ. ಅಲ್ಲದೆ 'ಪರಮಾತ್ಮ ಎಂದು ಹೇಳಿದ ಮೇಲೆ ಅವನಿಗೆ ಇಷ್ಟೆಲ್ಲ ಕಷ್ಟವೇಕೆ? ಎಂದು ಅವರಿಗೆ ಸಂದೇಹವೂ ಆಗುತ್ತದೆ. ಆದ್ದರಿಂದ ಸ್ವಲ್ಪ ವಿವರ ಗಳನ್ನು ತಿಳಿದುಕೊಂಡವರಿಗೆ ಹೇಳಿದರೆ ಭಗವಂತನು ತೋರಿದ ಲೀಲೆಯು ಅರ್ಥವಾಗುತ್ತದೆ. ಸರಿ, ಈಗ ಕವಿ ಹೇಳಿರುವ ಶ್ಲೋಕವನ್ನುನೋಡೋಣ.

'ಬ್ರಹ್ಮಾಯೇನ ಕುಲಾಲವನ್ನಿಯಮಿತಃ ಬ್ರಹ್ಮಾಂಡ
ಭಾಂಡೋದರೇ'

ಬ್ರಹ್ಮನಿಗೆ ಒಂದು ಕೆಲಸವಿದೆ, ಅದೇನೆಂದರೆ ಈ ಪ್ರಪಂಚವನ್ನು ಸೃಷ್ಟಿಮಾಡುವುದೇ ಬ್ರಹ್ಮನ ಕೆಲಸ. ಮಡಕೆಗಳನ್ನು ತಯಾರು ಮಾಡು ವುದು ಕೆಲಸವೆಂದು ನಾವು ಹೇಳುವಂತೆ ಈ ಪ್ರಪಂಚವೆಲ್ಲವನ್ನೂ ಸೃಷ್ಟಿಸು ವುದು ಬ್ರಹ್ಮನಕೆಲಸ. ಬ್ರಹ್ಮನಿಗೆ ಏತಕ್ಕೆ ಈ ಶಿಕ್ಷೆ ಬಂದಿತೆಂದರೆ, ಅದಕ್ಕೆ ಅವನ ಕರ್ಮವೇ ಕಾರಣವೆನ್ನುತ್ತಾರೆ ಕವಿ. ಭಗವಂತನು ಗೀತೆಯಲ್ಲಿ—

'ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।'
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾತ್ಮಮಾಯಯಾ ॥

(ನಾನು ಅಜನಾದರೂ, ಅವ್ಯಯನಾದರೂ, ಎಲ್ಲ ಜೀವರಿಗೂ ಈಶ್ವರ ನಾದರೂ ನನ್ನ ಪ್ರಕೃತಿಯನ್ನು ವಶದಲ್ಲಿಟ್ಟುಕೊಂಡು, ನನ್ನ ಮಾಯೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಿಂದಲೇ ಅವತರಿಸುವೆನು) ಎಂದಿದ್ದಾನೆ. ನಾವೂ ಹುಟ್ಟುತ್ತೇವೆ, ಭಗವಂತನೂ ಅವತಾರ ಮಾಡುತ್ತಾನೆ. ಭಗವಂತನು ತನಗೆ ಬೇಕೆಂದು ತೋರಿದರೆ ಮಾತ್ರ ಅವತಾರ ಮಾಡುತ್ತಾನೆ. ನಮ್ಮ ವಿಷಯ ಹಾಗಲ್ಲ. ನಾವೆಲ್ಲರೂ ಹುಟ್ಟಿ ಏಕೆ ಹುಟ್ಟಿದೆವೋ ಎಂದು ಯೋಚನೆ ಮಾಡುತ್ತೇವೆ. ಆದರೆ ಭಗವಂತನು ತಾನು ಅವತಾರ ಮಾಡಬೇಕೇ, ಬೇಡವೇ ಎನ್ನುವುದನ್ನು ಮೊದಲೇ ಯೋಚಿಸುತ್ತಾನೆ. ಯಾವುದಾದರೂ ಲೀಲೆಯನ್ನು ತೋರಿಸಬೇಕೆಂದರೆ ಅವನು ಅವತಾರ ಮಾಡುತ್ತಾನೆ. ಈ ಸ್ಥಿತಿಯಲ್ಲಿ ಕರ್ಮದ ಮಹಿಮೆಯನ್ನು ಹೇಳಬೇಕೆಂದಿರುವ ಕವಿ, ಏನು ಹೇಳುತ್ತಾರೆಂದು ನೋಡೋಣ,

'ವಿಷ್ಣುರ್ಯೇನ ದಶಾವತಾರಗಹನೇ ಕ್ಷಿಪ್ತೋ ಮಹಾಸಂಕಟೇ'

ಭಗವಾನ್ ಮಹಾವಿಷ್ಣು ದಶಾವತಾರಗಳನ್ನು ಮಾಡಿದನು. ಆ ಹತ್ತು ಅವತಾರಗಳೂ ಸಾಮಾನ್ಯವಾದ ಅವತಾರಗಳಲ್ಲ. ಅವುಗಳಲ್ಲಿ ಒಂದೊಂದರಲ್ಲಿಯೂ ಮಹಾಕಾರ್ಯಗಳನ್ನು ಅವನು ಸಾಧಿಸಿದನು ಮತ್ಸ್ಯಾವತಾರ ಮಾಡಿದಾಗ ವೇದಗಳೆಲ್ಲವನ್ನೂ ಬ್ರಹ್ಮದೇವನಿಂದ ಹಯಗ್ರೀವನು ಅಪಹರಿಸಿದಾಗ ಭಗವಂತನು ಹಯಗ್ರೀವನನ್ನು ಕೊಂದು ವೇದಗಳನ್ನು ಮುಂದಿನ ಕಲ್ಪದಲ್ಲಿ ನಮಗೆ ಕೊಟ್ಟನು. ಅನಂತರ ಕೂರ್ಮಾವತಾರ ಮಾಡಿದಾಗ, ದೇವಾಸುರರು ಕ್ಷೀರ ಸಮುದ್ರವನ್ನು ಕಡೆದಾಗ, ಮಂದರ ಪರ್ವತವನ್ನು ಹೊತ್ತು, ಆಮೆಯ ರೂಪವನ್ನು ಧರಿಸಿದನು. ಆದರಿಂದ ದೇವತೆಗಳು ಅಮೃತವನ್ನು ಪಡೆದರು. ರಾಮಾವತಾರ, ಕೃಷ್ಣವತಾರಗಳ ಕಥೆಗಳನ್ನು ನಾವು ಕೇಳಿದ್ದೇವೆ. ಹೀಗೆ ಅನೇಕ ಅವತಾರಗಳನ್ನು ಭಗವಂತನು ಮಾಡಿದನು. ಕವಿ 'ದಶವತಾರ ಗಹನೇ' ಎನ್ನುತ್ತಾರೆ. ಅಂದರೆ ದಶಾವತಾರವೆನ್ನುವ ಸಂಕಷ್ಟಕರವಾದ ಕಾಡಿನಲ್ಲಿ ಭಗವಂತನು ಸಿಕ್ಕಿಕೊಂಡನೆನ್ನುತ್ತಾರೆ. ಕವಿಯ ತಾತ್ಪರ್ಯದ ಪ್ರಕಾರ ಭಗವಂತನ ಈ ಹತ್ತು ಅವತಾರಗಳೂ ಅವನ ಕರ್ಮವೇ ಆಗುತ್ತದೆ. ಭಗವಾನ್ ವಿಷ್ಣು ಮಾಡಿದ ಅವತಾರಗಳಿಗೆ ಒಂದು [illegible] ಕಥೆಯೂ ಇದೆ. ಕವಿ ಅನಂತರ,

Sri Vidyabharathi Book Centre, Sringeri

CC-O. In Public Domain. Digitized by eGangotri

'ಸಂಪೂರ್ಯೇನ ಕಪಾಲಪಾಣಿಪುಟಕೇ ಭಿಕ್ಷಾಟನಂ ಸೇವತೇ'

ಎಂದು ಹೇಳಿದರು. ಭಗವಂತನಾದ ಪರಮಶಿವನು ಕೈಲಾಸಕ್ಕೆಲ್ಲಾ ಅಧಿಪತಿ. ಅನ್ನಪೂರ್ಣಾ ಅವನ ಹೆಂಡತಿ ಆದರೂ, ಪರಮಶಿವನೂ 'ಭವತಿ ಭಿಕ್ಷಾಂ ದೇಹಿ' ಎಂದು ಅನ್ನಪೂರ್ಣೆಯನ್ನು ಕೇಳಬೇಕಾಗಿ ಬಂದಿತು. ಅದಕ್ಕೆ ಕಾರಣ ಯಾರೋ ಒಬ್ಬರು ಕೊಟ್ಟ ಶಾಪ. ಶಾಪ ಪರಿಹಾರಕ್ಕಾಗಿ ಭಗವಂತನು ಭಿಕ್ಷೆಯನ್ನು ಕೇಳಬೇಕಾಗಿ ಬಂದಿತೆಂದೆಲ್ಲಾ ನಾವು ಪುರಾಣಗಳಲ್ಲಿ ಓದುತ್ತೇವೆ.

ಈ ಸಂದರ್ಭದಲ್ಲಿ ಒಂದು ಸ್ವಾರಸ್ಯವಾದ ಕಥೆ ಹೇಳುವುದುಂಟು. ಶನಿ ಎಲ್ಲರಿಗೂ ತೊಂದರೆ ಮಾಡುತ್ತಾನೆಂದು ಕಂಡ ಪರಮಶಿವನು, ಅವನನ್ನು ನೋಡಿ, 'ಎಲ್ಲರಿಗೂ ನೀನು ವಿಘ್ನ ಉಂಟು ಮಾಡುತ್ತೀಯಲ್ಲಾ ನನಗೆ ನೀನು ಏನು ತೊಂದರೆ ಮಾಡಬಲ್ಲೆ? ' ಎಂದು ಕೇಳಿದನಂತೆ ಅದಕ್ಕೆ ಶನಿ 'ಸಮಯ ಬಂದರೆ ನಿನಗೂ ತೊಂದರೆ ಮಾಡುತ್ತೇನೆ' ಎಂದನಂತೆ. ಪರಮಶಿವನು, 'ನಿನ್ನ ಕಣ್ಣಿಗೆ ಬಿದ್ದರೆ ತಾನೆ ನೀನು ನನಗೆ. ತೊಂದರೆ ಕೊಡುವುದು' ಎಂದು ಹೇಳಿ ತಾವರೆ ಹೂವಿನಲ್ಲಿ ಸಣ್ಣ ದುಂಬಿಯಾಗಿ ಅವಿತುಕೊಂಡನಂತೆ. ಶನಿಗೆ, 'ಈಗ ನೀನು ನನಗೆ ಯಾವ ವಿಧವಾದ ತೊಂದರೆಯೂ ಕೊಡಲಾಗುವುದಿಲ್ಲ' ಎಂದನು. ಶನಿ ಪರಮಶಿವನಿಗೆ,' 'ನೀನು ನನಗಾಗಿ ಬಹಳ ಕಷ್ಟ ಪಟ್ಟು ಚಿಕ್ಕರೂಪವನ್ನು ಪಡೆದು ಇಷ್ಟು ಹೊತ್ತು ಇದ್ದುದೇ ನಾನು ನಿಮಗೆ ಮಾಡಿದ ತೊಂದರೆ' ಎಂದನು.

ಆದ್ದರಿಂದ ಕವಿಯ ತಾತ್ಪರ್ಯದಂತೆ, ಭಗವಂತನಾದ ಪರಮಶಿವನೂ ಭಿಕ್ಷಾಟನೆ ಮಾಡುವುದಕ್ಕೆ ಅವನ ಕರ್ಮವೇ ಕಾರಣ. ಆದರೆ, ಮೊದಲೇ ಹೇಳಿದಂತೆ ನಿಜಕ್ಕೂ ಪರಮಶಿವನಿಗೆ ಕರ್ಮದ ಯಾವ ಬಂಧನವೂ ಇಲ್ಲದಿದ್ದರೂ ಪ್ರಪಂಚದಲ್ಲಿ ಕರ್ಮದ ಪ್ರಾಬಲ್ಯ ಇಷ್ಟಾಗಿದೆಯೆಂದು ತೋರಿಸುವುದಕ್ಕೇ ಅವನು ಈ ರೀತಿ ಲೀಲೆ ಮಾಡಿದನು. ಶ್ಲೋಕದ ಕೊನೆಯ ಚರಣದಲ್ಲಿ ಕವಿ,

'ಸೂರ್ಯೋ ಭ್ರಾಮ್ಯತಿ ನಿತ್ಯಮೇವ ಗಗನೇ'

Sri Vidyabharathi Book Centre, Sringeri

 CC-O. In Public Domain. Digitized by eGangotri

ಎಂದರು. ಎಲ್ಲರಂತೆಯೇ ಸೂರ್ಯನಿಗೆ ಕೂಡ ಏನು ಶಿಕ್ಷೆ ? ಪ್ರತಿ ದಿನವೂ ಭೂಮಂಡಲದ ಸುತ್ತಲೂ ತಿರುಗುವುದು ಸೂರ್ಯನ ಕೆಲಸ. ಏಕೆ ಅವನು ಹೀಗೆ ಸುತ್ತುತ್ತಿರಬೇಕೆಂದರೆ, ಅದಕ್ಕೆ ಅವನ ಕರ್ಮವೇ ಕಾರಣವೆನ್ನುತ್ತಾರೆ ಕವಿ. ಕೊನೆಯಲ್ಲಿ ಕವಿ,

'ತಸ್ಮೈ ನಮಃ ಕರ್ಮಣೇ'

ಎನ್ನುತ್ತಾರೆ, ಅಂಥ ಬಲಿಷ್ಠವಾದ ಕರ್ಮವನ್ನು ನಮಸ್ಕರಿಸುತ್ತಾರೆ.

ಕರ್ಮ ಎನ್ನುವುದು ಯಾರನ್ನೂ ಬಿಟ್ಟಿಲ್ಲ. ಹೇಗೆ ವ್ಯಾಧಿ ವೈದ್ಯನನ್ನೂ ಪೀಡಿಸುತ್ತದೆಯೋ ಅದೇ ರೀತಿ ಕರ್ಮ ಎಲ್ಲರನ್ನೂ ತನ್ನ ಹಿಡಿತದಲ್ಲಿಟ್ಟುಕೊಳ್ಳುತ್ತದೆ. ವೈದ್ಯನು ಕೆಮ್ಮಿಗೆ ಔಷಧಿ ಕೊಡುತ್ತಲೇ ಇರುತ್ತಾನೆ. ಆದರೆ, ಅವನೂ ಕೆಮ್ಮುತ್ತಲೇ ಇರುತ್ತಾನೆ. ಕಾರಣ ಕೇಳಿದರೆ ಎಷ್ಟೋ ಮಂದಿಗೆ ಗುಣಕಾರಿಯಾದ ಆ ಔಷಧಿ ಅವನಿಗೆ ಮಾತ್ರ ಪರಿಣಾಮಕಾರಿಯಾಗಲಿಲ್ಲ ಎನ್ನುತ್ತಾನೆ. ಹಾಗೆ ನಡೆಯುವುದನ್ನು ನಾವೇ ನೋಡಿರಬಹುದು. ಹೀಗೆ ನಡೆಯುವುದಕ್ಕೆ ಅವರವರ ಕರ್ಮವೇ ಕಾರಣ. ವೈದ್ಯನಿಗೂ, ರೋಗಿಗೂ ಆ ವ್ಯಾಧಿಯನ್ನು ಅನುಭವಿಸಬೇಕೆನ್ನುವ ಕರ್ಮವೇ ಇದಕ್ಕೆ ಕಾರಣ. ಇನ್ನು, ಕರ್ಮದ ಸ್ವರೂಪ ನೋಡೋಣ.

ಮನುಷ್ಯನು ಯಾವಾಗಲೂ ಯಾವುದಾದರೂ ಒಂದು ಕೆಲಸ ಮಾಡುವಂತೆಯೇ ತೋರುತ್ತಾನೆ. ಜಾಗ್ರತ್ ಅವಸ್ಥೆಯಲ್ಲಿ ಮನುಷ್ಯನು ಕೆಲಸ ಮಾಡುತ್ತಿದ್ದಾನೆ ಎನ್ನುವುದನ್ನು ನಾವು ನೋಡಿ ತಿಳಿದುಕೊಳ್ಳುತ್ತೇವೆ. ಕನಸಿನಲ್ಲಿ ಮನಸ್ಸು ಏನೇನೋ ಕಲ್ಪನೆ ಮಾಡುತ್ತದೆ ಎನ್ನುವುದೂ ನಮಗೆ ಗೊತ್ತು. ಕನಸಿನಲ್ಲಿ ನಾವು ಬೆಟ್ಟವನ್ನು ದಾಟುವ ಹಾಗೆಯೂ, ನದಿಯಲ್ಲಿ ಮುಳುಗುವಹಾಗೆಯೂ ತೋರುತ್ತದೆ. ಕೆಲವೊಮ್ಮೆ ಆಕಾಶದಲ್ಲಿ ಹಾರುತ್ತಿರುವಂತೆ ಕನಸಿನಲ್ಲಿ ತೋರುತ್ತದೆ. ಸೂಕ್ಷ್ಮ ಶರೀರ ಹೀಗೆ ವಿಶೇಷವಾಗಿ ಕೆಲಸ ಮಾಡಿದರೂ ಸ್ಥೂಲ ಶರೀರ ಕೆಲಸ ಮಾಡುವುದಿಲ್ಲ. ಸುಷುಪ್ತಿಯಲ್ಲಿ ಯಾವ ವಿಧವಾದ ಕೆಲಸವೂ ಇಲ್ಲ ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಕನಸಿನಲ್ಲಿ ನಾವು ಯಾವ

Sri Vidyabharathi Book Centre, Sringeri

CC-O. In Public Domain. Digitized by eGangotri

೫ ಕರ್ಮ

ಗಂಗಾಪೂರಪ್ರಚಲಿತ ಜಟಾಸ್ರಸ್ತ ಭೋಗೀಂದ್ರ ಭೀತಾಂ
ಆಲಿಂಗಂತೀಮಚಲತನಯಾಂ ಸಸ್ಮಿತಂ ವೀಕ್ಷಮಾಣಃ ।
ಲೀಲಾಪಾಂಗೈಃ ಪ್ರಣತಜನತಾಂ ನಂದಯಂಶ್ಚಂದ್ರ ಮೌಲಿಃ
ಮೋಹಧ್ವಾಂತಂ ಹರತು ಪರಮಾನಂದಮೂರ್ತಿಃ ಶಿವೋ ನಃ॥

ಪರಮಾತ್ಮನಿದ್ದಾನೆ, ಅವನೇ ನಮಗೆ ಸುಖ-ದುಃಖಗಳನ್ನು ಕೊಡುತ್ತಾನೆ ಎಂದು ಒಪ್ಪುತ್ತೇವೆ. ಅವನು ಹೇಗೆ ಸುಖ ದುಃಖಗಳನ್ನು ಕೊಡುತ್ತಾನೆಂದು ಸ್ವಲ್ಪ ಯೋಚಿಸೋಣ. ಭಗವಂತನಿಗೆ ಯಾರ ವಿಷಯದಲ್ಲಿ ಪ್ರೀತಿ ಇದೆಯೋ ಅವರಿಗೆ ಸುಖವನ್ನೂ, ಯಾರ ವಿಷಯದಲ್ಲಿ ಪ್ರೀತಿ ಇಲ್ಲವೋ ಅಂಥಹವರಿಗೆ ದುಃಖವನ್ನೂ ಕೊಡುತ್ತಾನೆ. ಆದರೆ, ಭಗವಂತನಿಗೆ ಯಾವುದರಿಂದ ತಮ್ಮ ವಿಷಯದಲ್ಲಿ ಪ್ರೀತಿಯೋ ಅಪ್ರೇಮವೋ ಉಂಟಾಯಿತು ಎನ್ನುವುದನ್ನು ಮಾತ್ರ ಅವರು ಯೋಚನೆ ಮಾಡುವುದಿಲ್ಲ. ಇದಕ್ಕೆ ಸಂಬಂಧ ಪಟ್ಟಂತೆ ನೀಲಕಂಠ ದೀಕ್ಷಿತರು ಒಂದುಕಡೆ—

ಸಾಧ್ಯಾ ಶಂಭೋಃ ಕಥಮಪಿ ದಯೇತ್ಯಪ್ಯಸಾಧ್ವೋಪದೇಶಃ
ಕೋಪಂ ತಸ್ಯ ಪ್ರಥಮಮಪನುತ್ಯೈವ ಸಾಧ್ಯಃ ಪ್ರಸಾದಃ।
ಕೋಪೋ ವರ್ಣಾಶ್ರಮ ನಿಯಮಿತಾಚಾರ ನಿರ್ಲಂಘನೋತ್ಥಃ
ಶಾಂತಿಂ ನೇಯಃ ಸ ಕಥಮಧುನಾಪ್ಯವ್ಯವಸ್ಥಾ ಪ್ರವೃತ್ತೈಃ॥

(ಪರಮೇಶ್ವರನ ದಯೆಯನ್ನು ಹೇಗಾದರೂ ಪಡೆಯಬೇಕೆನ್ನುವುದು ಸಾಧ್ಯವಾದ ಉಪದೇಶ. ಪರಮೇಶ್ವರನಿಗೆ ನಮ್ಮಮೇಲಿರುವ ಕೋಪ ದೂರವಾದ ಮೇಲೆ ತಾನೆ ಅವನ ಅನುಗ್ರಹ ನಾವು ಪಡೆಯಲು ಸಾಧ್ಯ. ಆ ಕೋಪ, ವರ್ಣ ಮತ್ತು ಆಶ್ರಮಕ್ಕೆ ಸಂಬಂಧಪಟ್ಟ ಆಚಾರ-ನಿಯಮಗಳನ್ನು ಉಲ್ಲಂಘಿಸಿದ್ದರಿಂದ ಉಂಟಾದುದು. ಆ ಕೋಪವನ್ನು ಹೇಗೆ ಶಾಂತ ಪಡಿಸುವುದು?) ಎಂದು ನುಡಿದರು. ಭಗವಂತನಿಗೆ, ತಮ್ಮ ವಿಷಯದಲ್ಲಿ ಕೋಪವಿರುವುದಾದರೆ ಅವನ್ನು ದೂರಮಾಡಬೇಕೆಂದೇ ಎಲ್ಲರೂ

Sri Vidyabharathi Book Centre, Sringeri

 CC-O. In Public Domain. Digitized by eGangotri

ಭಾವಿಸುತ್ತಾರೆ. ಕೋಪವನ್ನು ದೂರ ಮಾಡಬೇಕಾದರೆ ಮೊದಲು, ಕೋಪ ಏತಕ್ಕೆ ಬಂದಿದೆಯೆಂದು ನೋಡಬೇಕು. ಭಗವಂತನು ಒಂದು ನಿಮಿಷ ಕೋಪದಿಂದಲೂ, ಮತ್ತೊಂದು ನಿಮಿಷ ಬೇರೆ ವಿಧವಾಗಿಯೂ ಇರುವ ಹುಚ್ಚನಂತೆ ಅಲ್ಲ, ಅವನು ಸರ್ವಜ್ಞ. ಹಾಗಿರುವವನ ಅನುಗ್ರಹ ನಮಗೆ ದೊರೆಯಬೇಕಾದರೆ ನಾವು ಆತನ ಕೋಪವನ್ನು ದೂರಮಾಡ ಬೇಕು.

ಸಾಧ್ಯಾಶಂಭೋಃ ಕಥಮಪಿ ದಯೇತ್ಯಪ್ಯಸಾಧೋಪದೇಶಃ

ಭಗವಂತನ ಅನುಗ್ರಹವನ್ನು ನಾವು ಪಡೆಯಬಹುದೆನ್ನುವುದು ಅಷ್ಟು ಸುಲಭವಾದ ಕೆಲಸವಲ್ಲ.

ಕೋಪಂ ತಸ್ಯ ಪ್ರಥಮಮಪನುತ್ಯೈವ ಸಾಧ್ಯಃ ಪ್ರಸಾದಃ

ಭಗವಂತನಿಗೆ ಇರುವ ಕೋಪವನ್ನು ದೂರಮಾಡಿದರೆ ಅವನ ಪ್ರಸಾದವಾದ ದಯೆ ದೊರೆಯುವುದು. ಏತಕ್ಕೆ ಅವನಿಗೆ ಕೋಪ ಬಂದಿದೆ?

ಕೋಪೋವರ್ಣಾಶ್ರಮ ನಿಯಮಿತಾಚಾರ ನಿರ್ಲಂಘನೋತ್ಥಃ

ಪ್ರಪಂಚ ಸರಿಯಾಗಿ ನಡೆಯಬೇಕೆನ್ನುವುದಕ್ಕಾಗಿ ಲೌಕಿಕ ನಿಯಮಗಳು ಇರುವಂತೆ ವೇದಗಳೂ ನಮಗೆ ದಾರಿ ತೋರಿಸುವ ನಿಯಮಗಳೇ ಆಗಿವೆ. ಆಯಾ ಆಶ್ರಮದಲ್ಲಿರುವವರೂ, ತಮ್ಮ ತಮ್ಮ ಸಂಪ್ರದಾಯದಲ್ಲಿರುವವರೂ, ಹೇಗೆ ಬಾಳು ನಡೆಸಬೇಕೆಂದು ವಿಧಿನಿಯಮವಿದೆಯೋ ಹಾಗೆಯೇ ಬಾಳು ನಡೆಸಿದರೆ ಅವರಿಗೆ ಸುಖವಾಗಿರಲು ಸಾಧ್ಯ, ಅವರ ಸುತ್ತ-ಮುತ್ತ ಇರುವವರಿಗೂ ಸುಖವಾಗಿರಲು ಸಾಧ್ಯ. ಹಾಗಿಲ್ಲದೆ ತನಗೆ ಇಷ್ಟಬಂದಂತೆ ಯಾರಾದರೂ ಬಾಳು ನಡೆಸಿದರೆ, ಭಗವಂತನ ಪ್ರಸಾದ ದೊರೆಯುವುದೇ? ಇದಕ್ಕೆ ಬದಲಾಗಿ, ಅವನ ಧರ್ಮಗಳನ್ನು ಮೀರಿದ್ದಕ್ಕಾಗಿ ಭಗವಂತನ ಕೋಪಕ್ಕೇ ಅವನು ಪಾತ್ರನಾಗುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಬ್ಬ ಹುಡುಗ ತನ್ನ ತಂದೆ-ತಾಯಿಯ ಮಾತುಗಳನ್ನು ಕೇಳುವುದೇ ಇಲ್ಲ. ತಂದೆ-ತಾಯಿ ಸ್ಕೂಲಿಗೆ ಹೋಗು ಎಂದರೆ ಹುಡುಗ ಸಿನಿಮಾಗೆ ಹೋಗುತ್ತೇನೆ ಎನ್ನುತ್ತಾನೆ. ಹೀಗೆಲ್ಲ ನಿಯಮಕ್ಕೆ ವಿರೋಧವಾಗಿ ನಡೆದು ಕೊಂಡು ತನ್ನ ತಂದೆಗೆ ತನ್ನನ್ನು ಕಂಡರೆ ಆಗುವುದೇ ಇಲ್ಲ ಎಂದು ಹುಡುಗ ಹೇಳಿದರೆ ತಂದೆ ಏನು ಮಾಡುತ್ತಾರೆ ? ಹಾಗೆಯೇ ಭಗವಂತನ ನಿಯಮ ಗಳನ್ನು ನಾವು ಅತಿಕ್ರಮಿಸಿ ನಡೆದುಕೊಂಡು ನಮಗೆ ಭಗವಂತನ ಪ್ರಸಾದ ಬೇಕೆಂದರೆ ಅದು ದೊರೆಯುವುದಿಲ್ಲ. ಆದ್ದರಿಂದಲೇ ಶ್ಲೋಕದಲ್ಲಿ,

ಶಾಂತಿಂ ನೇಯಃ ಸ ಕಥಮಧುನಾಪ್ಯವ್ಯವಸ್ಥಾ ಪ್ರವೃತ್ತ್ಯೈಃ ॥

ಎಂದು ಹೇಳಲ್ಪಟ್ಟಿದೆ. ಇಷ್ಟು ದಿನಗಳು ಪ್ರಪಂಚವನ್ನು ನೋಡಿ, ಶಾಸ್ತ್ರವನ್ನು ಓದಿ ಸತ್ಪುರುಷರೊಡನೆ ಸಹವಾಸ ಮಾಡಿಯೂ ಕೂಡ ಶಾಸ್ತ್ರ ನಿಯಮಗಳಿಗೆ ಅನುಗುಣವಾಗಿ ಜೀವನ ನಡೆಸದೆ ಇದ್ದರೆ ಹೇಗೆ ನಾವು ಭಗವಂತನ ಕೋಪವನ್ನು ಶಾಂತ ಮಾಡಬಲ್ಲೆವು ಎಂದು ನೀಲಕಂಠ ದೀಕ್ಷಿತರು ಒಂದು ಪ್ರಶ್ನೆ ಒಡ್ಡಿದರು.

ಸಾ ಕಥಂ ಶಾಂತಿಂ ನೇತುಂ ಶಕ್ಯಃ

(ಅದನ್ನು ಹೇಗೆ ಸಮಾಧಾನ ಪಡಿಸುವುದು?)

ಆದ್ದರಿಂದ ನಮ್ಮ ನಮ್ಮ ಆಶ್ರಮಗಳಿಗೆ ಯೋಗ್ಯವಾದ ಧರ್ಮಗಳನ್ನು ನಾವು ಸರಿಯಾದ ರೀತಿಯಲ್ಲಿ ಆಚರಿಸುತ್ತಾ ಇರಬೇಕು.

ವೇದಾಂತ ಶಾಸ್ತ್ರವನ್ನು ಓದಿ ನೋಡಿದರೆ ಪರಮಾತ್ಮನೇ ಜೀವಾತ್ಮ ನಾಗಿ ಬಿಟ್ಟನೆಂದು ತಿಳಿಯುತ್ತದೆ. ಯಾವಾಗ ಪರಮಾತ್ಮನು ಜೀವಾತ್ಮ ನಾದನೆನ್ನುವ ಪ್ರಶ್ನೆಗೆ ನಾವು ಉತ್ತರ ಕೊಡಲು ಸಾಧ್ಯವಿಲ್ಲ. ಯಾವಾಗ ಬೀಜ ಉಂಟಾಯಿತು ಎಂದು ಕೇಳಿದರೆ ಮರ ಉಂಟಾಗುವುದಕ್ಕೆ ಮೊದಲು ಎಂದು ಹೇಳಬಹುದು. ಯಾವಾಗ ಮರ ಉಂಟಾಯಿತು ಎಂದು ಕೇಳಿದರೆ ಅದಕ್ಕೆ ನಾವು ಏನು ಉತ್ತರ ಹೇಳಬಹುದು? ಮೊದಲು ಬೀಜ ಉಂಟಾ-

Sri Vidyabharathi Book Centre, Sringeri

 CC-O. In Public Domain. Digitized by eGangotri

ಯಿತು ಎಂದು ಹೇಳಿದರೆ ಮರವಿಲ್ಲದೆ ಬೀಜ ಹೇಗೆ ಉಂಟಾಗುತ್ತದೆ ಎನ್ನುವ ಪ್ರಶ್ನೆ ಏಳುತ್ತದೆ. ಮರವೇ ಮೊದಲು ಉಂಟಾಯಿತು ಎಂದರೆ ಬೀಜವಿಲ್ಲದೆ ಮರ ಹೇಗೆ ಉಂಟಾಗುತ್ತದೆ ಎಂದು ಮತ್ತೊಂದು ಪ್ರಶ್ನೆ ಏಳುತ್ತದೆ. ಆದ್ದರಿಂದ ಬೀಜ-ಮರ-ಬೀಜ ಎಂದು ಚಕ್ರದಂತೆ ಅನಾದಿಯಾಗಿ ಬರುತ್ತದೆಯೆಂದು ಮಾತ್ರ ಹೇಳಬಲ್ಲೆವು. ಅದೇ ರೀತಿ ಜೀವನು ಅನಾದಿಯಾಗಿ ಶರೀರಗಳನ್ನು ಗ್ರಹಿಸುತ್ತಿದ್ದಾನೆ. ಅದಕ್ಕೆ ಕಾರಣವಾಗಿ 'ಕರ್ಮ' ಹೇಳಲ್ಪಡುವುದು. 'ಕರ್ಮ' ಎನ್ನುವುದು ನಮ್ಮ ಕೆಲಸಗಳನ್ನು ಸೂಚಿಸುತ್ತದೆ.

ಕರ್ಮದ ಮಹಿಮೆಯನ್ನು ಕುರಿತು ಹೇಳುವಾಗ ಕವಿ ಒಬ್ಬರು–

'ಬ್ರಹ್ಮಾಯೇನ ಕುಲಾಲವನ್ನಿಯಮಿತಃ ಬ್ರಹ್ಮಾಂಡಭಂಡೋದರೇ
ವಿಷ್ಣುರ್ಯೇನ ದಶಾವತಾರಗಹನೇ ಕ್ಷಿಪ್ತೋ ಮಹಾಸಂಕಟೇ ।
ರುದ್ರೋಯೇನ ಕಪಾಲಪಾಣಿ ಪುಟಕೇ ಭಿಕ್ಷಾಟನಂ ಸೇವತೇ
ಸೂರ್ಯೋ ಭ್ರಾಮ್ಯತಿ ನಿತ್ಯಮೇವ ಗಗನೇ ತಸ್ಮೈ ನಮಃ
ಕರ್ಮಣೇ' ॥

[ಯಾವುದರಿಂದ ಬ್ರಹ್ಮನು ಪ್ರಪಂಚದಲ್ಲಿ(ಸೃಷ್ಟಿಯೆನ್ನುವ ಕೆಲಸದಲ್ಲಿ) ಕುಂಬಾರನಂತೆ ನಿಯಮಿತನಾಗಿದ್ದಾನೋ, ಯಾವುದರಿಂದ ವಿಷ್ಣು ದೊಡ್ಡ ಸಂಕಟವಾದ ಹತ್ತು ಅವತಾರವೆನ್ನುವ ಕಾಡಿನಲ್ಲಿ ಹಾಕಲ್ಪಟ್ಟಿದ್ದಾನೋ, ಯಾವುದರಿಂದ ಪರಮೇಶ್ವರನು ಕೈಯಲ್ಲಿ ಕಪಾಲವನ್ನು ಹಿಡಿದು ಭಿಕ್ಷೆಯನ್ನು ತೆಗೆದುಕೊಳ್ಳುತ್ತಾನೋ ಮತ್ತು ಯಾವುದರಿಂದ ಸೂರ್ಯನು ಪ್ರತಿನಿತ್ಯವು ತಿರುಗುತ್ತಲೇ ಇದ್ದಾನೋ ಅಂಥ ಕರ್ಮಕ್ಕೆ ನಮ್ಮ ನಮಸ್ಕಾರ] ಎಂದು ಹೇಳಿದರು. ಆದರೆ, ಕವಿ ಹೇಳುವುದನ್ನೂ ನಾವು ಒಪ್ಪಲಾಗುವುದಿಲ್ಲ. ಅವರು ಕರ್ಮದ ಮಹಿಮೆಯನ್ನು ಹೇಳಬೇಕೆಂದಿರುವುದರಿಂದ ಭಗವಂತನು ಕೂಡ ಕರ್ಮದಿಂದ ಕಷ್ಟಪಟ್ಟನೆಂದು ತೋರಿಸುತ್ತಾರೆ.

ಆದರೆ, ನಿಜಕ್ಕೂ ಭಗವಂತನು ಕರ್ಮಕ್ಕೆ ಸಿಕ್ಕಿದವನೇ ಅಲ್ಲ. ಕರ್ಮಕ್ಕೆ ಸಿಕ್ಕಿಕೊಂಡರೆ ಅವನು ಭಗವಂತನೇ ಅಲ್ಲ. ರಾಮನು ವನ

Sri Vidyabharathi Book Centre, Sringeri

CC-O. In Public Domain. Digitized by eGangotri

ತಪ್ಪು ಮಾಡಿದರೂ ಅದು ತಪ್ಪಲ್ಲ. ಏಕೆಂದರೆ ಪ್ರಪಂಚದಲ್ಲಿ ಅದರಿಂದ ಯಾರಿಗೂ ಯಾವ ವಿಧವಾದ ಲಾಭವೂ ಇಲ್ಲ, ನಷ್ಟವೂ ಇಲ್ಲ. ಒಂದು ಮುಖ್ಯವಾದ ವಿಷಯವನ್ನು ನಾವು ಗಮನಿಸಬೇಕು. ಕನಸಿನಲ್ಲಿ ಏನೇನು ಬರುತ್ತದೆಯೋ ಅದಕ್ಕೆ ಅವನವನ ಕರ್ಮವೇ ಕಾರಣ. ಕನಸಿನಲ್ಲಿ ಒಮ್ಮೆ ತಾನು ರಾಜನಾಗಿ ಕುಳಿತುಕೊಂಡಂತೆ ತೋರುವಾಗ ಬಹಳ ಸಂತೋಷವಾಗುತ್ತದೆ. ಮತ್ತೊಮ್ಮೆ ತನ್ನನ್ನು ಪೋಲಿಸಿನವನು ಹಿಡಿದುಕೊಂಡು ಹೋಗುತ್ತಿದ್ದಂತೆ ತೋರಿದರೆ ಆ ನಿಮಿಷ ಅದರ ಬಗ್ಗೆ ವ್ಯಥೆಯಾಗುತ್ತದೆ. ಆದ್ದರಿಂದ ಒಮ್ಮೆ ಸಂತೋಷ ಮತ್ತೊಮ್ಮೆ ದುಃಖವೂ ಆಗುತ್ತದೆ. ಹೀಗೆ ಕನಸಿನಲ್ಲಿ ಉಂಟಾಗುವ ದುಃಖಗಳಿಗೂ ಕಾರಣವಾಗಿರುವುದು ಕರ್ಮ ಆಗುತ್ತದೆ.

ಇದೇ ರೀತಿ ಜಾಗ್ರತ್ ಸ್ಥಿತಿಯಲ್ಲಿ ನಡೆಯುವುದೆಲ್ಲ ಕರ್ಮದ ಕಾರಣದಿಂದಲೇ ಉಂಟಾದವು ಆಗುತ್ತವೆ. ನಾವು ಮೊದಲು ಮಾಡಿದ ಸತ್ಕರ್ಮಗಳ ಫಲವಾಗಿ ತಾತ್ಕಾಲಿಕವಾಗಿ ಸುಖವನ್ನೂ, ಕೆಟ್ಟಕರ್ಮದ ಫಲವಾಗಿ ದುಃಖವನ್ನೂ ಪಡೆಯುತ್ತೇವೆ. ಯಾವುದು ಒಳ್ಳೆಯ ಕೆಲಸವೆಂದು ಇಲ್ಲಿ ಹೇಗೆ ತೀರ್ಮಾನ ಮಾಡುವುದು ಎನ್ನುವ ಪ್ರಶ್ನೆ ನಮಗೆ ಉಂಟಾಗುತ್ತದೆ. ಆ ಪ್ರಶ್ನೆಗೆ ಸಮಾಧಾನ ನೋಡಲು ನಮಗೆ ವೇದವಿದೆ. ವೇದದಲ್ಲಿ ಧರ್ಮ ಯಾವುದು, ಅಧರ್ಮ ಯಾವುದು ಎಂದು ಹೇಳಲ್ಪಟ್ಟಿದೆ. ಯಾವುದು ನಮ್ಮಿಂದ ಮಾಡಲ್ಪಡಬೇಕೋ ಅದು ಧರ್ಮ. ನಮ್ಮಿಂದ ಮಾಡಲ್ಪಡಬಾರದೋ ಅದು ಅಧರ್ಮ. ಪ್ರಪಂಚದಲ್ಲಿ ನಿಯಮ ಕಾನೂನು ಎನ್ನುವುದಿದೆ. ಕಾನೂನು ಪುಸ್ತಕದಲ್ಲಿ ಯಾವು ಯಾವುದನ್ನು ನಾವು ಮಾಡಬೇಕೆಂದು ಹೇಳಿದೆ. ಕಾನೂನು ನಿಯಮಗಳನ್ನು ಉಲ್ಲಂಘಿಸಿದರೆ ನಮಗೆ ಶಿಕ್ಷೆಯಾಗುತ್ತದೆ. ನಾವು ಯಾವು ಯಾವುದನ್ನು ಮಾಡಬೇಕೆನ್ನುವುದನ್ನು ಸಾಮಾನ್ಯವಾಗಿ ಕಾನೂನು ಹೇಳುವುದಿಲ್ಲ. ಮಾಡಬೇಕಾದವುಗಳನ್ನು ನಮ್ಮ ಇಷ್ಟಕ್ಕೆ ಬಿಟ್ಟುಬಿಡುತ್ತಾರೆ. ಆದರೆ, ಕೆಲವು ವೇಳೆ ನಾವು ಏನು ಮಾಡಬೇಕು ಎನ್ನುವುದನ್ನೂ ಕಾನೂನೇ ತೀರ್ಮಾನಿಸುತ್ತದೆ. ಉದಾಹರಣೆಗೆ ನಾವು ಯಾವುದಾದರೂ ಮನೆಕಟ್ಟಬೇಕೆಂದು ಇಷ್ಟಪಟ್ಟರೆ ನಮಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತೋರಿದ ಜಾಗದಲ್ಲಿ ಹಾಗೆ ಕಟ್ಟಲಾಗುವುದಿಲ್ಲ ನಾವು ಆ ಜಾಗವನ್ನು ಕೊಂಡಿರಬೇಕು. ಇಲ್ಲದಿದ್ದರೆ ಜಾಗ ನಮ್ಮ ತಂದೆಯಿಂದ ನಮಗೆ ದೊರೆತಿರಬೇಕು. ಇದೂ ಇಲ್ಲದಿದ್ದರೆ ಯಾರಾದರೂ ದಾನವಾದರೂ ಕೊಟ್ಟಿರಬೇಕು. ಕಟ್ಟಡವನ್ನು ಕಟ್ಟುವುದಕ್ಕೆ ಮೊದಲು ಪುರಸಭೆಯ ಅನುಮತಿ ಪಡೆದಿರಬೇಕು. ಹೀಗೆಲ್ಲ ಇಲ್ಲದೆ 'ಜಾಗ ಇಲ್ಲಿದೆ ನಾನು ಹೋಗಿ ಮನೆ ಕಟ್ಟಿದರೆ ಏನು ತಪ್ಪು?' ಎಂದು ಕೊಂಡು ಯಾರಾದರೂ ಮನೆಕಟ್ಟಿದರೆ ಪುರಸಭೆ ಅವನನ್ನು ಬಿಟ್ಟು ಬಿಡುವುದಿಲ್ಲ.

ಮನೆಯನ್ನು ಒಡೆದು ಹಾಕುವಂತೆ ಅವನಿಗೆ ಹೇಳಿ ನೋಡುತ್ತಾರೆ. ಅವನ ಹಾಗೆ ಮಾಡದೆ ಇದ್ದರೆ ಅವರೇ ಬಂದು ಒಡೆದು ಹಾಕಿ ಅದಕ್ಕೆ ಆಗುವ ಖರ್ಚನ್ನೂ ಅವನಿಂದಲೇ ವಸೂಲು ಮಾಡುತ್ತಾರೆ. ಅದು ಅವನಿಗೆ ಆಗದೇ ಹೋದರೆ ಜೈಲಿಗೆ ಕಳುಹಿಸುತ್ತಾರೆ. ಆದ್ದರಿಂದ ಕಾನೂನು ಪುಸ್ತಕದಲ್ಲಿ ಬರೆದಿರುವಂತೆ ನಡೆಯದವರು ಇಷ್ಟು ಶಿಕ್ಷೆ ಅನುಭವಿಸಬೇಕಾಗುತ್ತದೆ. ಆ ಪುಸ್ತಕದಲ್ಲಿ ಏನು ಬರೆಯಲ್ಪಟ್ಟಿದೆ ಎನ್ನುವುದು ನನಗೆ ಗೊತ್ತಿಲ್ಲ ಎಂದು ಯಾರೂ ಹೇಳಲಾಗುವುದಿಲ್ಲ. ಏಕೆಂದರೆ ಅದನ್ನು ಕುರಿತು ತಿಳಿಯುವುದು ಅವನ ಕರ್ತವ್ಯ. ವೇದವೂ ಕಾನೂನುಪುಸ್ತಕದಂತೆ ನಾವು ಯಾವ ರೀತಿ ಮಾಡಬೇಕು, ಯಾವುದನ್ನು ಮಾಡಬಾರದು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ವೇದದಲ್ಲಿ ನಂಬಿಕೆ ಇರುವ ಆಸ್ತಿಕನಾಗಿರುವವನು ಪರಲೋಕವಿದೆ, ತಾನು ಮಾಡುವ ಕರ್ಮಕ್ಕೆ ಫಲ ಇದೆ ಎಂಬುದನ್ನು ನಂಬುತ್ತಾನೆ. ಆದ್ದರಿಂದಲೇ 'ಅಸ್ತಿ ನಾಸ್ತಿ ದಿಷ್ಟಂ ಮತಿಃ' ಎಂದು ಹೇಳಿದೆ. ದಿಷ್ಟಂ ಎಂದರೆ ಅದೃಷ್ಟ ಎಂದು ತಾತ್ಪರ್ಯ. ನಾವು ಮಾಡುವ ಕರ್ಮಗಳು ಒಂದು ಸಂಸ್ಕಾರವನ್ನು ಕೊಡುತ್ತವೆ. ಅದಕ್ಕೆ ಅದೃಷ್ಟವೆಂದು ಹೆಸರು. ಕರ್ಮದ ಇನ್ನೊಂದು ವಿಶೇಷವನ್ನು ನೋಡೋಣ.

'ಕುರ್ವತೇ ಕರ್ಮಭೋಗಾಯ ಕರ್ಮ ಕರ್ತುಂ ಚ ಭುಂಜತೇ' ।

ನಾವು ಒಂದು ಆಫೀಸಿಗೆ ಹೋಗಿ ಕೆಲಸ ಮಾಡುತ್ತೇವೆ. ಅದು ಏಕೆಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೇಳಿದರೆ ಸಂಬಳ ಪಡೆಯುವುದಕ್ಕಾಗಿಯೇ ಆಫೀಸಿಗೆ ಹೋಗುತ್ತೇವೆ. ಸಂಬಳ ಏಕೆ ತೆಗೆದು ಕೊಳ್ಳುತ್ತೇವೆಂದರೆ, ಕೆಲಸ ಮಾಡಿದುದಕ್ಕಾಗಿ ಸಂಬಳ ತೆಗೆದು ಕೊಳ್ಳುತ್ತೇವೆ. ಎರಡು ಕೆಲಸಗಳೂ ಒಂದಾದ ಮೇಲೆ ಒಂದು ಬರುತ್ತವೆ, ಅದೇ ರೀತಿ,

'ಅಗ್ನಿಹೋತ್ರಂ ಜಹುಯಾತ್ ಸ್ವರ್ಗಕಾಮಃ ।
ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ ।
ಪುತ್ರಕಾಮೋ ಪುತ್ರೇಷ್ಟ್ಯಾ ಯಜೇತ ।

ಹೀಗಿರುವಾಗ ವೇದ ವಾಕ್ಯಗಳು, ಆಯಾ ಫಲಗಳಿಗೆ ತಕ್ಕ ಕರ್ಮ ಗಳನ್ನು ಮಾಡಲು ತಿಳಿಸುತ್ತವೆ. ಆದ್ದರಿಂದ ಭೋಗವೆಲ್ಲ ಬೇಕೆನ್ನು ವುದಕ್ಕಾಗಿ, ಅದಕ್ಕೆ ಬೇಕಾದ ಕರ್ಮಗಳನ್ನು ನಾವು ಮಾಡಬೇಕು, ಕೊನೆಗೆ ಆ ಭೋಗವೇತಕ್ಕೆ ಎಂದರೆ 'ಕರ್ಮ ಕರ್ತೃಂ ಚ ಭುಂಜತೇ' ಎನ್ನುವಂತೆ ಆಗುತ್ತದೆ. ಪಾಯಸವನ್ನು ತಿನ್ನದ ಒಬ್ಬನಿಗೆ ಅವನ ಆಪ್ತ ಮಿತ್ರನೊಬ್ಬನು ಪಾಯಸವನ್ನು ಕೊಟ್ಟನಂತೆ. ಪಾಯಸವನ್ನು ತಿಂದ ಅವನಿಗೆ ಪಾಯಸ ಬಹಳ ರುಚಿಯಾಗಿದೆಯೆಂದು ತಿಳಿಯಿತು. ಅನಂತರ ತನ್ನ ಮನೆಯಲ್ಲಿಯೂ ಪಾಯಸ ಮಾಡಿಸಿಕೊಂಡು ತಿನ್ನಬೇಕೆನ್ನುವ ಆಸೆ ಉಂಟಾಯಿತು. ಆದ್ದರಿಂದ ಪಾಯಸವನ್ನು ತಿಂದ ಭೋಗ ಮತ್ತೆ ಪಾಯಸವನ್ನು ತಿನ್ನಬೇಕೆನ್ನುವುದಕ್ಕೆ ಕಾರಣವಾಯಿತು. ಮೊದಲು ಪಾಯಸ ತಿನ್ನದೆ ಇದ್ದಾಗ ತನ್ನ ಮನೆಯಲ್ಲಿ ಪಾಯಸ ಮಾಡಿಸಿಯೇ ಇರ ಲಿಲ್ಲ. ಆದ್ದರಿಂದ ಭೋಗದಿಂದ ರುಚಿ, ರುಚಿಯಿಂದ ಮತ್ತೆ ಕರ್ಮ, ಕರ್ಮದಿಂದ ಭೋಗ ಹೀಗೆ ಇದು ಸುತ್ತಿ ಕೊಂಡೇ ಬರುತ್ತದೆ. ಹೀಗಿರುವ ಕರ್ಮವನ್ನೇ 'ಬಂಧಕ'ವೆನ್ನುತ್ತೇವೆ. 'ಬಂಧಕ' ವೆಂದರೆ ಏನು ಅರ್ಥ? ಅಂಥ ಕರ್ಮ ನಮಗೆ ಬಿಡುಗಡೆ ಇಲ್ಲದಂತೆ ನಮ್ಮ ಹಿಂದೆಯೇ ಸುತ್ತಿ ಕೊಂಡಿರುತ್ತದೆ. ನಾವು ಪ್ರಾಣ ಬಿಟ್ಟರೂ ಅದು ನಮ್ಮನ್ನು ಬಿಡುವುದಿಲ್ಲ. ಇಂದು ನಾವು ಮಾಡುವ ಕರ್ಮ ನಮ್ಮ ಹಿಂದೆಯೇ ಬರುತ್ತದೆ, ಭಗ ವಂತ ಗೀತೆಯಲ್ಲಿ—

Sri Vidyabharathi Book Centre, Sringeri

CC-O. In Public Domain. Digitized by eGangotri

'ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್॥.

(ಇದರಲ್ಲಿ ಪ್ರಯತ್ನವಿಲ್ಲ. ಇದರಲ್ಲಿ ಕೆಡಕೆನ್ನುವುದೂ ಇಲ್ಲ. ಈ ಧರ್ಮವನ್ನು ಸ್ವಲ್ಪ ಮಾಡಿದರೂ, ಇದು ಅವನನ್ನು ಭಯದಿಂದ ಕಾಪಾಡುವುದು ಎನ್ನುತ್ತಾನೆ. ಪುಣ್ಯ ಕರ್ಮವಾದರೆ ಅದು ದೊಡ್ಡ ಭಯದಿಂದ ನಮ್ಮನ್ನು ಕಾಪಾಡುತ್ತದೆ. ಪಾಪಕರ್ಮವಾದರೆ ಅದು ದೊಡ್ಡ ಭಯವನ್ನು ಕೊಡುತ್ತದೆ. ಆದ್ದರಿಂದ ನಾವು ಪ್ರಾಣ ಬಿಟ್ಟರೂ ಕರ್ಮ ಬಿಡದೆ ನಮ್ಮನ್ನು ಹಿಂಬಾಲಿಸುತ್ತದೆ.

ಒಂದೆಡೆಯಲ್ಲಿ

'ನದ್ಯಾಂ ಕೀಟಾ ಇವಾವರ್ತಾತಾವರ್ತಾನ್ತರಮಾಶು ತೇ ।
ವ್ರಜನ್ತೋ ಜನ್ಮನೋ ಜನ್ಮ ಲಭನ್ತೇ ನೈವನಿರ್ವೃತಿಮ್ ॥

ಎಂದು ಹೇಳಲ್ಪಟ್ಟಿದೆ. ನಮಗೆ ಜನ್ಮ ಬಂಧನವಿರುವವರೆಗೆ ಅಮಿತ ಶಾಂತಿ ದೊರೆಯುವದಿಲ್ಲ. ನಾವು ಸಾಧಾರಣವಾಗಿ ಅನುಭವಿಸುವ ಶಾಂತಿ ಹೇಗಿದೆಯೆಂದರೆ ಒಂದು ಆಸೆ ಮನಸ್ಸಿನಲ್ಲಿ ಉಂಟಾಗಿ ಆ ಆಸೆ ನಿಮಿಷದಲ್ಲೇ ಮುಗಿದು ಹೋಗುತ್ತದೆ. ಆದ್ದರಿಂದ ನಾವು ಸುಖವಾಗಿರಬಹುದೆಂದುಕೊಳ್ಳುವಾಗ ಇನ್ನೊಂದು ವಸ್ತುವನ್ನು ನೋಡುತ್ತೇವೆ. ತಕ್ಷಣ ಆ ವಸ್ತು ವಿಷಯದಲ್ಲಿ ಆಸೆ ಬಂದು ಬಿಡುತ್ತದೆ. ಅನಂತರ ಆ ವಸ್ತು ದೊರೆತ ಒಡನೆ ಬೇರೆ ವಿಷಯಂದಲ್ಲಿ ಮನಸ್ಸು ಆಸೆಪಡಲು ಪ್ರಾರಂಭಿಸುತ್ತದೆ.

'ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಮ್' ।

ಎಂದು ಹೇಳಿದ ಪ್ರಕಾರ ನಾವು ಪರಮಾತ್ಮನ ಸಾಕ್ಷಾತ್ಕಾರ ಪಡೆದರೆ ಮಾತ್ರ ಶಾಶ್ವತವಾದ ಶಾಂತಿ ಎನ್ನುವುದು ದೊರೆಯುವುದು,

'ನದ್ಯಾಂ ಕೀಟಾ ಇವಾವರ್ತಾತಾವರ್ತಾನ್ತರಮಾಶು ತೇ ।'

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿಕ್ಕ ಹುಳು ಅಲ್ಲಿ ಇಲ್ಲಿ ಓಡಾಡುತ್ತದೆ. ಅಕಸ್ಮಾತ್ತಾಗಿ ನದಿಯಲ್ಲಿ ಬಿದ್ದುಬಿಡುತ್ತದೆ. ನದಿಯಲ್ಲಿ ಒಂದು ಸುಳಿ ಇದ್ದಿತು. ಹುಳು ಆ ಸುಳಿಯಲ್ಲಿಯೇ ಸುತ್ತಾಡಲು ಪ್ರಾರಂಭಿಸಿತು. ಆ ಸುಳಿಯಲ್ಲಿ ತಾನು ಕಷ್ಟಪಡಬೇಕಾಗಿದೆಯಲ್ಲಾ ಎಂದು ಅದು ಚಿಂತಿಸಿತು. ಸ್ವಲ್ಪ ಹೊತ್ತಿನಲ್ಲಿ ದೈವಿಕವಾಗಿ ಅದು ಸುಳಿಯಿಂದ ತಪ್ಪಿಸಿಕೊಂಡಿತು. ಆದರೆ ಸ್ವಲ್ಪ ದೂರ ಹೋಗುವುದರೊಳಗಾಗಿ ಇನ್ನೊಂದು ಸುಳಿಯಲ್ಲಿ ಸಿಕ್ಕಿಕೊಂಡಿತು. ನಮ್ಮ ರೀತಿಯೂ ಇದೇ ರೀತಿ ಇದೆ. 84ಲಕ್ಷ ಜೀವರಾಶಿಗಳಲ್ಲಿ ಯಾವುದಾದರೂ ಒಂದು ಜೀವರಾಶಿಯಾಗಿ ನಾವೂ ಹುಟ್ಟುತ್ತಲೇ ಇದ್ದೇವೆ. ಈಗ ಮನುಷ್ಯ ಜನ್ಮವನ್ನು ತೆಗೆದುಕೊಂಡಿದ್ದೇವೆ.

ಶುಭೈರಾಪ್ನೋತಿ ದೇವತ್ವಂ ನಿಷಿದ್ಧೈರ್ನಾರಕೀಂ ತನುಮ್।
ಉಭಾಭ್ಯಾಂ ಪುಣ್ಯಪಾಪಾಭ್ಯಾಂ ಮಾನುಷ್ಯಂ ಲಭತೇಽವಶಃ ॥

(ಪುಣ್ಯಕರ್ಮಗಳಿಂದ ಒಬ್ಬನು ದೈವತ್ವವನ್ನು ಪಡೆಯುತ್ತಾನೆ, ಪಾಪ ಕರ್ಮಗಳಿಂದ ನೀಚಜನ್ಮವನ್ನು ಪಡೆಯುತ್ತಾನೆ. ಪುಣ್ಯವೂ ಪಾಪವೂ ಸೇರಿದರೆ ನಿಶ್ಚಯವಾಗಿಯೂ ಮನುಷ್ಯ ಜನ್ಮ ಪಡೆಯುತ್ತಾನೆ.) ವಿಶೇಷವಾಗಿ ಸತ್ಕರ್ಮವನ್ನು ಮಾಡಿದವರು ದೇವತೆಗಳಾಗಿ ಹುಟ್ಟುತ್ತಾರೆ ಆದರೆ ದೇವತೆಗಳಾಗಿ ಹುಟ್ಟಿಯೂ ಯಾವ ಫಲವೂ ಇಲ್ಲ. ದೇವತೆಗಳಾಗಿ ಹುಟ್ಟಿದರೆ ಮೋಚಬೇಕಾದುದೇ ಇಲ್ಲ. ಏಕೆಂದರೆ ಅಲ್ಲಿ ಇರುವ ಭೋಗಗಳೇ ಇದಕ್ಕೆ ಕಾರಣ. ಇನ್ನೊಂದು ವಿಶೇಷವೆಂದರೆ, ಅಲ್ಲಿರುವವರೆಗೆ ಯಾವುದೋ ಕೆಲವು ದಿನಗಳು ಸುಖವಾಗಿ ಬದುಕಬಹುದು. ಅನಂತರ,

'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ'

ಎಂದು ಹೇಳಿದಂತೆ ಪುಣ್ಯವೆಲ್ಲ ಮುಗಿದ ಮೇಲೆ ಕೆಳಗೆ ಇಳಿದು ಬರಬೇಕಾದುದೇ: ಆದರೆ ಪಾಪ ಮಾಡಿದವರಿಗೆ ನರಕ ಸಿಕ್ಕುತ್ತದೆ. ಯಾರಿಗೆ ಸತ್ಯ ಯಾವುದು, ಅಸತ್ಯ ಯಾವುದು ಎನ್ನುವ ವಿವೇಚನೆಯೇ ಇಲ್ಲವೋ, ಯಾರು ಭಗವಂತನನ್ನು ನೆನೆಯುವುದಿಲ್ಲವೋ, ಯಾರು ಇತರರ ಸ್ವತ್ತನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಗೆ ತಾವು ತೆಗೆದುಕೊಳ್ಳುವುದೆಂದು ನೋಡುತ್ತಿರುತ್ತಾರೋ ಅವರು ಅಧರ್ಮ ಮಾಡುವವರಾಗಿದ್ದಾರೆ. ಇಷ್ಟೇ ಅಲ್ಲ, ಕೆಲವರು ವಿಶೇಷ ವಾದ ಅಧರ್ಮಗಳನ್ನು ಮಾಡುತ್ತಾರೆ. ಕೆಲವನ್ನು ಮಾಡಿದರೆ ಅಧರ್ಮ. ಅದೇ ರೀತಿ ಕೆಲವನ್ನು ಬಿಟ್ಟರೆ ಅಧರ್ಮ. ಹಾಗೆಯೇ ಯಾರಿಗೆ ಸಂಧ್ಯಾವಂದನೆ ಮಾಡಬೇಕೆಂದು ಹೇಳಿದೆಯಲ್ಲ, ಅದನ್ನು ಬಿಟ್ಟರೆ, ಅಧರ್ಮ. ಇಂಥ ಅಧರ್ಮಗಳೆಲ್ಲ ಮಾಡುವವನು ನರಕವನ್ನೇ ಪಡೆಯು ತ್ತಾನೆ. ಆದ್ದರಿಂದ, ಮನುಷ್ಯನ ಜನ್ಮವೇ ಎಲ್ಲದಕ್ಕಿಂತಲೂ ಶ್ರೇಷ್ಠ ವಾದುದೆನ್ನುವುದನ್ನು ನಾವು ತಿಳಿಯಬಹುದು. ದುರ್ಲಭವಾದ ಮನುಷ್ಯ ಜನ್ಮವನ್ನು ಪಡೆದ ನಾವು ನಮ್ಮ ಹಿಂದಿನವರು ತೋರಿಸಿದ ಆಚಾರ ಪರಂಪರೆಯಂತೆ ಜೀವನವನ್ನು ನಡೆಸಬೇಕು.

ಇದಕ್ಕೆ ಸಂಬಂಧಪಟ್ಟಂತೆ ಒಂದು ಘಟನೆಯನ್ನು ನನ್ನ ಹತ್ತಿರ ಪ್ರೇಮಪಾತ್ರರೊಬ್ಬರು ಹೇಳಿದರು. ನಮ್ಮ ದೇಶದ ಒಬ್ಬರು ವಿದೇಶ ದಲ್ಲಿ ಕೆಲಸ ಮಾಡಿಬಂದರು. ಒಮ್ಮೆ ಆ ದೇಶಕ್ಕೆ ಇವರ ಮಾವನವರೂ, ಅತ್ತೆಯವರೂ ಹೋದರು. ಇವರು ಅವರಿಬ್ಬರನ್ನೂ ಕರೆದುಕೊಂಡು ಹೋಗಲು ಆ ದೇಶದ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ವಿಮಾನ ನಿಲ್ದಾಣದಲ್ಲಿ ಇವರನ್ನು ನೋಡಿದ ಇವರ ಸ್ನೇಹಿತರು 'ಇದೇನು ವಿಚಿತ್ರವಾಗಿದೆ! ತಾಯಿಯನ್ನೂ, ತಂದೆಯನ್ನೂ ಸರಿಯಾಗಿ ನೋಡಿಕೊಳ್ಳದ ಈ ಕಾಲದಲ್ಲಿ ಅತ್ತೆಯವರೂ, ಮಾವನವರೂ ಬಂದಿದ್ದಾರೆಂದು ಅವರನ್ನು ಕರೆದುಕೊಂಡು ಹೋಗಲು ಬಂದಿದ್ದೀಯಲ್ಲಾ!' ಎಂದರಂತೆ. ಅವರು ಅದಕ್ಕೆ, 'ಇದು ನಮ್ಮ ದೇಶದ ಆಚಾರ' ಎಂದರಂತೆ. ಸ್ನೇಹಿತರು ಅದಕ್ಕೆ 'ಇದು ಈ ಕಾಲದಲ್ಲಿ ಉಪಯೋಗವಿಲ್ಲದ ಆಚಾರವಾಗಿದೆ. ಒಬ್ಬರಿಗೆ ವಯಸ್ಸಾದರೆ ಅವರು ಯಾರಾದರೂ ಅವರನ್ನು ಅನಾಥಾಶ್ರಮ ಕ್ಕೆ ಸೇರಿಬಿಡುವುದೇ ಒಳ್ಳೆಯದು. ಅನಂತರ ಒಂದು ವರ್ಷಕ್ಕೋ ಅಥವಾ ಎರಡು ವರ್ಷಕ್ಕೋ ಒಂದುಸಾರಿ ಅಲ್ಲಿಗೆ ಹೋಗಿ ಅವರನ್ನು ನೋಡಿ ಬಂದರೆ ಸಾಕು. ಇಷ್ಟು ತೊಂದರೆ ಯಾಕೆ?' ಎಂದು ಹೇಳಿದರಂತೆ. ಇಂಥ ಘಟನೆಯನ್ನು ನೋಡಿದರೆ ನಮ್ಮ ದೇಶದ ಸಂಸ್ಕೃತಿಗೆ ಅದು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಷ್ಟು ಬೇರೆಯಾಗಿದೆಯೆಂದು ಸ್ಪಷ್ಟವಾಗಿ ಕಾಣಬಹುದು. ನಮ್ಮ ವೇದ ಮಾತೃದೇವೋ ಭವ। ಪಿತೃದೇವೋ ಭವ।' ಎಂದು ಹೇಳಿ ತಾಯಿಯನ್ನೂ ತಂದೆಯನ್ನೂ ದೇವರಂತೆ ಗೌರವವಿಸಬೇಕೆಂದು ಹೇಳುತ್ತದೆ.

ಈ ಕಾಲದ ಮನುಷ್ಯರು ಏನೆಂದು ಭಾವಿಸುತ್ತಾರೆ ? 'ಅಮ್ಮ ಅಪ್ಪ ಬಹಳ ವಯಸ್ಸಾಗಿರುವವರು. ಅವರ ಶರೀರವೆಲ್ಲ ಶಿಥಿಲವಾಗಿ ಅವರು ಯಾವಾಗಲೂ ಕೆಮ್ಮಿಕೊಂಡೇ ಇರುತ್ತಾರೆ. ಇದನ್ನು ನೋಡುವುದಕ್ಕೆ ಅಸಹ್ಯವಾಗಿದೆ. ಅವರು ಚೆನ್ನಾಗಿದ್ದರೆ ನಾನು ಅವರನ್ನು ನನ್ನೊಡನೆ ಇಟ್ಟುಕೊಳ್ಳುತ್ತೇನೆ' ಎಂದು ಭಾವಿಸುತ್ತಾರೆ. ಹಾಗಿರುವವರು ಸ್ವಲ್ಪ ಯೋಚಿಸಬೇಕು. 'ನಾವು ಚಿಕ್ಕ ಮಗುವಾಗಿದ್ದಾಗ ತಾಯಿಯ ಮಡಿಲಲ್ಲಿ ಎಷ್ಟು ಸಾರಿ ಮಲ-ಜಲ ವಿಸರ್ಜನೆ ಮಾಡಿ ಅಸಹ್ಯ ಮಾಡಿದ್ದೇವೆ ! ಅದೆಲ್ಲವನ್ನು ತಾಯಿ ಸಹಿಸಿಕೊಂಡು ಎಷ್ಟು ಪ್ರೀತಿಯಿಂದ, ಎರಡೂವರೆ ವರ್ಷಗಳವರೆಗೆ ಸೇವೆ ಮಾಡಿದ್ದಾಳೆ ! ಒಂದು ಮಗುವೆ ಅಲ್ಲದೇ ಹುಟ್ಟಿದ ನಾಲ್ಕು ಮಕ್ಕಳಿಗೂ ಆ ರೀತಿಯ ಸೇವೆ ಮಾಡಿದುದಕ್ಕಾಗಿ ತಾಯಿ ಕಡಿಮೆ ಪಕ್ಷ ಹತ್ತು ವರ್ಷಗಳಾದರೂ ಕಳೆದಿರುತ್ತಾಳೆ. ಆದ್ದರಿಂದ ನಾವು ನಾಲ್ಕು ಮಂದಿಯೂ ಸೇರಿ ತಲ ಎರಡು ವರ್ಷಗಳಾದರೂ ಆಕೆಯನ್ನು ಇಟ್ಟುಕೊಂಡು ಕಾಪಾಡಿದರೆ ಏನು ತಪ್ಪು ?' ಎಂದು ನಾವು ಯೋಚಿಸಬೇಕು.

ಒಂದು ಕಡೆ ನೀಲಕಂಠದೀಕ್ಷಿತರು, 'ಪ್ರಾದುರ್ಭೂತಾ ಸ್ವಯಮಿವ ಹಿತೇ' ಎಂದು ಹೇಳುತ್ತಾರೆ. ಸ್ವಲ್ಪ ವಯಸ್ಸಾಯಿತು, ಶರೀರದಲ್ಲಿ ಬಲವಿದ್ದಾಗ 'ನಾನು ತಂದೆ – ತಾಯಿಗೆ ಹುಟ್ಟಿದವನೇ ಅಲ್ಲ. ನಾನು ನೇರವಾಗಿ ಸ್ವರ್ಗ ಲೋಕದಿಂದ ಹಾರಿ ಬಂದೆ' ಎಂದು ಭಾವಿಸುತ್ತಾರೆ ತನ್ನ ವಿದ್ಯಾಭ್ಯಾಸಕ್ಕೆ ಗುರು ಎಷ್ಟು ಕಷ್ಟ ಪಟ್ಟಿದ್ದಾರೆಂಬುದನ್ನೂ ತಾಯಿಯೂ, ತಂದೆಯೂ ಎಷ್ಟು ಕಷ್ಟಪಟ್ಟು ಹಣ ವೆಚ್ಚಮಾಡಿದ್ದಾರೆಂಬುದನ್ನೂ ಅವರೆ ಮರೆತು ಬಿಟ್ಟು,

'ಪ್ರಾಕ್ತನಾದೃಷ್ಟಲಬ್ಧಪ್ರಜ್ಞೋನ್ಮೇಷಾ
ಇವ ಚ ತನಯಾ ನಸ್ಮರನ್ತ್ಯಾತ್ಮನೋಽಪಿ'

Sri Vidyabharathi Book Centre, Sringeri

 CC-O. In Public Domain. Digitized by eGangotri

ಎಂದು ಶ್ಲೋಕದಲ್ಲಿ ಬರುವಂತೆ 'ಹಿಂದಿನ ಜನ್ಮದಲ್ಲಿ ನಾನು ಮಾಡಿದ ಪುಣ್ಯದ ಫಲವಾಗಿ ನಾನು ಬುದ್ಧಿವಂತನಾಗಿದ್ದೇನೆ ಹೊರತು ಈಗ ಯಾರಿಂದಲಾದರೂ ಕಲಿತುಕೊಂಡೇ ನಾನು ಬುದ್ಧಿವಂತನಾಗಬೇಕಾಗಿಲ್ಲ ಎಂದು ಹೇಳುತ್ತಾರೆ. ನಾವು ಹೀಗೆ ನಡೆದುಕೊಳ್ಳಬಾರದು.

ಒಂದು ಸ್ವಾರಸ್ಯವಾದ ವಿಷಯವೇನೆಂದರೆ ಕೆಲವರು ಸಂನ್ಯಾಸಿಗಳು ತಮ್ಮ ಗುರುಗಳು ಯಾರೆಂದು ಹೇಳುವುದಿಲ್ಲ. ಏಕೆಂದರೆ ಅವರಿಗೆ ಗುರು ಇರಲೇ ಇಲ್ಲ. ಓದು - ಬರೆದುಕೊಂಡ ಕೆಲವರಿಗೆ, ಅವರಿಗೆ ಸಂನ್ಯಾಸ ಕೊಟ್ಟ ಗುರು ಅಷ್ಟು ಓದಿಕೊಂಡವರು ಆಗದೇ ಇದ್ದರೆ ಅವರ ಹೆಸರನ್ನು ಹೇಳಿದರೆ ಗೌರವ ಕಡಿಮೆಯಾಗುತ್ತದೆಂಬ ಭಾವನೆ ಇದೆ. ಆದ್ದರಿಂದ, ಯಾರೋ ಒಬ್ಬ ಪ್ರಸಿದ್ಧ ವ್ಯಕ್ತಿ ಸತ್ತು ಹೋಗಿದ್ದರೆ ಅವರೇ ತಮ್ಮ ಗುರು ಎಂದು ಹೇಳಿಕೊಳ್ಳುತ್ತಾರೆ. ಇದನ್ನೇ ನೀಲಕಂಠ ದೀಕ್ಷಿತರು ಒಂದು ಕಡೆ 'ಪ್ರಸಿದ್ಧಶ್ಚ ಮೃತೋ ಗುರುಃ' ಎಂದು ಹೇಳಿದರು. ಏತಕ್ಕೆ ಸತ್ತುಹೋದ ಒಬ್ಬರನ್ನು ಗುರುವೆಂದು ಹೇಳಬಹುದೆಂದರೆ, ಅವರು ಮತ್ತೆ ಬಂದು ತಿರಸ್ಕರಿಸಲಾಗುವುದಿಲ್ಲ. ಆದ್ದರಿಂದ ಹೀಗೆ ಹೇಳಬಹುದುದೆನ್ನುತ್ತಾರೆ.

ನಾವು ಹೀಗಲ್ಲದೆ ನಮ್ಮ ಆಚಾರ ಪರಂಪರೆಯಂತೆ ನಿಯಮವಾಗಿ ಬಾಳನ್ನು ನಡೆಸುವುದೇ ಶ್ರೇಷ್ಠವಾದುದು. ಮಗು ಆಗಬೇಕೆಂದು ತಪಸ್ಸು ಮಾಡಿ ಮಗನನ್ನು ಪಡೆದ ತಂದೆ – ತಾಯಿಯರು ಎಷ್ಟೋ ಮಂದಿ ಇದ್ದಾರೆ. ತಾನು ಊಟ ಮಾಡದೆ ಇದ್ದರೂ ಮಗನಿಗೆ ತಿನ್ನಿಸಿ ಬೆಳಸಿ ಅವನನ್ನು ದೊಡ್ಡವನನ್ನಾಗಿ ಮಾಡಿ ಸಂತೋಷ ಪಡುವವರೂ ಇದ್ದಾರೆ.

ಕೆಲವರು, 'ತಾಯಿ -- ತಂದೆ ಕೆಟ್ಟವರಾಗಿದ್ದರೆ ಏನು ಮಾಡುವುದು ಎನ್ನುತ್ತಾರೆ. ಯಾರು ಮಾಡುವುದು ಸರಿ, ಯಾರು ಮಾಡುವುದು ತಪ್ಪು ಎಂದು ನಾವು ತೀರ್ಮಾನ ಮಾಡಲಾಗುವುದಿಲ್ಲ. ಯಾವುದು ಹೇಗಿದ್ದರೂ ಅವರನ್ನು ಕಾಪಾಡಿದರೆ ಪಾಪವೇನೂ ಇಲ್ಲ. ಆದ್ದರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಪಾಡುವುದು ಕರ್ತವ್ಯ. ಇದಕ್ಕೆ ವಿರೋಧವಾಗಿ ನಾವು ನಡೆದು ಕೊಂಡು ಅಧರ್ಮವನ್ನೇ ಮಾಡುತ್ತಾ ಬಂದರೆ 'ವೃಜನೋತ್ತಿ ಜನ್ಮನೋ ಜನ್ಮ' ಎಂದು ಹೇಳಿದಂತೆ ಒಂದು ಜನ್ಮದಿಂದ ಮತ್ತೊಂದು ಜನ್ಮ ವನ್ನು ಪಡೆಯುತ್ತಾ ಹೋಗಬೇಕಾದುದೇ. ಯಾವಾಗಲಾದರೂ ಒಮ್ಮೆ ಮನುಷ್ಯ ಜನ್ಮ ದೊರೆಯಬಹುದು. 'ದುರ್ಲಭಂ ಮಾನುಷ್ಯಂ ದೇಹಮ್' ಎಂದು ಹೇಳಿದಂತೆ ಮನುಷ್ಯ ಜನ್ಮವೆನ್ನುವುದು ದುರ್ಲಭವಾದುದು ಈ ಮನುಷ್ಯ ಜನ್ಮದಲ್ಲಿಯೂ ನಾವು ಒಳ್ಳೆಯ ವಿಧವಾಗಿ ನಡೆದುವ ಕೊಳ್ಳಲಿಲ್ಲವೆಂದರೆ ಮತ್ತೆ ಆಡಾಗಿಯೋ, ಆಕಳಾಗಿಯೋ ಜನ್ಮವನ್ನು ಪಡೆಯಬೇಕಾದುದೇ. ಆಡಾಗಿಯೋ, ಆಕಳಾಗಿಯೋ ಹುಟ್ಟಿದರೆ ಯಾರಾ ದರೂ ಹೊಡೆದರೆ ಆ ಕಡೆಯಿಂದ ಈ ಕಡೆಗೆ ಹೋಗಬಹುದು. ಕೊನೆ ಯಲ್ಲಿ ಯಾರಾದರೂ ಬಲಿ ಕೊಡುವುದಕ್ಕೆ ಕರೆದೊಯ್ದರೆ ಕತ್ತನ್ನು ಕೊಡಬೇಕಾಗುವುದು. ಸರಿ ಕಥೆ ಮುಗಿಯಿತು. ಆದರೆ, ಮನುಷ್ಯನಾಗಿ ಹುಟ್ಟಿದವನು, ತನ್ನ ನಿಜವಾದ ಸ್ವರೂಪವನ್ನು ಅರಿತವನಾಗಿ ಕೃತಾರ್ಥ ನಾಗಬಹುದು. ಆದ್ದರಿಂದ ನಮಗೆ ಮತ್ತೆ ಜನ್ಮ ಬರದೆ ಇರಲು ಏನೆಲ್ಲ ಪ್ರಯತ್ನಗಳು ಮಾಡಬೇಕೋ ಅವುಗಳೆಲ್ಲವನ್ನು ಈ ಜನ್ಮದಲ್ಲಿಯೇ ಕೈ ಕೊಳ್ಳಬೇಕು.

ನೀರಿನ ಸುಳಿಯಲ್ಲಿ ಮತ್ತೆ ಮತ್ತೆ ಸಿಕ್ಕಿಕೊಂಡು ಒದ್ದಾಡುತ್ತಿರುವ ಹುಳುವನ್ನು ಕರುಣೆಯಿಂದ ಪಾರು ಮಾಡಿದ ಒಬ್ಬರು, ಅದನ್ನು ನೀರಿ ನಿಂದ ಹೊರಗೆ ತಂದಮೇಲೆ ಅದರ ಕಷ್ಟಗಳು ದೂರವಾಗುತ್ತವೆ ಎನ್ನುವುದನ್ನು ಸ್ಪಷ್ಟಪಡಿಸುವುದಕ್ಕಾಗಿಯೇ,

'ಪ್ರಾಪ್ಯ ತೀರತರುಚ್ಛಾಯಾಂ ವಿಶ್ರಾಮ್ಯನ್ತಿ ಯಥಾ ಸುಖಮ್' ಎನ್ನುತ್ತಾರೆ. ಇದೇ ರೀತಿ ಮತ್ತೆ -- ಮತ್ತೆ ಜನ್ಮ ಸಮುದ್ರದಲ್ಲಿ ಸಿಕ್ಕಿ ಕೊಂಡು ದುಃಖ ಪಡುವ ಮನುಷ್ಯರಿಗೆ ಅದರಿಂದ ದೂರಾಗುವ ಮಾರ್ಗ ವೇನೆಂದರೆ, ಆಚಾರ್ಯರ ಹತ್ತಿರ ಹೋಗಿ, ತಮ್ಮ ನಿಜವಾದ ಸ್ವರೂಪ ವನ್ನು ಅರಿಯುವುದು. ಅದಕ್ಕಾಗಿ ಶಿಷ್ಯನಾದವನು ವೇದಾಂತ ಶ್ರವಣ ದಂಥವುಗಳನ್ನು ಮಾಡುವುದೇ ಮುಖ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಪಂಚಕೋಷವಿವೇಕಿನ ಲಭನ್ತೇ ನಿರ್ವೃತಿಂ ಪರಮ್'

ಎಂದು ಹೇಳಿರುವುದರಿಂದ 'ಪಂಚಕೋಶ ವಿವೇಕ' ಕ್ಕೆ ಕೊಟ್ಟಿರುವ ಮುಖ್ಯತ್ವ ವನ್ನು ತಿಳಿಯಬಹುದು. (ಜೀವನು ಬ್ರಹ್ಮವಲ್ಲದೇ ಬೇರೆಯಲ್ಲ ಎನ್ನುವು ದನ್ನು ತಿಳಿಯಲು ಬ್ರಹ್ಮವನ್ನು ಜೀವನನ್ನಾಗಿ ತೋರಿಸಲು ಐದು ಕೋಶ ಗಳ ಸ್ವರೂಪವನ್ನು ತಿಳಿದುಕೊಂಡು ಅವುಗಳಿಂದ ಆತ್ಮನನ್ನು ಬೇರ್ಪಡಿಸಿ ತಿಳಿಯುವುದು 'ಪಂಚಕೋಶವಿವೇಕ' ವನ್ನು ಸೂಚಿಸುತ್ತದೆ.) ಪ್ರಪಂಚ ದಲ್ಲೇ ಮುಳುಗಿ, ಬಾಹ್ಯವಸ್ತುಗಳ ಚಿಂತನೆಯಲ್ಲಿಯೇ ಇರುವವನಿಗೆ 'ಪಂಚ ಕೋಶ ವಿವೇಕ ಉಂಟಾಗುವುದು ಅಷ್ಟು ಸುಲಭವಲ್ಲ. ಆದ್ದರಿಂದಲೆ ಅಂಥವರು ತಮ್ಮ ತಮ್ಮ ಕರ್ಮಗಳನ್ನು ಸರಿಯಾಗಿ ಮಾಡಬೇಕೆಂದು ಹೇಳಿದೆ.

ಈಶಾವಾಸ್ಯೋಪನಿಷತ್ತು,

" ಕುರ್ವನ್ನೇನೇಹ ಕರ್ಮಾಣಿ ಜಿಜೀವಿಶೇಚ್ಛತಂ ಸಮಾಃ । "

ಎನ್ನುತ್ತದೆ. ಪ್ರಪಂಚದಲ್ಲಿ ಬಾಳಬೇಕು ಎನ್ನುವುದನ್ನೆಲ್ಲಾ ಆಸೆಯಾಗಿಟ್ಟು ಕೊಂಡು ಕರ್ಮವನ್ನು ಸರಿಯಾಗಿ ಮಾಡುವುದಕ್ಕಿಂತಲೂ ಬೇರೆ ದಾರಿ ಇಲ್ಲ ಇದಕ್ಕೆ ವಿರೋಧವಾಗಿ ಯಾರಿಗೆ ಪ್ರಪಂಚ ವಿಷಯಗಳಲ್ಲಿ ಆಸಕ್ತಿ ಇಲ್ಲವೊ ಅಂಥವನು ವೇದಾಂತಕ್ಕೆ ಅಧಿಕಾರಿಯಾಗುತ್ತಾನೆ.

ಇನ್ನು ಕರ್ಮದ ಬಗೆಗಳನ್ನು ನೋಡೋಣ, ಕರ್ಮವನ್ನು ಮೂರು ವಿಧವಾಗಿ ವಿಂಗಡಿಸಬಹುದು, 1) ಇಷ್ಟ, 2) ಪೂರ್ತ, 3) ದತ್ತ.

ಅಗ್ನಿಹೋತ್ರಂ ತಪಃ ಸತ್ಯಂ ವೇದಾನಾಂಚಾನುಪಾಲನಮ್ ।
ಆತಿಥ್ಯಂ ವೈಶ್ವದೇವಂ ಚ ಇಷ್ಟಮಿತ್ಯಭಿಧೀಯತೇ ॥

ಮೊದಲು ಶ್ಲೋಕದಲ್ಲಿ ಹೇಳಲ್ಪಟ್ಟ 'ಇಷ್ಟ' ವೆನ್ನುವುದನ್ನು ನೋಡೋಣ, ಮೊದಲು ಅಗ್ನಿಹೋತ್ರವೆನ್ನುವುದು ಹೇಳಲಾಗಿದೆ, ಅಗ್ನಿ ಹೋತ್ರವನ್ನು ಯೋಗ್ಯತೆ ಇರುವವರು ನಿತ್ಯವೂ ಅನುಷ್ಠಾನ ಮಾಡಬೇ ಕೆಂದು ವೇದದಲ್ಲಿ ಹೇಳಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ತಪಃ' ಏಕಾದಶಿಯೆಂದು ಉಪವಾಸವಿರುತ್ತೇವೆ. ಅದೊಂದು ತಪಸ್ಸಾಗುತ್ತದೆ. ಹಲವು ವ್ರತಗಳನ್ನು ಮಾಡುತ್ತೇವೆ. ಅವುಗಳೂ ತಪಸ್ಸೇ. ಬ್ರಹ್ಮಯಜ್ಞ ಒಂದು ತಪಸ್ಸು.

'ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಮ್'

ವೇದಾಧ್ಯಯನ ಮಾಡುವುದೂ, ಅದನ್ನು ಮಾಡಿಸುವುದೂ ಬಿಡಬಾರದು.

'ತದ್ಧಿ ತಪಃ ತದ್ಧಿ ತಪಃ'

(ಅದೇ ತಪಸ್ಸು, ಅದೇ ತಪಸ್ಸು) ಎಂದು ಹೇಳಿರುವುದನ್ನು ನಾವು ನೋಡಬಹುದು.

ಅನಂತರ 'ಸತ್ಯ' ಎನ್ನುವುದು ಹೇಳಲ್ಪಟ್ಟಿದೆ. ಸತ್ಯ ಹೇಳು ವುದು ಎನ್ನುವುದೇ ದೊಡ್ಡ ತಪಸ್ಸು. ಒಂದು ವಿಷಯವನ್ನು ನಾವು ಯಾವ ರೀತಿಯಲ್ಲಿ ತಿಳಿದುಕೊಂಡಿದ್ದೇವೋ ಅದೇ ರೀತಿಯಲ್ಲಿ ಹೊರಗೆ ಹೇಳುವುದಕ್ಕೆ 'ಸತ್ಯ' ವೆಂದು ಹೆಸರು. ಬೇರೆ ರೀತಿಯಲ್ಲಿ ಮಾತನಾಡಿ ದರೆ ಅದು ಸುಳ್ಳು ಆಗುತ್ತದೆ. ನಾವು ಸತ್ಯವನ್ನು ಹೇಳುವಾಗಲೂ ಜಾಗ್ರತೆಯಾಗಿರಬೇಕು. ನಾವು ಸತ್ಯವನ್ನು ನುಡಿದು ಅದರಿಂದ ಯಾರಿ ಗಾದರೂ ಅಪಕಾರ ಮಾಡುತ್ತೇವೆಂದರೆ

'ಸತ್ಯಾನ್ ಮೌನಂ ವಿಶಿಷ್ಯತೇ'

ಎಂದು ಹೇಳುವುದರಿಂದ ಆ ಸಮಯದಲ್ಲಿ ಸತ್ಯಕ್ಕಿಂತಲೂ ಮೌನವನ್ನಾ ಚರಿಸುವುದೇ ಮೇಲು. ಅದಕ್ಕಾಗಿ ಆಗ ನಾವು ಸುಳ್ಳು ಹೇಳಬೇಕಾಗಿಲ್ಲ. ಮೌನವಾಗಿದ್ದರೇ ಸಾಕು. ಆದ್ದರಿಂದಲೇ —

'ಸತ್ಯಂಬ್ರೂಯಾತ್ ಪ್ರಿಯಂ ಬ್ರೂಯಾನ್ನಬ್ರೂಯಾತ್
ಸತ್ಯಮಪ್ರಿಯಮ್ ।
ಪ್ರಿಯಂ ಚ ನಾನೃತಂ ಬ್ರೂಯಾದೇಷ ಧರ್ಮಃ ಸನಾತನಃ ॥'

(ಸತ್ಯವನ್ನು ಹೇಳು. ಪ್ರಿಯವನ್ನು ಹೇಳು. ಪ್ರಿಯವಲ್ಲದ ಸತ್ಯ ವನ್ನು ಹೇಳಬೇಡ. ಪ್ರಿಯವಾದ ಅಸತ್ಯವನ್ನೂ ಹೇಳಬೇಡ. ಇದೇ ಸನಾತನ ಧರ್ಮ.) ಎಂದು ಹೇಗೆ ಸತ್ಯವನ್ನು ಹೇಳಬೇಕೆನ್ನುವುದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಕ್ಷಣಗಳನ್ನು ನಮ್ಮ ಹಿಂದಿನವರು ಹೇಳಿದ್ದಾರೆ.

ಅದಾದ ಮೇಲೆ, 'ವೇದಾನಾಂಚ ಅನುಪಾಲನವ್' — ವೇದವೆನ್ನುವುದು ನಮ್ಮನ್ನು ತಾಯಿಯಂತೆ ಕಾಪಾಡುವುದು. ಆ ವೇದವನ್ನೇ ನಾವು ಇಲ್ಲವೆಂದು ಹೇಳಿದರೆ ಮೂಲವಿಲ್ಲದೆ ಹೇಗೆ ಎಲೆಯೋ, ಕೊಂಬೆಯೋ ಇರಲು ಸಾಧ್ಯವಿಲ್ಲವೋ, ಹಾಗೆಯೇ ಧರ್ಮವೆನ್ನುವುದೇ ಇಲ್ಲದೇ ಆಗುತ್ತದೆ.

'ಆತಿಥ್ಯಂ ವೈಶ್ವದೇವಂ ಚ'

ನಮ್ಮ ಹತ್ತಿರ ಯಾರು ಬಂದರೂ ಕೂಡ, ಒಡನೆ ಅವರಿಗೆ 'ಇಲ್ಲ' ಎಂದು ಹೇಳಿ ಕಳುಹಿಸಬಾರದು. 'ಪತ್ರಂ ಪುಷ್ಪಂ ಫಲಂ ತೋಯಂ' ಎಂದು ಗೀತೆಯಲ್ಲಿ ಭಗವಂತನು ಹೇಳಿದಂತೆ ನಮ್ಮ ಹತ್ತಿರ ಇರುವುದನ್ನು ಬಂದವರಿಗೆ ಕೊಡಬೇಕು. ಅನಂತರ 'ವೈಶ್ವದೇವ' ಎಂದು ಹೇಳಲ್ಪಟ್ಟಿದೆ.

ಪ್ರಪಂಚದಲ್ಲಿ ಬಾಳಲು ಮನುಷ್ಯರಿಗೆ ಮಾತ್ರವಲ್ಲದೆ ಎಷ್ಟೋ ಜೀವರಾಶಿಗಳಿಗೆ ಕೂಡ ಭಗವಂತನು ಅವಕಾಶ ಕೊಟ್ಟಿದ್ದಾನೆ. ಆದ್ದರಿಂದ ಅವುಗಳು ಕೂಡ ಬಾಳಬೇಕಾಗಿರುವುದರಿಂದ ಪಶುಗಳಿಗೆ ಕೂಡ ನಾವು ತಿನ್ನುವುದರಲ್ಲಿ ಸ್ವಲ್ಪವಾದರೂ ಕೊಡಬೇಕು. 'ವೈಶ್ವದೇವ' ಮಾಡುವವರು ಕೊನೆಯಲ್ಲಿ 'ಕಾಕಬಲಿ' ಕೊಡುತ್ತಾರೆ. ಹಸುಗಳಿಗೂ ಅವರು ಕೊಡುತ್ತಾರೆ: ಅನಂತರ ಯಾರಾದರೂ ಬಂದಿದ್ದಾರೆಯೋ ಎಂದು ನೋಡುತ್ತಾರೆ. ಅವರಿಗೂ ಆಹಾರ ಕೊಡುತ್ತಾರೆ.

ಮೇಲೆ ಹೇಳಿದ ಎಲ್ಲವೂ 'ಇಷ್ಟ'ವೆನ್ನುವ ವಿಭಾಗದಲ್ಲಿ ಸೇರುತ್ತವೆ.

ವಾಪೀ ಕೂಪತಟಾಕಾದಿ ದೇವತಾಯತನಾನಿ ಚ ।
ಅನ್ನಪ್ರದಾನಮಾರಾಮಃ ಪೂರ್ತಮಿತ್ಯಭಿಧೀಯತೇ ॥

ಮೇಲೆ ಹೇಳಿದ ಶ್ಲೋಕದಲ್ಲಿ 'ಪೂರ್ತ' ವೆನ್ನುವುದು ತಿಳಿಸಲಾಗಿದೆ. ದೊಡ್ಡ ಭಾವಿ ತೋಡಿಸುವುದು, ದೇವರಿಗೆ ದೇವಾಲಯ ನಿರ್ಮಾಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿಸುವುದು, ಅನ್ನದಾನ ಮಾಡುವುದು, ಛತ್ರಗಳನ್ನು ಏರ್ಪಡಿಸುವುದು ಇವುಗಳೆಲ್ಲ ಪೂರ್ತವೆನ್ನುವ ವಿಭಾಗದಲ್ಲಿ ಬರುತ್ತವೆ.

ನಾವು ಇವುಗಳನ್ನೆಲ್ಲ ಒಪ್ಪುತ್ತೇವೆ. ಆದರೆ, ಮೊದಲು 'ಇಷ್ಟ' ಎನ್ನುವ ವಿಭಾಗದಲ್ಲಿ ಹೇಳಿದವುಗಳನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತೇವೆ. ಎರಡನ್ನೂ ಹೇಳಿದವರು ಒಬ್ಬರೇ. ಆದ್ದರಿಂದಲೇ ನಾವು ಇವುಗಳನ್ನು ಕುರಿತು ವಿವೇಚನೆ ಮಾಡಿ ಒಂದು ನಿರ್ಣಯಕ್ಕೆ ಬರಬೇಕು. ವಿವೇಚನೆ ಮಾಡುವುದಕ್ಕೆ ಒಂದು ಮೂಲವೆನ್ನುವುದು ಬೇಕು. ಕಾನೂನು ಪುಸ್ತಕವನ್ನು ಇಟ್ಟುಕೊಂಡು ಕದಿಯುವುದು ಸರಿಯೋ ತಪ್ಪೋ ಎಂದು ತೀರ್ಮಾನಿಸಬಹುದು. ಕಾನೂನು ಪುಸ್ತಕವೇ ಇಲ್ಲದೆ, ಕದಿಯುವುದು ಸರಿಯೋ ಎಂದು ಯಾರಾದರೂ ಕೇಳಿದರೆ, ಒಬ್ಬನು ಅದನ್ನು 'ಸರಿ' ಎಂದು ಒಪ್ಪುತ್ತಾನೆ. ಮತ್ತೊಬ್ಬನು ಅದನ್ನು 'ತಪ್ಪು' ಎನ್ನುತ್ತಾನೆ. ಆದ್ದರಿಂದ ಮೂಲವಿಲ್ಲದೆ ನಾವು ವಿವೇಚನೆ ಮಾಡಬಾರದು. ಶ್ಲೋಕಗಳನ್ನು ಬರೆದವರು ಮೂಲವನ್ನು ಇಟ್ಟುಕೊಂಡೇ ಹೇಳಿದ್ದಾರೆ.

ಅನಂತರ 'ದತ್ತ' ವೆನ್ನುವ ವಿಭಾಗವನ್ನು ಕುರಿತು ಹೇಳಿದ್ದಾರೆ.

ಶರಣಾಗತ ಸಂತರಣಂ ಭೂತಾನಾಂ ಚಾಪ್ಯಹಿಂಸನಮ್ ।
ಬರ್ಹಿರ್ವೇದಿ ಚ ಯದ್ದಾನಂ ದತ್ತಮಿತ್ಯಭಿಧೀಯತೇ ॥

(ಶರಣಾಗತನಾದವನನ್ನು ಕಾಪಾಡುವುದು, ಪ್ರಾಣಿಗಳ ವಿಷಯದಲ್ಲಿ ಅಹಿಂಸೆ, ಯಾಗ ಸಂಬಂಧವಿಲ್ಲದೆ ದಾನಕೊಡುವುದು ಇಂಥವು ದತ್ತವೆನ್ನಲ್ಪಡುತ್ತವೆ.) ಶಾಸ್ತ್ರದಲ್ಲಿ ಹೇಳಿದ ಯಾವುದಾದರೂ ಕರ್ಮಗಳನ್ನು ಮಾಡಿದ ಮೇಲೆ ನಾವು ದಕ್ಷಿಣೆ ಕೊಡುತ್ತೇವೆ. ಈ ಕರ್ಮ ಇಷ್ಟವೆನ್ನುವ ವಿಭಾಗದಲ್ಲೇ ಸೇರುತ್ತದೆ. ಒಂದು ಮನೆಯನ್ನು ಕಟ್ಟಿಕೊಡುವುದು, ಹಸುವನ್ನು ದಾನವಾಗಿ ಕೊಡುವುದು ಇವುಗಳೆಲ್ಲ ಶಾಸ್ತ್ರ ರೀತಿಯಾಗಿ ಮಾಡಲ್ಪಡುವ ಕರ್ಮಗಳ ಭಾಗವಾದ್ದರಿಂದ ಇವುಗಳೆಲ್ಲವೂ 'ಇಷ್ಟ' ವೆನ್ನುವ ವಿಭಾಗದಲ್ಲೇ ಸೇರುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲು 'ಶರಣಾಗತ ಸಂತರಣಂ' — ರಾತ್ರಿ ಸಮಯದಲ್ಲಿ ಯಾರಾದರೂ ನಮ್ಮ ಮನೆಗೆ ಬಂದು 'ಸ್ವಾಮಿ, ಇರುವುದಕ್ಕೆ ಜಾಗ ಕೊಡಿ' ಎಂದು ಕೇಳಿದರೆ, 'ನ ಕಂಚನ ವಸತೌ ಪ್ರತ್ಯಾಚಕ್ಷೀತ' (ಯಾವ ಅತಿಥಿಗೂ ಅನಾದರಣೆ ಮಾಡಬಾರದು) ಎಂದು ಹೇಳಿದಂತೆ, ಅವನನ್ನು ಕಳುಹಿಸದೆ ಅವನಿಗೆ ಅಭಯವನ್ನು ನೀಡಬೇಕು.
ಅನಂತರ,

'ಭೂತಾನಾಂ ಚಾಪ್ಯಹಿಂಸನಮ್' — ಅನಾವಶ್ಯಕವಾಗಿ ಪ್ರಾಣಿಗಳಿಗೆ ಕಷ್ಟ ಕೊಡಬಾರದು. ಕೆಲವರು ತಮಾಷೆಗಾಗಿ ಪ್ರಾಣಿಗಳನ್ನು ಹಿಂಸಿಸುತ್ತಾರೆ. ಇದು ತಪ್ಪು. ಹಾಗಾದರೆ ಬೇಟೆಯಾಡುವುದನ್ನು ವಿಧರ್ಮವೆಂದು ಹೇಳಿದ್ದಾರೆಂದು ಕೆಲವರು ಕೇಳಬಹುದು. ಕ್ರೂರ ಮೃಗಗಳು ಬಂದು ಜನರಿಗೆ ಹಿಂಸೆ ಮಾಡಿದಾಗ ಬೇಟೆಯಾಡುವುದು ಧರ್ಮ. ಹಾಗಿಲ್ಲದೆ, ಒಬ್ಬನು ಬೇಕೆಂದೇ ಕಾಡಿಗೆ ಹೋಗಿ ಬೇಟೆಯಾಡುತ್ತಲಿದ್ದರೆ ಅದು ತಪ್ಪಾಗುತ್ತದೆ. ಭಗವಂತನು ಸೃಷ್ಟಿ ಮಾಡಿದ ಪ್ರಾಣಿಗಳು ಕೊಲ್ಲುವುದಕ್ಕಾಗಿಯೇ ?

ಅನಂತರ 'ಬರ್ಹಿರ್ವೇದಿ ಚ ಯದ್ದಾನಂ' — ಈಗ ದಾನವನ್ನು ಕುರಿತು ನೋಡೋಣ. ಶಂಕರಭಗವತ್ಪಾದರು ದಾನವನ್ನು ಕುರಿತು ಹೀಗೆ ಹೇಳುತ್ತಾರೆ. ನಾವು ಒಂದು ಹತ್ತು ರೂಪಾಯಿ ನೋಟನ್ನು ಕೈಯಲ್ಲಿಟ್ಟುಕೊಂಡು ಹೋಗುವಾಗ ಎಲ್ಲೋ ಅದು ಬಿದ್ದುಹೋದರೆ ಹತ್ತು ರೂಪಾಯಿ ಅನ್ಯಾಯವಾಗಿ ಕಾಣದೆ ಹೋಯಿತಲ್ಲಾ ಎಂದು ಅಳುತ್ತೇವೆ. ಆದರೆ ಹತ್ತು ರೂಪಾಯಿ ನೋಟು ತೆಗೆದುಕೊಂಡು ಹೋಗುವಾಗ ನಮ್ಮ ಹತ್ತಿರಕ್ಕೆ ಒಬ್ಬ ಬಡವನು ಬಂದು, 'ಸ್ವಾಮಿ' ನನ್ನ ಹತ್ತಿರ ಹಣ ಇಲ್ಲದ ಕಾರಣ ಪರೀಕ್ಷೆಗೆ ಹೋಗಲಿಲ್ಲ. ಹತ್ತು ರೂಪಾಯಿಗಳಿದ್ದರೆ ನಾನು ಪರೀಕ್ಷೆಗೆ ಹೋಗಿ ಅದರಲ್ಲಿ ತೇರ್ಗಡೆ ಪಡೆಯಬಹುದು' ಎಂದರೆ, ನಾವು ಹತ್ತು ರೂಪಾಯಿ ಕೊಟ್ಟುಬಿಡುತ್ತೇವೆ. ಆದರೆ, ಈ ಘಟನೆಯಿಂದಾಗಿ ಮನೆಗೆ ಬಂದು ಅಳುವುದಿಲ್ಲ. 'ಇಂದು ಒಂದು ಒಳ್ಳೆಯ ಕೆಲಸ ಮಾಡಿದೆವು' ಎನ್ನುವ ಸಂತೋಷದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಇರುತ್ತೇವೆ. ಹಣ ಕಳೆದು ಹೋದಾಗ ವ್ಯಥೆ ಪಡುವ ನಾವು, ಹಣ
ವನ್ನು ಒಂದು ಒಳ್ಳೆಯ ಕೆಲಸಕ್ಕೆ ಖರ್ಚು ಮಾಡಿದಾಗ ಸಂತೋಷ
ಪಡುತ್ತೇವೆ. ಆದ್ದರಿಂದ ನಮ್ಮ ಸಂಪತ್ತೆಲ್ಲ 'ಕೊಟ್ಟುಬಿಟ್ಟೆ' ಎಂದು
ನಾವು ಹೇಳಿಕೊಳ್ಳುವಂತೆ ಖರ್ಚುಮಾಡಬೇಕು. 'ಹಣವನ್ನು ಹಾಳು
ಮಾಡಿದೆ' ಎಂದು ಹೇಳಿಕೊಳ್ಳುವಂತೆ ಇರಬಾರದು. ಆದ್ದರಿಂದ, ಹಾಗೆ
ಮಾಡಲ್ಪಡುವ ದಾನ ಮುಂತಾದವು 'ದತ್ತ' ವೆನ್ನುವ ವಿಭಾಗದಲ್ಲಿ
ಬರುತ್ತವೆ.

ಕರ್ಮಗಳನ್ನು ಬೇರೆ ಮೂರು ವಿಧವಾಗಿಯೂ ವಿಂಗಡಿಸಬಹುದು.
ಅವುಗಳನ್ನು — (1) ನಿತ್ಯ, (2) ನೈಮಿತ್ತಿಕ ಮತ್ತು (3) ಕಾಮ್ಯ
ಎನ್ನುವುವು. ಸರಿಯಾದ ಕಾಲಕ್ಕೆ ಮತ್ತೆ ಮತ್ತೆ ಬರುವ ಕರ್ಮ ನಿತ್ಯ
ಕರ್ಮವೆನ್ನಲ್ಪಡುತ್ತದೆ. ನಿತ್ಯಕರ್ಮವನ್ನು ನಾವು ಮಾಡದೇ ಇದ್ದರೆ
ನಮಗೆ ಪಾಪ ಬರುತ್ತದೆ. ಅನಂತರ ಹೇಳಲ್ಪಟ್ಟಿದ್ದು ನೈಮಿತ್ತಿಕ
ಕರ್ಮ. ನೈಮಿತ್ತಿಕ ಕರ್ಮದ ಕಾಲ ಒಂದು ನಿಶ್ಚಿತವಾದ ನಿಯಮಕ್ಕೆ
ಸೇರಿದುದು. ಉದಾಹರಣೆಗೆ, ಗ್ರಹಣ ಕಾಲದಲ್ಲಿ ಸ್ನಾನಮಾಡಬೇಕೆನ್ನು
ವುದು ಶಾಸ್ತ್ರದಲ್ಲಿ ಹೇಳಲಾದ ನಿಯಮ. ಆದರೆ, ಚಂದ್ರಗ್ರಹಣ ಒಂದೊಂದು
ಪೌರ್ಣಮಿಯಂದೂ ಬರುವುದಿಲ್ಲ. ಅಧಿಕಾರಿಯಾದವರು, ಸೂರ್ಯೋ
ದಯ ಕಾಲದಲ್ಲೂ, ಸೂರ್ಯಾಸ್ತ ಕಾಲದಲ್ಲೂ ಸಂಧ್ಯಾವಂದನೆ ಮಾಡ
ಬೇಕೆಂದು ಹೇಳಿದೆ. ಅಲ್ಲದೆ, ಕೆಲವರಿಗೆ ಅಮಾವಾಸ್ಯೆ ದಿನ ತರ್ಪಣ
ಮಾಡಬೇಕೆಂದು ವಿಧಿಸಲಾಗಿದೆ. ಇವೆಲ್ಲವೂ ನಿತ್ಯಕರ್ಮಗಳು. ಏಕೆಂದರೆ
ಸೂರ್ಯೋದಯ, ಸೂರ್ಯಾಸ್ತ ಪ್ರತಿದಿನವೂ ನಡೆಯುವ ಘಟನೆಗಳೆಂದು
ನಾವು ತಿಳಿದಿದ್ದೇವೆ. ಆದರೆ, ಗ್ರಹಣವೆನ್ನುವುದು ಹೇಗೆಂದರೆ, ನಮ್ಮ
ದೇಶದಲ್ಲಿ ಗ್ರಹಣ ಕಾಣಿಸಿದರೇನೇ ನಾವು ಸ್ನಾನ ಮಾಡಬೇಕು. ಹಾಗಿ
ಲ್ಲದಿದ್ದರೆ ಸ್ನಾನ ಮಾಡಬೇಕಾಗಿಲ್ಲ. ಊರಿನಲ್ಲಿ ಎಷ್ಟೋ ಜನ ದುಃಖ
ದಿಂದ ಕೂಡಿದ್ದರೂ ನಾವು ಯಾರಾನ್ನಾದರೂ ಒಬ್ಬರನ್ನು ಎದುರಿಗೆ
ನೋಡಿದರೆ ಅವರಿಗೆ ಮಾತ್ರ ಸಹಾಯ ಮಾಡಬೇಕೆನಿಸುತ್ತದೆ. ಎಷ್ಟೋ
ಜನ ದುಃಖ ಪಡುವಾಗ ಅವರಿಗೆ ಮಾತ್ರ ಏಕೆ ಸಹಾಯ ಮಾಡಬೇಕೆಂದು
ಯಾರಾದರೂ ಕೇಳಿದರೆ ಅದು ಮೂಢತನವೆನಿಸುತ್ತದೆ. ಅದೇ ರೀತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗ್ರಹಣ ನಮಗೆ ಗೋಚರವಾದರೆ ಮಾತ್ರ ಸ್ನಾನ ಮಾಡುತ್ತೇವೆ. ಇದು ನೈಮಿತ್ತಿಕ ಕರ್ಮಕ್ಕೆ ಸೇರುತ್ತದೆ.

ಅನಂತರ ಕಾಮ್ಯಕರ್ಮ. ಯಾವ ಕರ್ಮವನ್ನು ಒಬ್ಬನು ಆಸೆಯಿಂದ ಮಾಡುತ್ತಾನೋ ಅದು ಕಾಮ್ಯಕರ್ಮ. ಮಕ್ಕಳಿಲ್ಲ ಎನ್ನುವುದಕ್ಕಾಗಿಯಾಗಲಿ, ಆಯಸ್ಸು ಹೆಚ್ಚಾಗಬೇಕು ಎನ್ನುವುದಕ್ಕಾಗಲಿ ಕರ್ಮಗಳನ್ನು ಮಾಡಿದರೆ ಅವುಗಳು ಕಾಮ್ಯಕರ್ಮಗಳೆನ್ನಲ್ಪಡುತ್ತವೆ. ನಿತ್ಯ, ನೈಮಿತ್ತಿಕ ಕರ್ಮಗಳನ್ನು ಮಾಡಿದರೆ ಮನಸ್ಸು ಶುದ್ಧಿಯಾಗುತ್ತದೆ. ಕಾಮ್ಯ ಕರ್ಮ ಮಾಡಿದರೆ, ಆ ಕಾಮ್ಯವನ್ನು ಅನುಭವಿಸಲು ಈ ಜನ್ಮದಲ್ಲಿ ಸಾಧ್ಯವಾಗದೇ ಇದ್ದರೆ,

'ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ'
(ಭೋಗವನ್ನು ಕೊಡದೆ ಕರ್ಮ ನೂರು ಕೋಟಿ ಕಲ್ಪಗಳಿಗೂ ನಾಶ ಹೊಂದುವುದಿಲ್ಲ.) ಎಂದು ಹೇಳಿದಂತೆ ಅದು ಮುಂದಿನ ಜನ್ಮಕ್ಕೆ ಕಾರಣವಾಗುತ್ತದೆ. ಆದ್ದರಿಂದ ಹೀಗೆ ಒಂದು ಜನ್ಮದಿಂದ ಮತ್ತೊಂದು ಜನ್ಮ ಎಂದು ಇದು ಹಿಂಬಾಲಿಸುತ್ತಿರುತ್ತದೆ. ಇದು ನಮಗೆ ಒಂದು ಪ್ರಶ್ನೆಯಾಗಿ ಉಳಿಯುತ್ತದೆ. ಮನುಷ್ಯನು ಒಳ್ಳೆಯದಾಗಲಿ ಕೆಟ್ಟದಾಗಲಿ ಯಾವುದಾದರೂ ಒಂದು ಕರ್ಮವನ್ನು ಮಾಡುತ್ತಲೇ ಇದ್ದಾನೆ. ಕರ್ಮವನ್ನು ಮಾಡುತ್ತಲೇ ಇದ್ದರೆ ಜನ್ಮದಿಂದ ಜನ್ಮ ಮತ್ತೆ ಮತ್ತೆ ಪಡೆಯುವುದನ್ನು ತಡೆಯಲಾಗುವುದಿಲ್ಲ. ಆದಕ್ಕಾಗಿ, ಕರ್ಮ ಮಾಡದೆ ಇರಲೂ ಸಾಧ್ಯವಿಲ್ಲ. ಆದ್ದರಿಂದ ಜನ್ಮಸಮುದ್ರದಲ್ಲಿ ಮತ್ತೆ ಸಿಕ್ಕಿಕೊಳ್ಳದೆ ಇರುವುದಕ್ಕೆ ಯಾವುದು ದಾರಿ ಎನ್ನುವುದು ನಮಗೆಲ್ಲ ಪ್ರಶ್ನೆಯಾಗಿದೆ.

ಇದಕ್ಕೆ ಉತ್ತರ ಹೇಳುತ್ತಿರುವಂತೆ ಭಗವಂತನು ಗೀತೆಯಲ್ಲಿ —

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥

(ಎಲೈ ಧನಂಜಯನೇ! ಹಠವನ್ನು ಬಿಟ್ಟು, ಜಯಾಪಜಯಗಳಲ್ಲಿ ಸಮಭಾವನೆಯುಳ್ಳವನಾಗಿ ಯೋಗನಿರತ ಕರ್ಮಗಳನ್ನು ಮಾಡುತ್ತಾ ಬಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮ ಭಾವದಿಂದಿರುವುದು ಯೋಗ್ಯವೆನ್ನಲ್ಪಡುತ್ತದೆ.) ಎಂದಿದ್ದಾನೆ. ಕರ್ಮ ವೆನ್ನುವುದು ಬಂಧಕ, ಮೋಚಕ ಎಂದು ಎರಡು ವಿಧ. ಬಂಧಕವೆನ್ನುವುದು ಯಾವ ಕರ್ಮ ನಮ್ಮ ಮುಂದಿನ ಜನ್ಮಕ್ಕೆ ಕಾರಣವಾಗಿರುವುದೋ, ಅದಾಗುತ್ತದೆ. ಭಗವಂತನು 'ಯೋಗಃ ಕರ್ಮಸು ಕೌಶಲಂ' ಎನ್ನುತ್ತಾನೆ. ನಾವು 'ಯೋಗದಲ್ಲಿ' ಇದ್ದು ಕರ್ಮಗಳನ್ನು ಮಾಡಬೇಕೆಂದು ಅವನು ಹೇಳಿದುದು. ಯೋಗದಲ್ಲಿದ್ದು ಕರ್ಮಗಳನ್ನು ಮಾಡಬೇಕಾದರೆ ಯೋಗದಂಡವನ್ನು ಹಿಡಿದುಕೊಳ್ಳಬೇಕೆಂದೋ, ಕಾಷಾಯ ವಸ್ತ್ರವನ್ನು ಹಾಕಿಕೊಳ್ಳಬೇಕೆಂದೋ ಅರ್ಥವಲ್ಲ.

'ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ'

ಎಂದು ಭಗವಂತನು ಹೇಳಿದುದು.

ನಾವು ಯಾವ ಕರ್ಮವನ್ನು ಮಾಡಿದರೂ ಅದು ಭಗವದರ್ಪಣೆ ಎಂದು ಭಾವಿಸಿ ಮಾಡಬೇಕು. ಉದಾಹರಣೆಗೆ, ನಾವು ಮಾಡುವ ಸಂಧ್ಯಾವಂದನೆ ಯಾವುದಕ್ಕೆಂದರೆ, ಆದು ಭಗವದರ್ಪಣೆಯೇ ಆಗುತ್ತದೆ. ಗೃಹಸ್ಥನು ಮಕ್ಕಳನ್ನು ಕಾಪಾಡುವಾಗ, 'ಮಕ್ಕಳ ಮೇಲೆ ನನಗೆ ಬಹಳ ಪ್ರೀತಿ, ಆದ್ದರಿಂದ ಕಾಪಾಡುತ್ತೇನೆ' ಎನ್ನುವ ಭಾವನೆ ಅವನಿಗೆ ಇರಬಾರದು. ಅದಕ್ಕೆ ಬದಲಾಗಿ 'ಮಕ್ಕಳನ್ನು ದೇವರು ನನಗೆ ಕೊಟ್ಟಿದ್ದಾನೆ. ಅವರನ್ನು ಕಾಪಾಡುವುದು ನನ್ನ ಕರ್ತವ್ಯ. ಇದು ಕೂಡ ಒಂದು ಭಗವದರ್ಚನೆ. ನಾನು ನನ್ನ ಈ ಕರ್ತವ್ಯವನ್ನು ಸರಿಯಾಗಿ ಮಾಡದೆ ಹೋದರೆ ಭಗವಂತನು ಅಪ್ರಸನ್ನನಾಗುತ್ತಾನೆ. ಕಾಪಾಡುವುದನ್ನು ಸರಿಯಾಗಿ ಮಾಡಿದರೇನೇ ಭಗವಂತನು ಪ್ರಸನ್ನನಾಗುತ್ತಾನೆ' ಎನ್ನುವ ಭಾವನೆ ಬರಬೇಕು.

ಭಗವಂತನು ಹೇಳಿದಂತೆ ನಾವು ಮಾಡುವ ಕೆಲಸದಲ್ಲಿ ನಮಗೆ ಫಲ ಸಿಕ್ಕಬೇಕೆನ್ನುವ ಅಪೇಕ್ಷೆಯೇ ಇರಬಾರದು. ಹಾಗೆ ನಾವು ಫಲವನ್ನು ಎದುರು ನೋಡದೆ ಕರ್ಮವನ್ನು ಮಾಡುವುದನ್ನೇ ಭಗವಂತನು 'ಯೋಗಃ' ಎಂದಿದ್ದಾನೆ. ಆದ್ದರಿಂದ ಬಂಧಕವಾಗಿರುವ ಕರ್ಮಗಳನ್ನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೋಚಕವಾಗಿರುವ ಕರ್ಮಗಳಾಗಿ ಬದಲಾಯಿಸಬಹುದು. ನಾವು ಮೋಚಕವಾಗಿರುವ ಕರ್ಮಗಳನ್ನು ಮಾಡಬೇಕೇ ಹೊರತು ಆಸೆಯಿಂದ ಮಾಡಬಾರದು. ಹಾಗಾದರೆ ಕಾಮ್ಯಕರ್ಮಗಳನ್ನು ಕುರಿತು ಶಾಸ್ತ್ರದಲ್ಲಿ ಏಕೆ ಹೇಳಿದೆಯೆಂದು ಕೆಲವರಿಗೆ ಸಂದೇಹ ಉಂಟಾಗಬಹುದು. ಇದಕ್ಕೆ ಉತ್ತರ ಹೀಗೆ ಹೇಳಬಹುದು. ಒಬ್ಬನು ಜ್ಯೋತಿಷ್ಟೋಮ (ಸ್ವರ್ಗವನ್ನು ಪಡೆಯಬೇಕೆಂದು ಆಸೆಯಿಂದ) ಯಾಗವನ್ನು ಮಾಡುತ್ತಾನೆ. ಅನಂತರ ಕೆಲವು ದಿನಗಳು ಶಾಸ್ತ್ರವನ್ನು ಓದಿ ಓದಿ, 'ಈ ಯಾಗವನ್ನೆಲ್ಲ ನಾನು ಭಗವಂತನಿಗೆ ಅರ್ಪಣೆ ಮಾಡಿರಬೇಕು. ಆದ್ದರಿಂದ ಇದೆಲ್ಲ ಭಗವದರ್ಪಣೆಯಾಗಲಿ. ಫಲದಲ್ಲಿ ನನಗೆ ಆಕ್ಷೇಪ ಇಲ್ಲ' ಎನ್ನುವ ತೀರ್ಮಾನಕ್ಕೆ ಬಂದು ಬಿಟ್ಟರೆ 'ಯೋಗಃ ಕರ್ಮಸು ಕೌಶಲಂ' ಎಂದು ಭಗವಂತನು ಹೇಳಿದುದು ಅರ್ಥವಾಗುತ್ತದೆ. ಹೀಗೆ ಮಾಡಿದರೆ ಬಂಧಕವಾದ ಕರ್ಮಗಳನ್ನೂ ಮೋಚಕವಾದ ಕರ್ಮಗಳಾಗಿ ನಾವು ಬದಲಾಯಿಸಿಕೊಳ್ಳಬಹುದು.

ಆದ್ದರಿಂದ ನಾವು ಕೆಟ್ಟ ಕರ್ಮಗಳನ್ನೆಲ್ಲ ಬಿಟ್ಟು ಒಳ್ಳೆಯ ಕರ್ಮಗಳನ್ನೇ ಮಾಡಬೇಕು. ಅವುಗಳನ್ನು ಮಾಡುವ ಕಾಲದಲ್ಲಿಯೂ, 'ಇವುಗಳೆಲ್ಲಾ ನನ್ನ ಕರ್ತವ್ಯ. ಇವುಗಳನ್ನು ಮಾಡುವುದರ ಮೂಲಕ ನಾನು ಭಗವಂತನನ್ನು ಅರ್ಚಿಸುತ್ತೇನೆ' ಎನ್ನುವ ಭಾವನೆಯಿಂದ ಮಾಡುತ್ತಾ ಬಂದರೆ, ಅದೇ ನಮ್ಮ ಅಂತಃಕರಣಕ್ಕೆ ಶಾಂತಿಯನ್ನು ಕೊಡುತ್ತದೆ. ಶಾಂತವಾದ ಅಂತಃಕರಣವಿರುವವನು ವೇದಾಂತ ವಿಚಾರ ಮಾಡಿದರೆ ಅದು ಫಲಿಸುತ್ತದೆ.

ವಿವೇಕ ಚೂಡಾಮಣಿಯಲ್ಲಿ ಶಂಕರರು,

'ಅಧಿಕಾರಿಣಮಾಶಾಸ್ತೇ ಫಲಸಿದ್ಧಿರ್ವಿಶೇಷತಃ ।'

ಎಂದು ಹೇಳಿದಂತೆ ಅಧಿಕಾರ (ಯೋಗ್ಯತೆ) ಎನ್ನುವುದು ಬೇಕು. ಡೆಪ್ಯುಟಿ ಕಮಿಷನರ್ ಕೆಲಸಕ್ಕೆ ಒಬ್ಬನು ಅರ್ಜಿ ಹಾಕಿಕೊಂಡನು. ಆದರೆ ಆ ಕೆಲಸಕ್ಕೆ ಯೋಗ್ಯತೆ ಕೊಡುವ ಪರೀಕ್ಷೆಯನ್ನು ಅವನು ಬರೆಯಲಿಲ್ಲವೆಂದರೆ ಅವನಿಗೆ ಆ ಕೆಲಸ ಹೇಗೆ ದೊರೆಯುತ್ತದೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಗೆಯೇ, ವೇದಾಂತಶಾಸ್ತ್ರ ಓದುವುದಕ್ಕೆ 'ಅಂತಃಕರಣ ಶುದ್ಧಿ' ಆವಶ್ಯಕ. ಅಂತಃಕರಣ ಶುದ್ಧಿ ಎಂದರೆ ಯಾವುದೆಂದು ನೋಡೋಣ. ನಾವು ವಸ್ತುಗಳನ್ನು ನೋಡದೆ ಇರುವಾಗ ಒಂದು ಆಸೆಯೂ ಉಂಟಾಗುವುದಿಲ್ಲ. ಆದರೆ ವಸ್ತುಗಳನ್ನು ನೋಡುತ್ತಲೆ ಆಸೆ ಉಂಟಾಗುತ್ತದೆ ಎಂದರೆ ಅಂಥ ಅಂತಃಕರಣ ವೇದಾಂತ ವಿಚಾರ ಮಾಡುವುದಕ್ಕೆ ಸರಿಯಾಗುವುದಿಲ್ಲ. ಎಲ್ಲಾ ವಸ್ತುಗಳ ವಿಷಯದಲ್ಲೂ,

'ಬ್ರಹ್ಮಾದಿ ಸ್ಥಾವರಾಂತೇಷು ವೈರಾಗ್ಯಂ ವಿಷಯೇಷ್ವನು ।
ಯದ್ವೈವ ಕಾಕವಿಷ್ಠಾಯಾಂ ವೈರಾಗ್ಯಂ ತದ್ಧಿ ನಿರ್ಮಲಮ್ ॥'

(ಬ್ರಹ್ಮದಿಂದ ಹಿಡಿದು ಹುಳುವಿನವರೆಗೆ ಎಲ್ಲಾ ವಸ್ತುಗಳಲ್ಲಿಯೂ ಕಾಗೆಯ ಮಲದ ವಿಷಯದಲ್ಲಿ ಉಂಟಾಗುವಂತೆ ಯಾವುದು ಅರುಚಿ ಇರುವುದೋ ಅದೇ ಶುದ್ಧವಾದ ವೈರಾಗ್ಯವಾಗುವುದು.) ಎಂದು ಹೇಳಿದಂತೆ, ಹೇಗೆ ದಾರಿಯಲ್ಲಿ ಯಾವುದಾದರೂ ಪಕ್ಷಿ ಮಲದಿಂದ ಅಶುದ್ಧಿ ಮಾಡಿದ್ದರೆ ನಾವು ಅದರ ವಿಷಯವಾಗಿ ಉದಾಸೀನವಾಗಿರುವಂತೆ ಬ್ರಹ್ಮನ ಸ್ಥಾನದಿಂದ ಹಿಡಿದು ಸಾಧಾರಣವಾಗಿರುವ ಜನ್ಮದವರೆಗೂ ಎಲ್ಲವೂ ಅನಿತ್ಯವೆಂದು ಒಂದು ನಿರ್ಣಯಕ್ಕೆ ಬರಬೇಕು. ಅನಂತರ,

'ನ ಹ್ಯಧ್ರುವೈಃ ಪ್ರಾಪ್ಯತೇ ಹಿ ಧ್ರುವಂ ಹಿ ತತ್'

ಅನಿತ್ಯವಾದವುಗಳಿಂದ ನಿತ್ಯವಾದವುಗಳನ್ನು ಪಡೆಯಲಾಗುವುದಿಲ್ಲ.) (ಎಂದು ಹೇಳಿದಂತೆ ಅನಿತ್ಯವಾಗಿರುವ ವಸ್ತುಗಳನ್ನು ಇಟ್ಟುಕೊಂಡು ನಿತ್ಯವಾಗಿರುವುದನ್ನು ಹೇಗೆ ಪಡೆಯುವುದು? ಆದ್ದರಿಂದ, 'ನನಗೆ ಅನಿತ್ಯವಾದ ವಸ್ತುಗಳು ಬೇಕಾಗಿಲ್ಲ. ನಾನು ನಿತ್ಯವಾದ ವಸ್ತುವನ್ನು ಸಂಪಾದಿಸುತ್ತೇನೆ' ಎನ್ನುವ ತೀರ್ಮಾನ ಉಂಟಾದಾಗಲೇ ಯಾರಾದರೂ ವೇದಾಂತಕ್ಕೆ ಅಧಿಕಾರಿ; ಆ ಅಧಿಕಾರ ಬರಬೇಕಾದರೆ —

'ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ'

ಎನ್ನುವಂತೆ ನಡೆದುಕೊಳ್ಳಬೇಕು. ಮೊದಲು ನಾವು ಕರ್ಮಾನುಷ್ಠಾನ ಮಾಡುತ್ತಾ ಬರಬೇಕು. ಕೆಲವರಿಗೆ ಕರ್ಮಾನುಷ್ಠಾನ ಮಾಡುವುದರಲ್ಲಿಯೇ ಅರುಚಿ ಇರುತ್ತದೆ. 'ವೇದದಲ್ಲಿ ಹೇಳಿದ ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಜ್ಞ ಮಾಡಿಆಯಿತು. 'ಇನ್ನು ಈ ಯಜ್ಞ ಮಾಡಬೇಕು' ಎನ್ನುವುದರಲ್ಲಿಯೇ ನಾವು ಇದ್ದರೆ ಮೊದಲೇ ಹೇಳಿದಂತೆ ಕಾಮ್ಯಕರ್ಮಗಳು ಚಿತ್ತ ಶುದ್ಧಿಯನ್ನು ಕೊಡುವುದಿಲ್ಲ. ನಾವು ಕರ್ತವ್ಯವೆಂದು, ಕೊನೆಯವರೆಗೆ ಒಂದು ಕರ್ಮವನ್ನು ಮಾಡಿದರೆ, ಅದರ ಫಲವನ್ನು ನಾವು ಅನುಭವಿಸಲೇ ಬೇಕಾಗುವುದು. ಆದ್ದರಿಂದ ನಿಷಿದ್ಧವಾದ ಕರ್ಮಗಳನ್ನು ನಾವು ಬಿಟ್ಟು ವಿಹಿತವಾದ ಕರ್ಮಗಳನ್ನೇ ಮಾಡುತ್ತಾ ಬಂದರೆ ಅಂತಃಕರಣದಲ್ಲಿ ಶಾಂತಿಯುಂಟಾಗುತ್ತದೆ.

ಕೆಲವರು ಜಪ ಮಾಡಬೇಕೆಂದುಕೊಂಡು ಕುಳಿತುಕೊಳ್ಳುತ್ತಾರೆ. ಜಪಮಾಲೆ ಅವರ ಕೈಯಲ್ಲಿ ತಿರುಗುತ್ತದೆ. ಅವರ ನಾಲಿಗೆ ಬಾಯಲ್ಲಿ ತಿರುಗುತ್ತಿರುತ್ತದೆ. ಆದರೆ ಮನಸ್ಸು ಮಾತ್ರ ಹತ್ತು ದಿಕ್ಕುಗಳಲ್ಲಿಯೂ. ತಿರುಗುತ್ತಿರುತ್ತದೆ. ಹೀಗೆ ಜಪ ಮಾಡಿದರೆ ಅದು ಜಪವೇ ಆಗುವುದಿಲ್ಲ ಆದರೂ ಅದು ಸ್ವಲ್ಪವಾದರೂ ಫಲವನ್ನು ಕೊಡುತ್ತದೆ. ಒಂದೇ ತರಗತಿಯಲ್ಲಿದ್ದು ಫೇಲಾಗುವ ವಿದ್ಯಾರ್ಥಿಗೆ ಎರಡು ವರ್ಷ ಅದೇ ತರಗತಿಯಲ್ಲಿ ಓದಿದರೆ ಏನೋ ಸ್ವಲ್ಪವಾದರೂ ಜ್ಞಾನ ಬರುತ್ತದೆ. ಅದಕ್ಕಾಗಿ ಸ್ಕೂಲಿಗೇ ಹೋಗಬೇಡವೆಂದು ಹೇಳಿದರೆ ಅಷ್ಟು ಕೂಡ ಜ್ಞಾನ ಬರುವುದಿಲ್ಲ. ಮನಸ್ಸು ಏಕಾಗ್ರವಾಗಿಲ್ಲ ಎನ್ನುವುದಾಕ್ಕಾಗಿ ಯಾರೂ ಜಪ ಮಾಡುವುದನ್ನು ನಿಲ್ಲಿಸಿಬಿಡಬಾರದು. ಮನಸ್ಸು ಏಕಾಗ್ರವಾದರೆ ಅದು ಬಹಳ ವಿಶೇಷವೇ.

ಆದ್ದರಿಂದ ನಾವು ಕರ್ಮಗಳನ್ನು ಸರಿಯಾಗಿ ಮಾಡಿ, ಈಶ್ವರನ ಕೋಪವನ್ನು ಹೋಗಲಾಡಿಸಿ, ಅವನ ಪ್ರಸಾದವನ್ನು ಪಡೆದು, ಸ್ಥಿರವಾದ ಮನಸ್ಸುಳ್ಳವರಾಗಿದ್ದು ಉಪಾಸನೆ ಮಾಡುತ್ತಾ ಬಂದರೆ ಅದು ಜ್ಞಾನಕ್ಕೆ ಸಾಧನವಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

೬ ಮನುಷ್ಯಜನ್ಮವನ್ನು ವ್ಯರ್ಥಮಾಡಿಕೊಳ್ಳಬೇಡಿ

ಗಂಗಾಪೂರಪ್ರಚಲಿತ ಜಟಾಸ್ರಸ್ತ ಭೋಗೀಂದ್ರಭೀತಾಂ
ಆಲಿಂಗಂತೀಮಚಲತನಯಾಂ ಸಸ್ಮಿತಂ ವೀಕ್ಷಮಾಣಃ ।
ಲೀಲಾಪಾಂಗೈಃ ಪ್ರಣತಜನತಾಂ ನಂದಯಂಶ್ಚಂದ್ರಮೌಲಿಃ
ಮೋಹಧ್ವಾಂತಂ ಹರತು ಪರಮಾನಂದಮೂರ್ತಿಃಶ್ಶಿವೋ ನಃ ॥

ಮನುಷ್ಯನಾಗಿ ಹುಟ್ಟಿದ ಪ್ರತಿಯೊಬ್ಬನಿಗೂ ಶ್ರೇಯಸ್ಸು ಪಡೆಯಬೇಕೆನ್ನುವ ಆಸೆ ತೀವ್ರವಾಗಿರುವುದು ಸಹಜವೇ. ಆ ಶ್ರೇಯಸ್ಸಿನ ಬಗ್ಗೆ ಹಲವರಿಗೆ ಹಲವು ವಿಧವಾದ ಸಂದೇಹಗಳಿವೆ. ಕೆಲವರು ತಾವು ಪ್ರಪಂಚದಲ್ಲಿ ತಿನ್ನುವುದು, ನಿದ್ರಿಸುವುದು, ಸುಖವಾದ ಸೌಕರ್ಯಗಳನ್ನು ಪಡೆಯುವುದನ್ನೇ ಶ್ರೇಯಸ್ಸೆಂದು ಭಾವಿಸುತ್ತಾರೆ, ಇದು ಸರಿಯಲ್ಲ. ನಿತ್ಯವಾದ ಸುಖವೇ ಶ್ರೇಯಸ್ಸು ಎನ್ನಲ್ಪಡುತ್ತದೆ. ಇದಲ್ಲದೆ ಬೇರೆ ಯಾವ ಸುಖವಿದೆಯೋ ಅದಕ್ಕೆ ಪ್ರೇಯಸ್ಸೆಂದು ಹೆಸರು. ಶ್ರೇಯಸ್ಸಿಗೂ ಪ್ರೇಯಸ್ಸಿಗೂ ಇರುವ ವ್ಯತ್ಯಾಸವನ್ನು ತಿಳಿಯದೆ ಸಾಧಾರಣವಾದ ವೈಭವಕ್ಕೆ (ಅನಿತ್ಯವಾದ ಸುಖಕ್ಕೆ) ಶ್ರೇಯಸ್ಸೆಂದು ಹೇಳಿಬಿಡುತ್ತೇವೆ. ಕಠೋಪನಿಷತ್ತಿನಲ್ಲಿ—

ಅನ್ಯಚ್ಛ್ರೇಯೋಽನ್ಯದುತೈವ ಪ್ರೇಯ
ಸ್ತೇ ಉಭೇ ನಾನಾರ್ಥೇ ಪುರುಷಂ ಸಿನೀತಃ ।
ತಯೋಃ ಶ್ರೇಯಃ ಆದದಾನಸ್ಯ ಸಾಧು
ಭವತಿ ಹೀಯತೇಽರ್ಥಾದ್ಯ ಉ ಪ್ರೇಯೋ ವೃಣೀತೇ॥

(ಶ್ರೇಯಸ್ಸೆನ್ನುವುದು ಬೇರೆ, ಅದರಿಂದ ಬೇರೆಯಾದುದು ಪ್ರೇಯಸ್ಸು. ಅವುಗಳು ಬೇರೆ ಬೇರೆ ದಾರಿಯಲ್ಲಿದ್ದು ಮನುಷ್ಯರನ್ನು ತಮ್ಮ ನಿಯಮಗಳಲ್ಲಿ ಇಟ್ಟುಕೊಂಡಿರುತ್ತವೆ. ಈ ಎರಡರಲ್ಲಿ ಶ್ರೇಯಸ್ಸನ್ನು ಆರಿಸಿಕೊಳ್ಳುವವನಿಗೆ ಒಳ್ಳೆಯದಾಗುತ್ತದೆ. (ಆದರೆ) ಪ್ರೇಯಸ್ಸನ್ನು ಆರಿಸಿಕೊಳ್ಳುವವನು ನಿಜವಾದ ಲಕ್ಷ್ಯವನ್ನು ಬಿಟ್ಟುಬಿಡುವನು) ಎಂದು ಹೇಳಲ್ಪಟ್ಟಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರಲ್ಲಿ ಶ್ರೇಯಸ್ಸು ಪ್ರೇಯಸ್ಸು ಎಂದು ಎರಡಿವೆ. ಶ್ರೇಯಸ್ಸನ್ನು ಪಡೆದವನು ಯಾವಾಗಲೂ ಅದರಲ್ಲಿ ಸ್ಥಿರವಾಗಿರುತ್ತಾನೆ. ಅಂದರೆ ಅವನಿಗೆ ನಿತ್ಯವಾದ ಸುಖವುಂಟು. ಆದರೆ ಪ್ರೇಯಸ್ಸನ್ನು, ಅಪೇಕ್ಷಿಸುವವರಿಗೆ ಸುಖ ಇಂದು ಇರುತ್ತದೆ, ನಾಳೆ ಇರುವುದಿಲ್ಲ. ನಾವು ತಾತ್ಕಲಿಕವಾದ ಸುಖವನ್ನು ಬಯಸುವುದಿಲ್ಲ. ಸ್ಥಿರವಾದ ಸುಖವನ್ನು ಬೇಕೆಂದೇ ಬಯಸುತ್ತೇವೆ. ಆದರೆ ಸ್ಥಿರವಾದ ಸುಖವನ್ನು ಪಡೆಯಲು ಸಾಮರ್ಥ್ಯವಿಲ್ಲದ ನಾವು ತಾತ್ಕಾಲಿಕ ಸುಖದಲ್ಲೇ ಸಂತೋಷಪಟ್ಟು ಕೊಂಡವರಾಗಿ ತೃಪ್ತಿ ಪಡೆಯುತ್ತೇವೆ. ಆದ್ದರಿಂದ ಬುದ್ಧಿವಂತನಾದವನು ಶ್ರೇಯಸ್ಸನ್ನೇ ಅಪೇಕ್ಷಿಸಬೇಕು. ಏಕೆ ಹಾಗೆ ಎನ್ನುವುದನ್ನು ನೋಡೋಣ.

ಮನುಷ್ಯಜನ್ಮ ಎನ್ನುವುದು ನಮಗೆ ಈಗ ಹೊಸದಾಗಿ ಬಂದುದಲ್ಲ. ದುರ್ವಾಸ ಮಹರ್ಷಿಗಳು ಶಕ್ತಿಮಹಿಮ್ನ ಸ್ತೋತ್ರದಲ್ಲಿ,

ನಾನಾ ಯೋನಿಸಹಸ್ರಸಂಭವವಶಾತ್ ಜಾತಾ ಜನನ್ಯಃ ಕತಿ
ಪ್ರಖ್ಯಾತಾ ಜನಕಾ: ಕಿಯನ್ತ ಇತಿ ಮೇ ಸೇತ್ಸ್ಯನ್ತಿ ಚಾಗ್ರೇ ಕತಿ!
ಏತೇಷಾಂ ಗಣನೈವ ನಾಸ್ತಿ............

(ಎಷ್ಟೋ ಸಾವಿರಗಟ್ಟಳೆ ಯೋನಿಗಳಲ್ಲಿ ಜನ್ಮವನ್ನು ಪಡೆದುದರಿಂದ ಎಷ್ಟೋ ಮಂದಿ ತಾಯಿಯರು ಆಗಿ ಹೋಗಿದ್ದಾರೆ. ಎಷ್ಟೋ ಮಂದಿ ತಂದೆಯರು ಆಗಿ ಹೋಗಿದ್ದಾರೆ. ನಮ್ಮ ಮುಂದೆ ಎಷ್ಟೋ ಮಂದಿ ಹೋಗುತ್ತಿದ್ದಾರೆ. ಇವುಗಳಿಗೆಲ್ಲ ಗಣನೆಯೇ ಇಲ್ಲ....) ಎಂದು ಹೇಳಿದ್ದಾರೆ.

ಉಪನಿಷತ್ತುಗಳಲ್ಲಿ ಆತ್ಮನು 'ಸತ್ಯಂ ಜ್ಞಾನಂ ಅನನ್ತಂ ಬ್ರಹ್ಮ' ಎಂದು ವಿವರಿಸಲ್ಪಟ್ಟಿದ್ದಾನೆ. ಅಂದರೆ ಆತ್ಮನು ಸತ್ಸ್ವರೂಪಿ, ಜ್ಞಾನ ಸ್ವರೂಪಿ, ಅನಂತಸ್ವರೂಪಿ, ಅವನು ಎಲ್ಲೆ ಇಲ್ಲದಷ್ಟು ಸುಖಸ್ವರೂಪಿ.

'ಯತ್ ಸೌಖ್ಯಾಂಬುಧಿ ಲೇಶಲೇಶತ ಇಮೇ ಚಕ್ರಾತಯೋ
ನಿರ್ವೃತಾಃ।'

ಆ ಪರಮಾನಂದದ ಒಂದು ತುಣುಕನ್ನು ಅನುಭವಿಸಿ ಇಂದ್ರಿಯ ಮುಂತಾದವುಗಳು ತೃಪ್ತಿಗೊಂಡವು. ಇದರಿಂದ ಆನಂದಸಾಗರ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂತಹದೆಂಬುದನ್ನು ನಾವು ತಿಳಿದುಕೊಳ್ಳಬಹುದು. ಈ ಆನಂದಸಾಗರವೆ ಚೈತನ್ಯ. ಈ ಚೈತನ್ಯವೇ ಜೀವರೂಪವನ್ನು ಪಡೆದು ಎಲ್ಲವನ್ನು ನೋಡುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಉದಾಹರಣೆ ನೋಡೋಣ.

ಆಕಾಶ ಎನ್ನುವುದು ಒಂದೇ ವಿಧವಾಗಿಯೇ ಇರುತ್ತದೆ. ಆದರೆ ಕೊಡವನ್ನು ನಾವು ಇಟ್ಟರೆ, 'ಕೊಡದಲ್ಲಿರುವ ಆಕಾಶ' (ಘಟಾಕಾಶ) ಎಂದು ಅದಕ್ಕೆ ಹೆಸರು ಬಂದು ಬಿಡುತ್ತದೆ. ಅದೇ ಒಂದು ಮನೆಕಟ್ಟಿದರೆ ಗೃಹಾಕಾಶ ' (ಮನೆಯ ರೀತಿಯಲ್ಲಿರುವ ಆಕಾಶ) ಎಂದು ಹೆಸರು ಬಂದು 'ಬಿಡುತ್ತದೆ.

'ಸ ಏಷ ಇಹ ಆನಖಾಗ್ರೇಭ್ಯಃ ಪ್ರವಿಷ್ಟಃ'

ಅದೇ ರೀತಿ ಚೈತನ್ಯವೂ ಅನಾದಿಯಾದ ಸಂಸಾರ ಚಕ್ರದಲ್ಲಿ ಪ್ರವೇಶಿಸಿತು. ಅದರಿಂದ ಬಂಧದಲ್ಲಿ ಸಿಕ್ಕಿಕೊಂಡಂತಾಯಿತು. ಆಕಾಶ ನಿಜಕ್ಕೂ ಒಂದಾದರೂ, ಘಟಾಕಾಶವೆಂದು ನಾವು ಹೇಳುವಂತೆ ಇಲ್ಲಿಯೂ ಕೂಡ ಸಂಸಾರಚಕ್ರ ಏತಕ್ಕೆ ಅನಾದಿಯೆಂದು ಹೇಳಲ್ಪಟ್ಟಿದೆಯೆಂದು ಕೆಲವರಲ್ಲಿ ಪ್ರಶ್ನೆಉಂಟಾಗುತ್ತದೆ. ಸಂಸಾರಕ್ಕೆ ಮೂಲ ಹೇಳಲಾಗುವುದಿಲ್ಲ, ಕೆಲವಕ್ಕೆ ಕಾರಣ ಹೇಳಲಾರೆವು. ಮರದಿಂದ ಹಣ್ಣು ಬರುತ್ತದೆಯೇ ಅಥವಾ ಹಣ್ಣಿನಿಂದ ಮರವೇ ಎಂದು ಕೇಳಿದರೆ 'ಬರುತ್ತಿದೆ' ಎಂದು ಹೇಳಬಹುದೇ ಹೊರತು ಅದಕ್ಕೆ ಮೂಲ ತೋರಿಸಲಾಗುವುದಿಲ್ಲ. ಅದೆ ರೀತಿ ಕರ್ಮದಿಂದ ಜನ್ಮ, ಜನ್ಮದಿಂದ ಸುಖಗಳು. ಮತ್ತೆ ರುಚಿ, ಪುನಃ ಕರ್ಮ ಎಂದು ಇದು ಮುಂ ದು ವ ರೆ ಯು ತ್ತಾ ಚಕ್ರದಂತೆ ಸುತ್ತಿಕೊಂಡಿರುತ್ತದೆ. ಈ ಚಕ್ರದಲ್ಲಿ ಸಿಕ್ಕಿಕೊಂಡವನಿಗೆ ಇದರಿಂದ ಬಿಡುಗಡೆಯಾಗಬೇಕೆಂಬ ಆಸೆ ಉಂಟಾಗುವುದು ಸಹಜ. ಹೇಗೆ ಬಿಡುಗಡೆ ಪಡೆಯುವುದು.

ಸಮುದ್ರದಲ್ಲಿರುವ ನೀರು ಆವಿಯಾಗಿ ಮಾರ್ಪಟ್ಟು ಮೇಘವಾಗುತ್ತದೆ. ಅನಂತರ ಅದೇ ಮಳೆಯಾಗಿ ಬಿದ್ದು ನದಿಯಾಗಿ ಹರಿದು ಕಡಲಲ್ಲಿ ಸೇರುತ್ತದೆ. ನಾವು ಸಮುದ್ರ ಸ್ಥಾನೀಯವಾಗಿ ಬ್ರಹ್ಮದಿಂದ ಬೇರ್ಪಟ್ಟವರು. ಆದರೂ ಬ್ರಹ್ಮವೇ, ಬೇರೆ ರೂಪವನ್ನು ಪಡೆದ ಮೇಲೆ ಬ್ರಹ್ಮವೆನ್ನುವ ಹೆಸರಿಲ್ಲ. ಮೇಘವಾಗಿರುವಾಗ ಅದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮುದ್ರವೆನ್ನುವ ಹೆಸರು ಹೇಳುವುದಿಲ್ಲ. ಅದೇ ರೀತಿ ನದಿಯಶಾಗಿ ಇರುವಾಗಲೂ ಅದಕ್ಕೆ ಸಮುದ್ರವೆನ್ನುವ ಹೆಸರು ಇಲ್ಲ. ಆದರೆ ನದಿ ಸಮುದ್ರವನ್ನು ಸೇರುತ್ತಲೇ

'ಸಮುದ್ರ ಇತ್ಯೇವಂ ಪ್ರೋಚ್ಯತೇ ನಾಮರೂಪೇ ವಿಹಾಯ'

(ನಾಮ ರೂಪಗಳನ್ನು ಬಿಟ್ಟು ಸಮುದ್ರವೆಂದೇ ಹೇಳಲ್ಪಡುತ್ತದೆ) ಎಂದಾಗುತ್ತದೆ. ನಾವು ಕೂಡ ಬ್ರಹ್ಮದಲ್ಲಿ ಸೇರುವವರೆಗೆ ಸುತ್ತಿಕೊಂಡೇ ಇರುತ್ತೇವೆ. ನಮ್ಮ ಲಕ್ಷ್ಯ ಬ್ರಹ್ಮವನ್ನು ಸೇರುವುದೇ ಆಗಿದೆ. ಆಗಲೇ ಶಾಂತಿಯುಂಟಾಗುತ್ತದೆ. ಆದರೆ, ಕೆಲವರು ಅದನ್ನು ಬಿಟ್ಟು, 'ನಾವು ಪರಮಶಿವನ ಲೋಕಕ್ಕೋ, ವಿಷ್ಣುವಿನ ಲೋಕಕ್ಕೋ, ಬ್ರಹ್ಮನ ಲೋಕಕ್ಕೋ ಹೋಗಿ ಇದ್ದರೆ ಅದು ಮೋಕ್ಷ' ಎನ್ನುತ್ತಾರೆ. ಆದರೆ ಯಾವಾಗಲೂ,

'ದ್ವಿತೀಯಾತ್ ವೈ ಭಯಂ ಭವತಿ'

ಎಂದು ಹೇಳಿರುವುದರಿಂದ ಎರಡನೆಯ ವಸ್ತು ಎನ್ನುವುದಿದ್ದರೆ ಅದರಿಂದ ಭಯ ಉಂಟಾಗುತ್ತದೆ. ಪ್ರಪಂಚದಲ್ಲಿ, ಎಂಥ ಬಲಶಾಲಿಯಾದರೂ ಅವನಿಗೆ ಇನ್ನೊಬ್ಬ ಬಲಶಾಲಿಯನ್ನು ಕಂಡರೆ ಭಯವಾಗುವುದನ್ನು ನಾವು ನೋಡುತ್ತೇವೆ. ತನ್ನಂತೆ ಇನ್ನೊಬ್ಬನು ಇಲ್ಲ ಎನ್ನುವ ತೀರ್ಮಾನವಾದಾಗ ಅವನಿಗೆ ಭಯ ಉಂಟಾಗಲು ಮಾರ್ಗವಿರುವುದಿಲ್ಲ. ತೀರ್ಮಾನವಾದರೂ ಎರಡನೆಯ ವಸ್ತು ಇದ್ದರೆ, ಅದು ಪ್ರಯೋಜನವಿಲ್ಲ. (ಬಂಧವೆನ್ನುವುದು ಅಜ್ಞಾನದಿಂದ ಬಂದುದು. ಆದ್ದರಿಂದ ಈ ಅಜ್ಞಾನವನ್ನು ದೂರ ಮಾಡಿದರೆ ಬಂಧನವೆನ್ನುವುದೇ ಇರುವುದಿಲ್ಲ.)

'ದ್ವಿತೀಯಾತ್ ವೈ ಭಯಂ ಭವತಿ'

ಎನ್ನುವುದರಿಂದ ವೈಕುಂಠದಂಥ ಲೋಕಗಳಲ್ಲಿದ್ದರೂ ಎರಡನೆಯ ವಸ್ತುವಿನ ಬಗ್ಗೆ ಅರಿವು ಇರುವುದರಿಂದ ಆಗಲೂ ಭಯವಿದ್ದೇ ಇರುತ್ತದೆ. ಜಯ - ವಿಜಯರು ವೈಕುಂಠದಲ್ಲೇ ಇದ್ದರೂ ಮತ್ತೆ ಅವರು ಜನ್ಮ ಪಡೆಯುವಂತಾಯಿತು. ಆದರೆ,

'ಅತ್ರ ಬ್ರಹ್ಮ ಸಮಶ್ನುತೇ'

Sri Vidyabharathi Book Centre, Sringeri

CC-O. In Public Domain. Digitized by eGangotri

ಎನ್ನುವಂತೆ ಈ ಜನ್ಮದಲ್ಲಿಯೇ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದವರಿಗೆ ಮತ್ತೆ ಜನ್ಮ ಬಂದಿತೆಂದು ಯಾವ ಒಂದು ಉಪನಿಷತ್ತಾಗಲಿ, ಪುರಾಣವಾಗಲಿ, ಇತಿಹಾಸವಾಗಲಿ ಹೇಳಿದಂತೆ ಎಲ್ಲಿಯೂ ಇಲ್ಲ. ಬ್ರಹ್ಮಸಾಕ್ಷಾತ್ಕಾರವಾದವರಿಗೆ

'ನ ತಸ್ಯ ಪ್ರಾಣಾ ಉತ್ಕ್ರಾಮನ್ತಿ !'

(ಅವನ ಪ್ರಾಣ ಉತ್ಕ್ರಮಿಸುವುದಿಲ್ಲ) ಎಂದು ಹೇಳಲ್ಪಟ್ಟಿದೆ. ಬೇರೆಯವರಿಗೆ ಹೀಗಲ್ಲ. ಅಲ್ಲದೆ ಜ್ಞಾನಿಯು ವಿಷಯವಾಗಿ

'ಅತ್ರೈವ ಸಮವಲೀಯನ್ತೇ'

ಎಂದೂ ಹೇಳಿರುವುದರಿಂದ ಯಾವ ಯಾವ ಭೂತಗಳಿಂದ ಈ ಶರೀರ ಬಂದಿದೆಯೋ, ಆ ಭೂತಗಳಲ್ಲಿಯೇ ಇದು ಹೋಗಿ ಸೇರುತ್ತದೆಂದು ತಿಳಿಯುತ್ತದೆ. ಆದ್ದರಿಂದ ಬ್ರಹ್ಮಸಾಕ್ಷಾತ್ಕಾರ ಪಡೆದರೇನೇ ನಮಗೆ ಜನ್ಮ- ಮರಣವೆನ್ನುವ ಚಕ್ರದಿಂದ ಬಿಡುಗಡೆ ಉಂಟಾಗುತ್ತದೆ.

'ಯದೇಹ ಕರ್ಮಚಿತೋ ಲೋಕಃ ಕ್ಷೀಯತೇ ಏವಮೇವ
ಅಮುತ್ರ ಪುಣ್ಯಚಿತೋ ಲೋಕಃ ಕ್ಷೀಯತೇ.'

ಈ ಪ್ರಪಂಚದಲ್ಲಿ ಕರ್ಮದ ಫಲವಾಗಿರುವುವು ಕಣ್ಣುಗಳಿಗೆ ಬೀಳುತ್ತಿದ್ದಂತೆಯೇ ನಾಶವಾಗುವಂತೆ ಪುಣ್ಯದಿಂದಲೂ, ಮಹಾಯಜ್ಞಗಳಿಂದಲೂ, ಉಪಾಸನೆಗಳಿಂದಲೂ ಸಂಪಾದಿಸಲಾದ ಲೋಕಗಳೂ ನಶಿಸಿ ಹೋಗುತ್ತವೆ. ಆದ್ದರಿಂದ ನಾವು ನಮ್ಮ ಸ್ವರೂಪವನ್ನು ತಿಳಿದುಕೊಂಡು ಅಜ್ಞಾನವನ್ನು ಹೋಗಲಾಡಿಸಿಕೊಳ್ಳಬೇಕು.

'ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ.'

ಜ್ಞಾನವನ್ನು ಪಡೆದವನು ಕೆಲಸಗಳನ್ನು ಮಾಡಿದರೂ, ಮಾಡದೆ ಇದ್ದರೂ ಅವನಿಗೆ ಯಾವ ವಿಧವಾದ ಫಲದಲ್ಲಿಯೂ ಅಭಿಲಾಷೆ ಇರುವುದಿಲ್ಲ. ಆದರೆ ಇತರರಿಗೆ ಅವನಿಂದ ಶ್ರೇಯಸ್ಸು ಉಂಟಾಗುವ ಯೋಗವಿದೆ. ಆ ಯೋಗದಿಂದ ಅವನು ಕೆಲಸಗಳನ್ನು ಮಾಡಿಕೊಂಡಿದ್ದಾನೆ.

'ಜನ್ತೂನಾಂ ನರಜನ್ಮ ದುರ್ಲಭಂ'

Sri Vidyabharathi Book Centre, Sringeri

CC-O. In Public Domain. Digitized by eGangotri

ಜನ್ಮಗಳಲ್ಲಿ ನರಜನ್ಮ ದುರ್ಲಭವಾದುದು.

'ನಾನಾಯೋನಿ ಸಹಸ್ರ ಸಂಭವಂ'

ಎನ್ನುವಂತೆ ನಮಗೆ ಅನೇಕ ಜನ್ಮಗಳು ಆಗಿವೆಯೆಂದು ನೋಡಿದೆವು. ಜನ್ಮಗಳಲ್ಲಿ ಚರ -ಅಚರವೆಂದು ಎರಡು ವಿಧ. ಈ ಪ್ರಪಂಚದಲ್ಲಿ ನಾವು ನೋಡುವ ಪ್ರಾಣಿಗಳು ಚರ. ಈ ಎರಡರಲ್ಲಿ ಉತ್ತಮವಾದುದು ಮನುಷ್ಯ ಜನ್ಮವೇ. ಮನುಷ್ಯನು ತನ್ನ ಕರ್ಮಗಳಿಂದ ತನ್ನನ್ನು ತಾನು ಉತ್ತಮಗೊಳಿಸಿಕೊಳ್ಳುತ್ತಾನೆ. ಅಥವಾ ತನ್ನನ್ನು ಕೆಡಸಿಕೊಳ್ಳಲೂ ಬಹುದು. ಹೀಗೆ ಮಾಡಲು ಮನುಷ್ಯನಿಗೆ ಸ್ವಾತಂತ್ರ್ಯವಿದೆ. ಬೇರೆ ಯಾವ ಜೀವನಕ್ಕೂ ಈ ರೀತಿಯಾದ ಸ್ವಾತಂತ್ರ್ಯವಿಲ್ಲ. 'ಇದು ಒಳ್ಳೆಯದು' ಎಂದು ತಿಳಿದು ಅದನ್ನು ಮಾಡುವ ಯೋಗ್ಯತೆಯಾಗಲೀ 'ಇದು ತಪ್ಪು' ಎಂದು ತಿಳಿದು ಅದನ್ನು ಬಿಡುವ ಯೋಗ್ಯತೆಯಾಗಲೀ ಇತರ ಪ್ರಾಣಿಗಳಿಗೆ ಇಲ್ಲವೇ ಇಲ್ಲ. ಅವು ಯಾವ ನಿಮಿಷದಲ್ಲಿ ಏನು ಮಾಡಬೇಕೆಂದು ತೋರುವುದೋ ಅದನ್ನು ಮಾಡುತ್ತವೆ. ಅದರಿಂದ ಯಾವ ಫಲ ದೊರೆಯುತ್ತದೆಯೋ ಅದನ್ನು ಅನುಭವಿಸುತ್ತವೆ. ಮನುಷ್ಯ ಜನ್ಮವೆನ್ನುವುದು ಹಾಗಲ್ಲ. ಇಂದು ಒಂದು ಕೆಲಸವನ್ನು ಮಾಡುವಾಗ 'ಶ್ರಮವಾಗಿದ್ದರೂ ಅನಂತರ ಶ್ರೇಯಸ್ಸಾಗುತ್ತದೆ' ಎಂದು ತಿಳಿದರೆ ಮನುಷ್ಯನು ಆ ಕೆಲಸವನ್ನು ಮಾಡಬಲ್ಲನು. ಅದರಿಂದ ಮನುಷ್ಯಜನ್ಮವನ್ನು ಪಡೆದ ನಾವು ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆಯಲು ಪ್ರಯತ್ನಪಟ್ಟು ಅದನ್ನು ಪಡೆದು 'ಕುರು ಯತ್ನಮಜನ್ಮನಿ' ಎಂದು ಹೇಳಿದಂತೆ ಜನ್ಮರಾಹಿತ್ಯವನ್ನು ಮಾಡಿಕೊಳ್ಳಬಹುದೆಂದು ಶಾಸ್ತ್ರದಿಂದಲೂ ಅನುಭವದಿಂದಲೂ ತಿಳಿಯುತ್ತದೆ.

ಒಂದು ಸ್ಥಳದಲ್ಲಿ ಒಬ್ಬರು, ಚೆನ್ನಾಗಿ ಊಟಮಾಡಿ, ಮನಸ್ಸು ತೃಪ್ತಿ ಪಡುವಂತೆ ಪಾನಮಾಡಿ, ಚೆನ್ನಾಗಿ ಸಂತೋಷಪಡಿ, ಆದರೆ ಒಂದು ಮಾತ್ರ ಖಂಡಿತವಾಗಿಯೂ ತಿಳಿದುಕೊಳ್ಳಿ. ಅದೇನೆಂದರೆ, ಶರೀರದಿಂದ ಬೇರಾದ 'ಆತ್ಮ' ಎನ್ನುವುದು ಒಂದಿದೆ. ಇದನ್ನು ಮನಸ್ಸಿನಲ್ಲಿ ಗಂಭೀರವಾಗಿ ಸ್ಥಿರವಾಗಿಟ್ಟುಕೊಳ್ಳಿ' ಎನ್ನುತ್ತಾರೆ. ಈ ವಿಧವಾಗಿ ನಾವು ಮನಸ್ಸಿನಲ್ಲಿ ಸ್ಥಿರಪಡಿಸಿಕೊಂಡರೆ ಮಾತ್ರ ನಾವು ಮುಂದುವರಿಯಬಹುದು. ಅದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ಕಾಗಿಯೇ 'ದೇಹಕ್ಕೆ ಅತಿರಿಕ್ತನಾದ ಆತ್ಮ' ಎನ್ನುವುದನ್ನು ತೀರ್ಮಾನಿಸಿ ಕೊಳ್ಳಬೇಕೆಂದು ಹೇಳಿದರು.

ಹೀಗೆ ಅರಿವಿಲ್ಲದೆ ಇದ್ದರೆ, ನಾವು ಚಾರ್ವಾಕರಂತೆ ಶ್ರೇಯಸ್ಸಿನ ವಿಷಯದಲ್ಲಿಯೇ ನಂಬಿಕೆ ಇಲ್ಲದವರಾಗಿ ಬಿಡುತ್ತೇವೆ. ಈಗ ಕೆಲವು ಮತಗಳನ್ನು ಕುರಿತು ನೋಡೋಣ.

ತಾರ್ಕಿಕರು ದೇಹಾತಿರಿಕ್ತನಾದ ಆತ್ಮನಿದ್ದಾನೆಂದು ಹೇಳುತ್ತಾರೆ. ಆದರೆ ಅದರ ಬಗ್ಗೆ ವಿವರಿಸಲು ಹೋಗುವುದಿಲ್ಲ. ಅವರು ಆತ್ಮನಿಗೆ ಸುಖ-ದುಃಖ ಎಲ್ಲಾ ಉಂಟೆನ್ನುತ್ತಾರೆ. ನಾವು ಅದನ್ನು ಒಪ್ಪಲಾಗುವುದಿಲ್ಲ. ಸುಖವೋ ದುಃಖವೋ-ಉಂಟು ಎಂದರೆ ಎರಡೂ ಹೋಗಬೇಕಾದುವೇ. ಎರಡು ಸ್ಥಿತಿಗಳೂ ಹೋದರೆ ಆತ್ಮನು ಕಲ್ಲಿನಂತೆ ಆಗಿಬಿಡುತ್ತಾನೋ? ಕಲ್ಲಿಗಿಂತ ಉನ್ನತ ಸ್ಥಿತಿಯಲ್ಲಿರುವ ನಾವುಗಳು ಕಲ್ಲಾಗುವುದಕ್ಕೆ ಪ್ರಯತ್ನ ಪಡಬೇಕೇ? ಎಂದು ಕೇಳಿದರೆ ಅದಕ್ಕೆ ಅವರು ಉತ್ತರ ಕೊಡಲು ಸಾಧ್ಯವಿಲ್ಲ. ಆದ್ದರಿಂದ ತರ್ಕಶಾಸ್ತ್ರದಲ್ಲಿ ಹೇಳಲ್ಪಟ್ಟ ಮೋಕ್ಷ ಕಲ್ಲಿಗೂ ಇದೆ. ಆದ್ದರಿಂದ ಅಂಥ ಮೋಕ್ಷ ಉಪಯೋಗವಾಗುವುದಿಲ್ಲ. ಕೆಲವರು 'ಇಲ್ಲ ಆತ್ಮನಿಗೆ ನಿತ್ಯಸುಖ ಬಂದು ಬಿಡುತ್ತದೆ' ಎನ್ನುತ್ತಾರೆ. 'ಇದರಲ್ಲಿ ಒಂದು ತಪ್ಪಿದೆ. ಅದೇನೆಂದರೆ, ನಿತ್ಯಸುಖ 'ಬಂದು ಬಿಡುತ್ತದೆ ಎಂದರೆ ಅದು ನಿತ್ಯಸುಖವೇ ಆಗುವುದಿಲ್ಲ. ಬಂದ ನಿತ್ಯಸುಖ ಹೋಗಲೇ ಬೇಕಾಗುತ್ತದೆ. ಹೋದಮೇಲೆ ಆತ್ಮನು ಜಡನಾಗಿರ ಬೇಕು. ಆದ್ದರಿಂದ ತರ್ಕಶಾಸ್ತ್ರದಲ್ಲಿ 'ಆತ್ಮನಿದ್ದಾನೆ' ಎಂದು ಹೇಳಿ ಅದಾದ ಮೇಲಿನ ವಿಮರ್ಶೆಯ ಬಾಧ್ಯತೆಯನ್ನು ನಮ್ಮ ಮೇಲೆಯೇ ಹಾಕಿಬಿಟ್ಟರು.

ಸಾಂಖ್ಯ ಮತವನ್ನು ಒಪ್ಪುವವರು, 'ಆತ್ಮನು ಸುಖ ಸ್ವರೂಪಿ, ಜ್ಞಾನಸ್ವರೂಪಿ' ಎನ್ನುತ್ತಾರೆ. ಅಲ್ಲದೆ, ಅವರ ಅಭಿಪ್ರಾಯದಂತೆ ಮುಕ್ತರಾಗಿರುವ ಹಲವು ಬೇರೆ ಬೇರೆ ಆತ್ಮರು ಇದ್ದಾರೆ. ಹಲವರು ಮುಕ್ತರಾಗಿ ಇರುವುದರಿಂದ,

'ದ್ವಿತೀಯಾತ್ ವೈ ಭಯಂ ಭವತಿ'

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಹೇಳಿದಂತೆ ಒಬ್ಬಮುಕ್ತರಿಗೆ, ಇಷ್ಟು ಮಂದಿ ಮುಕ್ತರಲ್ಲಿ ಯಾರು ಹೆಚ್ಚು, ಯಾರು ಕಡಮೆಎನ್ನುವ ಅಭಿಪ್ರಾಯ ಉಂಟಾಗಬಹುದು. ಭೇದ ದೃಷ್ಟಿ ಇರುವವರೆಗೆ ಮೋಕ್ಷವಿಲ್ಲವೆಂದು ಮೊದಲೇ ಹೇಳಿದೆವು. ಆದ್ದರಿಂದ ಈ ಮತವೂ ಸರಿಯಲ್ಲ.

'ದ್ವಿತೀಯಾತ್ ವೈ ಭಯಂ ಭವತಿ'

ಎನ್ನುವ ಸ್ಥಾನದಲ್ಲಿ ಒಂದನ್ನು ಗಮನಿಸಬೇಕು. ನಾವೇ ಒಂದು ಪಿಶಾಚಿಯನ್ನು ಎದುರಿಗೆ ಉಂಟುಮಾಡಿದರೆ ನಾವು ಭಯಪಡುತ್ತೇವೆಯೇ? ಭಯಪಡುವುದೇ ಇಲ್ಲ. ಹೊಸದಾಗಿ ಯಾವುದಾದರೂ ಪಿಶಾಚಿ ಬಂದರೆ ಭಯಪಡುವ ಸಂದರ್ಭ ಒದಗಬಹುದು.

ಅದ್ವೈತಮತದ ಪ್ರಕಾರ ಇಷ್ಟು ದೊಡ್ಡ ಪ್ರಪಂಚ ಪಿಶಾಚಿಯಂತೆ ಇದ್ದರೂ ನಮ್ಮ ಸ್ವರೂಪವೇ ಎಂದು ಹೇಳಲ್ಪಟ್ಟಿದೆ. ಆದ್ದರಿಂದ ನಾವು ಏಕೆ ಭಯಪಡಬೇಕು? ಆದ್ದರಿಂದ ಅದ್ವಿತೀಯವಾದ ಬ್ರಹ್ಮದಲ್ಲಿ ಇರುವ ರಸ ಬೇರೆ ಯಾವ ಮತದಲ್ಲಿಯೂ ಇಲ್ಲ.

ಎಷ್ಟೋ ಕಾಲದಿಂದ ಹುಟ್ಟು-ಸಾವುಗಳಲ್ಲಿ ಸಿಕ್ಕಿಕೊಂಡಿರುವ ನಾವು ಜ್ಞಾನವನ್ನು ಪಡೆಯದೆ ಇರುವುದರಿಂದ ಮುಟ್ಠಾಳರೇ?' ಅಲ್ಲ. ಏಕೆ? ಈಗ ಭಗವಂತನ ಕೃಪೆಯಿಂದ ನಮಗೆ ಮನುಷ್ಯ ಜನ್ಮ ದೊರೆತಿದೆ ಇದರಿಂದ ನಾವು ಶ್ರೇಯಸ್ಸನ್ನು ಪಡೆಯಬಹುದು. ಸ್ವಲ್ಪ ಶೋಧಿಸಿ ನೋಡಿದರೆ ದುಃಖವಿಲ್ಲದ ಸುಖ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲವೆಂದು ತಿಳಿಯಬಹುದು. ಆದ್ದರಿಂದ ಹೊರ ವಸ್ತುಗಳಿಂದ ಸುಖವಿಲ್ಲವೆನ್ನುವುದನ್ನೂ ತಿಳಿಯಬಹುದು. ಇದರಿಂದ ಯಾವುದಾದರೂ ಒಂದು ಮಾರ್ಗದಿಂದ ಶ್ರೇಯಸ್ಸನ್ನು ಪಡೆಯಬೇಕೆನ್ನುವ ಆಸೆ ಉಂಟಾಗುತ್ತದೆ. ಅದಕ್ಕೆ ಮಾರ್ಗವೇನು? ಎನ್ನುವುದನ್ನು ಮುಂದೆ ಬರುವ ಶ್ಲೋಕ ಹೇಳುತ್ತದೆ.

ಸ್ವಸ್ಯಾವಿದ್ಯಾ ಬಂಧ ಸಂಬಂಧ ಮೋಕ್ಷಾತ್
ಸತ್ಯ ಜ್ಞಾನಾನಂದ ರೂಪಾತ್ಮ ಲಬ್ಧ್ವಾ ।
ಶಾಸ್ತ್ರಂ ಯುಕ್ತಿರ್ದೇಶಿಕೋಕ್ತಿಃ ಪ್ರಮಾಣಂ
ಚಾನ್ತಃ ಸಿದ್ಧಾ ಸ್ವಾನುಭೂತಿಃ ಪ್ರಮಾಣಮ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹಲವು ಶಾಸ್ತ್ರಗಳಲ್ಲಿ 'ಮೋಕ್ಷಕ್ಕೆ ಶಾಸ್ತ್ರವೇ ಪ್ರಮಾಣ' ಎನ್ನುವ ಉತ್ತರವೇ ದೊರೆಯುತ್ತದೆ. ಭಗವತ್ಪಾದರು ಅಷ್ಟು ನಿನ್ನ ಸ್ವಂತ ಮಾತ್ರವಲ್ಲದೇ, 'ನೀನು ಮೋಕ್ಷವನ್ನು ಪಡೆಯಬೇಕಾದರೆ ಅನುಭವವೂ ಪ್ರಮಾಣ' ಎನ್ನುತ್ತಾರೆ.

'ನಮಗೆ ಎಷ್ಟೋ ಅನುಭೂತಿಗಳು ಇರಬಹುದು. ಅವುಗಳಿಂದ ಮೋಕ್ಷ ಬರುವಂತೆ ತೋರುವುದಿಲ್ಲ. ಮೋಕ್ಷವನ್ನು ಪಡೆಯಲು ಏನು ಅನುಭೂತಿಯಾಗಬೇಕು' ಎಂದು ಯಾರಾದರೂ ಕೇಳಬಹುದು. ಅಂಥ ಅನುಭೂತಿ ಉಂಟಾಗುವುದಕ್ಕೆ ಒಂದು ಪದ್ಧತಿ ಇದೆ. ಆ ಪದ್ಧತಿಯಲ್ಲೆ ನಾವು ಹೋಗಬೇಕು.

ಒಂದು ವಜ್ರವಿದೆ. ಅದು ಒಳ್ಳೆಯ ವಜ್ರವೇ ? ಎಂತಹದು ಎಂದೆಲ್ಲಾ ಪರೀಕ್ಷಿಸುವುದಕ್ಕೆ ನಾವು ಇಷ್ಟ ಪಡಬಹುದು, ಆದರೆ ಅದು ಫಳಫಳ ಎಂದಿದೆ ಎನ್ನುವುದು ಮಾತ್ರ ನಮಗೆ ಗೊತ್ತು. ಇಲ್ಲಿಯೂ ನಮಗೆ 'ಪ್ರತ್ಯಕ್ಷ ಅನುಭೂತಿ' ನಾವು ವಜ್ರವನ್ನು ನೋಡಿದರೆ ಉಂಟಾಗುತ್ತದೆ. ಆದರೆ ಆಭರಣಗಳ ವಿಷಯದಲ್ಲಿ ನಿಪುಣನಾಗಿರು ವವನಿಗೆ ಆ ವಜ್ರವನ್ನು ನಾವು ಕೊಟ್ಟರೆ ಅವನು, 'ಸ್ವಾಮಿ, ಈ ವಜ್ರ ಧರಿಸುವುದಕ್ಕೆ ಯೋಗ್ಯವಲ್ಲ. ಇದರಲ್ಲಿ ಒಂದು ಕಪ್ಪು ಮಚ್ಚೆ ಇದೆ' ಎನ್ನುತ್ತಾನೆ. ನಮಗೆ ಮೊದಲು ಆ ಮಚ್ಚೆ ಕಾಣಿಸಲೇ ಇಲ್ಲ, ಆ ಆಭರಣವನ್ನು ಪರೀಕ್ಷಿಸುವವನು ನಮಗೆ 'ಈ ಕಡೆಯಿಂದ ನೋಡಿ! ಈ ಕಡೆಯಿಂದ ನೋಡಿ!' ಎಂದು ಹೇಳಿ ನಮಗೆ ಮಚ್ಚೆಯನ್ನು ತೋರಿಸುತ್ತಾನೆ. ಹೀಗೆ ಅವನು ತನ್ನ ಅನುಭೂತಿಯೆಲ್ಲವನ್ನೂ ನಮಗೆ ತಂದು ಕೊಟ್ಟರೆ ನಮ್ಮ ಅನುಭೂತಿಯೇ ಪ್ರಮಾಣವಾಗುತ್ತದೆ.

ಇಂಥ ಒಂದು ಚಿಕ್ಕ ಮಚ್ಚೆಯ ವಿಷಯದಲ್ಲಿ ಹೀಗಿರುವಾಗ,

'ತಂ ದುರ್ದರ್ಶಂ ಗೂಢಮನುಪ್ರವಿಷ್ಟಂ
ಗುಹಾಹಿತಂ ಗಹ್ವರೇಷ್ಠಂ ಪುರಾಣಮ್'

Sri Vidyabharathi Book Centre, Sringeri

CC-O. In Public Domain. Digitized by eGangotri

ಎನ್ನುವ ಬ್ರಹ್ಮದ ವಿಷಯದಲ್ಲಿ ಹೇಳುವ ಅಗತ್ಯವೇ ಇಲ್ಲ. ಮಂತ್ರದಲ್ಲಿ 'ದುರ್ದರ್ಷಂ' ಎಂದು ಹೇಳಿರುವಂತೆ 'ಅವನನ್ನು ನೋಡುವುದು ಬಹಳ ಕಷ್ಟ. 'ಗುಹಾಹಿತಂ' ಎಂದರೆ ಒಳಗೆ ಇರುವವನು ಎಂದು ಅರ್ಥ.

ಗಾಳಿ ಎಲ್ಲೆಡೆಯಲ್ಲಿಯೂ ಇರುತ್ತದೆ. ಆದರೆ ಗಾಳಿ ಬರುತ್ತಿದ್ದರೇನೇ 'ಗಾಳಿ ಇದೆ' ಎಂದು ಹೇಳುತ್ತೇವೆ. ಗಾಳಿ ಬರದೇ ಇದ್ದರೆ ಗಾಳಿ ಇಲ್ಲ' ಎನ್ನುತ್ತೇವೆ ಗಾಳಿ ಬರದೇ ಇದ್ದರೆ 'ಗಾಳೀ ಇಲ್ಲ' ಎನ್ನುತ್ತೇವೆ. ಆದರೆ ಗಾಳಿ ಇಲ್ಲದ ಜಾಗದಲ್ಲಿ ಎರಡು ನಿಮಿಷಗಳ ಮೇಲೆ ಇರಲಾಗುವುದಿಲ್ಲ. ಗಾಳಿ ಇಲ್ಲವೆಂದು ಹೇಳುವವನ ಮೂಗು ಹಿಡಿದುಕೊಂಡರೆ ಗಾಳಿ ಇದೆಯೆಂದು ಅವನು ತಿಳಿಯುತ್ತಾನೆ. ಆದ್ದರಿಂದ ಗುಹಾಹಿತಂ ಗಹ್ವರೇಷ್ಟಂ ಪುರಾಣಮ್' ಎಂದು ಹೇಳಲ್ಪಡುವ ಬ್ರಹ್ಮವನ್ನು ತಿಳಿದು ಕೊಳ್ಳಬೇಕಾದರೆ 'ಹೀಗೆ ಒಂದು ವಸ್ತುವಿದೆ' ಎಂದು ಹೇಳಲು ಒಬ್ಬ ಆಪ್ತರು ಬೇಕು. ಆ ಆಪ್ತರಿಗೆ ಅದು ಹೇಗೆ ತಿಳಿಯಿತು ಎಂದರೆ ಅವರು ಹೆಚ್ಚಾಗಿ ಪರೀಕ್ಷೆಮಾಡಿ ಅದನ್ನು ತಿಳಿದುಕೊಂಡಿದ್ದಾರೆ.

ನಾವಾಗಿಯೇ ವಿಚಾರಮಾಡಿ ಒಂದು ಸಿದ್ಧಾಂತವನ್ನು ಮಾಡಬಹುದೆಂದರೆ, ಇನ್ನೊಂದು ದಿನ ನಮಗಿಂತ ಬುದ್ಧಿವಂತನಾದವನು' ಅಂದಿಗೆ ಅದು ಸರಿಯಾಗಿದ್ದಿತು. ಈಗ ಅದು ಕೆಲಸಕ್ಕೆ ಬಾರದ್ದು' ಎಂದು ಹೇಳಿ ನಮ್ಮ ಸಿದ್ಧಾಂತವನ್ನು ಬದಲಾಯಿಸಿ ಬೇರೆಯೊಂದನ್ನು ಸ್ಥಿರಪಡಿಸುತ್ತಾನೆ, ಇದನ್ನೇ ವಾಚಸ್ಪತಿ ಮಿಶ್ರರು ಬಹಳ ಸ್ವಾರಸ್ಯವಾಗಿ,

> ಯತ್ನೇನಾನುಮಿತೋಽಪ್ಯರ್ಥಃ ಕುಶಲೈರನುಮಾತೃಭಿಃ ।
> ಅಭಿಯುಕ್ತತರೈರನ್ಯೈರನ್ಯಥೈವ ಉಪಪಾದ್ಯತೇ ॥

ಎಂದಿದ್ದಾರೆ.

ತರ್ಕದಲ್ಲಿ ಪಂಡಿತನು ಯುಕ್ತಿಯಿಂದ ಆತ್ಮನಿಗೆ 'ಆತ್ಮನಃ ಸ್ಯುಃ ಚತುರ್ದಶ.' ಹದಿನಾಲ್ಕು ಗುಣಗಳಾದ ರಾಗದ್ವೇಷಗಳು ಇವೆಲ್ಲವೂ ಇವೆ ಎಂದನು. ಆದರೆ ಅವನಿಗಿಂತಲೂ ಹೆಚ್ಚು ತರ್ಕಬುದ್ಧಿಯುಳ್ಳ ಸಾಂಖ್ಯನ

Sri Vidyabharathi Book Centre, Sringeri

CC-0. In Public Domain. Digitized by eGangotri

ಹೇಳಬಾರದು. ಅವು 'ಆತ್ಮನ ಹೆಸರಿನಲ್ಲಿ ರಾಗ-ದ್ವೇಷ ಯಾವುದನ್ನೂ ಹೇಳಬಾರದು. ಅವು ಪ್ರಕೃತಿಗೆ ಮಾತ್ರವಿದೆ' ಎಂದು ಹೇಳಿ ತಾರ್ಕಿಕನು ಆತ್ಮನಗುಣಗಳೆಲ್ಲವೂ ಪ್ರಕೃತಿಯವಾಗಿ ಹೇಳಿದ ರಾಗ-ದ್ವೇಷ ಮುಂತಾದವುಗಳನ್ನು ಸಾಂಖ್ಯನು ಪ್ರಕೃತಿಯ ಮೇಲೆ ಹಾಕಿ ಪುರುಷ (ಆತ್ಮ) ನನ್ನು ಶುದ್ಧವಾಗಿಟ್ಟು ಬಿಟ್ಟನು ಹೀಗೆ ಪ್ರಕೃತಿ ಎನ್ನುವುದು ಒಂದು ಇರುವಂತೆ ಮಾಡಿ ಅದರ ಮೇಲೆ ಪುರುಷನಿರುವಂತೆ ವಿಶ್ವಾಸವನ್ನು ಉಂಟುಮಾಡಿ ಒಂದು ದೊಡ್ಡ ಸಂಸಾರವನ್ನೇ ನಡೆಸುವಂತೆ ಮಾಡಿದನು ಸಾಂಖ್ಯನು. ಇಬ್ಬರೂ(ತಾರ್ಕಿಕನೂ, ಸಾಂಖ್ಯನೂ) ತರ್ಕದಲ್ಲಿ ಒಳ್ಳೆಯ ನೈಪುಣ್ಯ ಹೊಂದಿದ್ದರೂ, ತಾರ್ಕಿಕನು ಮನಸ್ಸಿನ ವರೆಗೆ ಹೋದನು. ಸಾಂಖ್ಯನು, ಅವನಿಗಿಂತಲೂ ಮುಂದೆ ಒಂದು ಹೆಜ್ಜೆ 'ಪ್ರಕೃತಿ' ವರೆಗೆ ಹೋದನು.

ವೇದಾಂತ ಶಾಸ್ತ್ರ ಈ ಸಾಂಖ್ಯನನ್ನು ಕುರಿತು 'ಆ ಪ್ರಕೃತಿ ಯಾರಿಂದ ಆಯಿತು. ನಿನಗೆ ಗೊತ್ತೇ' ಎಂದು ಕೇಳಿದರೆ, ಸಾಂಖ್ಯನು 'ಅದಾಗಿಯೇ ಆಯಿತು' ಎನ್ನುತ್ತಾನೆ. ಜಡವಾಗಿರುವ ವಸ್ತು ಎಲ್ಲಾದರೂ ತಾನೇ ಉಂಟಾಗುತ್ತದೆಯೇ? ಗಾಳಿ ಆಡಿದರೆನೇ ಎಲೆ ಅಲ್ಲಾಡುತ್ತದೆ. ಗಾಳಿ ಆಡದೆ ಇದ್ದರೆ ಒಂದು ಸಣ್ಣ ಎಲೆ ಕೂಡ ಅಲ್ಲಾಡುವುದಿಲ್ಲ. ಹೀಗಿರುವುದರಿಂದ,

'ಸೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಂ'

'ಅವನ ಸಂಕಲ್ಪವಿಲ್ಲದಿದ್ದರೆ ಈ ಪ್ರಪಂಚವೇ ಇಲ್ಲ. ಆದ್ದರಿಂದ ಚೈತನ್ಯವೇ ಎಲ್ಲದಕ್ಕೂ ಮೂಲ' ಎಂದೆಲ್ಲಾ ತಾರ್ಕಿಕರಿಂದ ಹೇಳಲೇ ಆಗುವುದಿಲ್ಲ. ಆದ್ದರಿಂದ ತಾರ್ಕಿಕನು ಸ್ವಲ್ಪ ಮಟ್ಟಿಗೆ ಹೇಳಿದನು. ಅವನಿಗಿಂತಲೂ ದೊಡ್ಡ ತಾರ್ಕಿಕನಾದ ಸಾಂಖ್ಯನು ಬೇರೆ ವಿಧವಾಗಿ ಹೇಳಿದನು. ಆದರೆ

'ವೇದಾನ್ತ ವಿಜ್ಞಾನ ಸುನಿಶ್ಚಿತಾರ್ಥಾಃ'

ಎಂದು ಹೇಳಿದಂತೆ ವೇದಾಂತಿಗಳು ಮುಂದಕ್ಕೆ ಹೋಗಿ ವಿಮರ್ಶಿಸಿದರು. ಆತ್ಮದರ್ಶನ ಅವರಿಗೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಆತ್ಮಾವಾ ಅರೇ ದೃಷ್ಟವ್ಯೋ ಶ್ರೋತವ್ಯೋ ಮಂತವ್ಯೋ
ನಿಧಿಧ್ಯಾಸಿತವ್ಯಃ '

(ಪ್ರಿಯಳೇ ! ಆತನನ್ನು ಕಾಣಬೇಕು, ಆತ್ಮನ ಬಗ್ಗೆ ಕೇಳಬೇಕು ಚಿಂತಿಸಬೇಕು. ಸ್ಥಿರವಾದ ಮನಸ್ಸಿನಿಂದ ಧ್ಯಾನ ಮಾಡಬೇಕು.)

ಎನ್ನುವ ಮಾರ್ಗವೆಲ್ಲಾ ಹೇಳಲ್ಪಟ್ಟಿವೆ. ಅವುಗಳಲ್ಲಿ ವೇದಾಂತ ಶ್ರವಣ ಮುಖ್ಯವಾದುದು.

'ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ'

ಉಪನಿಷತ್ತಿನಿಂದಲೇ ಅವನನ್ನು ಪಡೆಯಬಹುದು.

ಕೆಲವರು ಹೀಗೆ ಅಭ್ಯಂತರವನ್ನು ಹೇಳುತ್ತಾರೆ.—

'ಗರ್ಭಸ್ಥ ಏವ ಋಷಿರ್ವಾಮದೇವಃ ಪ್ರತಿಪೇದೇ ಅಹಂ
ಮನುರಭವಂ ಸೂರ್ಯಶ್ಚ'

'ಗರ್ಭದಲ್ಲಿರುವಾಗಲೇ ವಾಮದೇವರಿಗೆ ಬ್ರಹ್ಮಜ್ಞಾನವಾಗಿಬಿಟ್ಟಿತು ಎಂದು ನೀವು ಹೇಳುತ್ತೀರಲ್ಲ ! ಹಾಗಿರುವ ಉಪನಿಷತ್ತುಗಳನು ಓದಿಯೇ ಬ್ರಹ್ಮವನ್ನು ತಿಳಿದುಕೊಳ್ಳಬೇಕೆಂದು ಹೇಳುವಿರಲ್ಲಾ! ಇದ ಹೇಗೆ ? ಈ ಪ್ರಶ್ನೆಗೆ ಒಂದು ಶ್ರೇಷ್ಠ ಮಾತನ್ನೇ ಉತ್ತರವನ್ನು ಹೇಳಬಹುದು. ಆತ್ಮನೆನ್ನುವವನು ಈ ಶರೀರವಲ್ಲ. ಅವನು ಪ್ರತಿಯೊಂದು ಶರೀರವನ್ನೂ ತೆಗೆದುಕೊಳ್ಳುತ್ತಾನೆ ಎನ್ನುವುದೇ ಅದು.

ವಾಮದೇವರು ಗರ್ಭದಲ್ಲಿರುವಾಗ ಆತ್ಮಸಾಕ್ಷಾತ್ಕಾರವನ್ನು ಪಡೆದರು ಎನ್ನುವುದರಿಂದ ಅವರು ಉಪನಿಷತ್ತಿನ ವಿಚಾರವೇ ಮಾಡಲಿಲ್ಲವೆಂದು ಯಾರು ಹೇಳಿದರು ? ಅವರು ಮೊದಲ ಜನ್ಮದಲ್ಲಿ ಉಪನಿಷತ್ ವಿಚಾರವನ್ನು ಮಾಡಿದ್ದರೆಂದು ನಾವು ಇಟ್ಟುಕೊಳ್ಳಬಹುದಲ್ಲವೆ ಉಪನಿಷತ್ ವಿಚಾರ ಮಾಡಿದೊಡನೆ ಬ್ರಹ್ಮಜ್ಞಾನ ಆವಾಗಲೇ ಉಂಟಾಗಬಹುದಾಗಿತ್ತಲ್ಲಾ ಎಂದರೆ, ಕೆಲವರಿಗೆ ಅರ್ಜಿ ಹಾಕುತ್ತಲೇ ಕೆಲಸ ಸಿಕ್ಕಬಹುದು, ಕೆಲವರಿಗೆ ಆರು ತಿಂಗಳು ವಿಳಂಬವಾಗಬಹುದು. ಏಕೆಂದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರಿಗೆ ಶಿರ್ಘಾಸು ಹೆಚ್ಚಾಗಿರಬಹುದು. ಅದೇ ರೀತಿ ಒಬ್ಬನಿಗೆ ಉಪನಿಷತ್ ವಿಚಾರದಿಂದ ತಕ್ಷಣವೇ ಜ್ಞಾನ ಉಂಟಾಗಬಹುದು. ಇನ್ನೊಬ್ಬನಿಗೆ ಪ್ರಾರಬ್ಧ ಕರ್ಮವನ್ನು ಅನುಭವಿಸಿದ ಮೇಲೆ ಪೂರ್ವ ಸಂಸ್ಕಾರದಿಂದ ಜ್ಞಾನ ಉಂಟಾಗುತ್ತದೆ. ಆದ್ದರಿಂದ ಹೇಗಾದರೂ ಆಗಲಿ, ಆತ್ಮಜ್ಞಾನ ಉಪನಿಷತ್ತುಗಳ ಮೂಲಕವಾಗಿಯೇ ಸಂಪಾದಿಸಲು ಸಾಧ್ಯ. ಅನುಭೂತಿ ಎನ್ನುವುದು ಶಾಸ್ತ್ರದಿಂದಲೇ ಬರುತ್ತದೆ. ಆದ್ದರಿಂದ ಅದಕ್ಕೆ ಮೊದಲು ಪ್ರಮಾಣ ಶಾಸ್ತ್ರವೇ ಆಗುತ್ತದೆ.

ಶಾಸ್ತ್ರವೇ ಮೊದಲು ಪ್ರಮಾಣವೆಂದು ಹೇಳಿದರೆ ನಾವು ಅದನ್ನು ನಂಬಲಾರೆವು. ಶಾಸ್ತ್ರದಲ್ಲಿ ಏನೇನೋ ಹೇಳಿದ್ದಾರೆ. ಅವುಗಳೆಲ್ಲ ಅರ್ಥವಾಗುವುದಿಲ್ಲ. ಇದು ಮಾತ್ರ ಅರ್ಥವಾಗುತ್ತದೆಯೋ ಎನ್ನುತ್ತಾರೆ ಕೆಲವರು. ಅದಕ್ಕಾಗಿಯೇ ಎರಡನೆಯದಾಗಿ 'ಯುಕ್ತಿ' ಎಂದಿದ್ದಾರೆ.

ಇನ್ನು ಯುಕ್ತಿಯನ್ನು ನೋಡೋಣ. ಆತ್ಮನು ನಿತ್ಯನು ಅವನು ಸುಖಸ್ವರೂಪಿ. ಆತ್ಮನಲ್ಲದುದು ಯಾವುದೂ ನಿತ್ಯವಾಗುವುದಿಲ್ಲ. ಒಂದು ವಿಷಯವನ್ನು ತಿಳಿಯುವಾಗಲೂ, ಹಲವು ವಿಷಯಗಳನ್ನು ತಿಳಿಯುವಾಗಲೂ ಈ ಜ್ಞಾನವೆನ್ನುವುದು ಮಾತ್ರ ಯಾವಾಗಲೂ ಬದಲಾಗದೆ ಇರುತ್ತದೆ. ಸೂರ್ಯನ ಬೆಳಕು ಹಲವು ವಸ್ತುಗಳನ್ನು ಪ್ರಕಾಶಗೊಳಿಸುತ್ತದೆ. ಇದರಿಂದ ಸೂರ್ಯನ ಬೆಳಕು ಬೇರೆ ಬೇರೆಯೆಂದು ಹೇಳಬಹುದೇ ? ಹೇಳಲಾಗುವುದಿಲ್ಲ. ಇನ್ನೊಂದು ಉದಾಹರಣೆ ನೋಡೋಣ.

ಒಂದೇ ಕನ್ನಡಿ. ಅದರ ಮುಂದುಗಡೆ ಇಟ್ಟ ವಸ್ತುಗಳೆಲ್ಲ ಪ್ರತಿಫಲಿಸುತ್ತವೆ. ಅದೇ ರೀತಿ ಜಾಗ್ರತ್ ಅವಸ್ಥೆಯಲ್ಲಿ ಇರುವ ಜ್ಞಾನ ಒಂದೇ ಒಂದು, ಅದು ವಿಷಯಗಳನ್ನು ಪ್ರತಿಫಲಿಸುತ್ತದೆ ಇಲ್ಲದಿದ್ದರೆ ನಿರಾಕಾರವಾಗಿರುತ್ತದೆ. ಜಾಗ್ರತ್ ಅವಸ್ಥೆಯಂತೆ, ಸ್ವಪ್ನಾವಸ್ಥೆಯಲ್ಲಿಯೂ ಅದೇ ಜ್ಞಾನ (ಮನಸ್ಸಿನಲ್ಲಿ ತೋರುವ ವಸ್ತುಗಳನ್ನು ಪ್ರತಿಫಲಿಸಿಕೊಂಡು) ಪ್ರಕಾಶಿಸುತ್ತದೆ. ಆನಂತರ ಸುಷುಪ್ತಿ ಅವಸ್ಥೆಯಲ್ಲಿ ಜ್ಞಾನವಿರುತ್ತದೆ. ಆದರೆ ಅದು ಇದೆಯೆಂದು ತಿಳಿಯಲಾಗುವುದಿಲ್ಲ. ನಿದ್ರೆಯಿಂದ ಎದ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ಒಬ್ಬನು 'ನಾನು ಚೆನ್ನಾಗಿ ನಿದ್ರೆಮಾಡಿದೆ. ಆದರೆ ಏನೂ ಗೊತ್ತಾಗಲಿಲ್ಲ' ಎನ್ನುವುದನ್ನು ನೋಡುತ್ತೇವೆ. 'ಚೆನ್ನಾಗಿ ಸಂತೋಷವಾಗಿ ನಿದ್ದೆ ಮಾಡಿದೆ' ಎನ್ನುವುದು ಒಬ್ಬನ ನೆನಪಿಗೆ ಬರಬೇಕಾದರೆ ಅವನು ನಿದ್ದೆ ಮಾಡುವಾಗ ಸುಖದಲ್ಲಿ ಮುಳುಗಿರಬೇಕು. ಅಂದರೆ ಆಗ ಉಂಟಾದ ಅನುಭವವನ್ನೇ ಅವನು ಹೇಳುತ್ತಾನೆ. ನಿದ್ರೆಮಾಡುವಾಗ ಜ್ಞಾನ ವಿದ್ದರೂ, 'ನಾನು ಚೆನ್ನಾಗಿ ನಿದ್ರೆಮಾಡುತ್ತಿದ್ದೇನೆ' ಎಂದು ಅವನಿಗೆ ಆಗ ತಿಳಿಯಲಿಲ್ಲ. ಆದ್ದರಿಂದಲೇ 'ಸುಷುಪ್ತಿಯಲ್ಲಿ ಅನುವ್ಯವಸಾಯವಿಲ್ಲ' ವೆಂದು ಹೇಳುತ್ತೇವೆ, ಆದ್ದರಿಂದ ಜಾಗ್ರತ್, ಸ್ವಪ್ನ, ಸುಷುಪ್ತಿ ಎನ್ನುವ ಮೂರು ಸ್ಥಿತಿಗಳಲ್ಲಿಯೂ ಕೂಡ ಒಂದೇ ಜ್ಞಾನ ಪ್ರಕಾಶಿಸುತ್ತದೆ. ವಿಷಯಗಳು ಬೇರೆಯಾಗುವಾಗ ಅದಕ್ಕೆ ದೊರೆಯುವ ಹೆಸರುಗಳು ಬೇರೆ ಬೇರೆಯಾಗುತ್ತವೆ. ಹೀಗೆ ದಿನ, ಪಕ್ಷ, ಮಾಸ, ಋತು, ಅಯನ, ವರ್ಷ ಕಲ್ಪ ಮುಂತಾದ ಎಲ್ಲಾ ಕಾಲಗಳಲ್ಲಿಯೂ ಒಂದೇ ಜ್ಞಾನವೇ ಪ್ರಕಾಶಿಸುತ್ತಾ 'ನಿತ್ಯವಾಗಿ ಬೆಳಗುತ್ತದೆ. ಹೀಗೆ ಚೈತನ್ಯವೆನ್ನುವುದು 'ನಿತ್ಯ' ವೆನ್ನುವುದನ್ನು ಯುಕ್ತಿಯಿಂದ ನಿರೂಪಣೆ ಮಾಡಬಹುದು.

ಚೈತನ್ಯ 'ಸುಖ ಸ್ವರೂಪಿ' ಎನ್ನುವುದಕ್ಕೆ ಯುಕ್ತಿಯನ್ನು ನೋಡೋಣ.

ನಿದ್ರೆಮಾಡುವಾಗ ಸುಖವುಂಟೇ ಇಲ್ಲವೇ ಎಂದರೆ, ಸುಖವುಂಟು ಎನ್ನುವುದು ಅನುಭವಕ್ಕೆ ಬರುತ್ತದೆ. ಆ ಸುಖ ಎಲ್ಲಿಂದ ಬಂದುದು ? ಯಾವುದಾದರೂ ತಿಂಡಿ ತಿನಸುಗಳನ್ನು ತಿಂದುದರಿಂದಲೋ, ಯಾವುದಾದರೂ ವಸ್ತುಗಳನ್ನು ನೋಡಿದುದರಿಂದಲೋ, ಯಾರನ್ನಾದರೂ ಹಾಸ್ಯ ಮಾಡಿದುದರಿಂದಲೋ ಬಂದದ್ದಲ್ಲ.

ಗಾಢನಿದ್ರೆಯಲ್ಲಿ ಯಾವ ವಸ್ತುವಿನೊಡನೆಯೂ ಸಂಬಂಧವಿಲ್ಲ. ಹೊರಗಿನಿಂದ ಸುಖ ಬರುವುದಕ್ಕೆ ಮಾರ್ಗವೇ ಇಲ್ಲ. ಆದ್ದರಿಂದ ಚೈತನ್ಯ ಸ್ವರೂಪವಾಗಿರುವ (ದೇಹದಿಂದಲೂ, ಮನಸ್ಸಿನಿಂದಲೂ ಬೇರೆ ಯಾದ 'ನಾನು' ಎಂದು ಹೇಳಲ್ಪಡುವ) ಆ 'ನನ್ನ' ಹತ್ತಿರದಿಂದಲೇ ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಫುರಿಸಲು ಸಾಧ್ಯ. ಇಲ್ಲದಿದ್ದರೆ ಬದಲಾಗುತ್ತದೆ. ಆದ್ದರಿಂದ 'ನಾನು' ಎನ್ನುವುದೇ ಆನಂದಸ್ವರೂಪವಾಗಿ ಇದ್ದೇನೆ. ಇತರ ಸಮಯಗಳಲ್ಲಿ ವಿಷಯಗಳ ಸಂಬಂಧದಿಂದ ಆ ಆನಂದವೆನ್ನುವುದು ಮರೆತು ಹೋಗುತ್ತದೆ. ಅದು ಹೊರಗೆ ತೋರಬೇಕಾದರೆ ವಿಷಯಗಳ ಸಂಬಂಧವನ್ನು ತಪ್ಪಿಸ ಬೇಕು. ಹೇಗೆ ಕೊಳೆಯಾದ ಕನ್ನಡಿಯಲ್ಲಿ ಸರಿಯಾಗಿ ಮುಖ ತೋರ ಬೇಕಾದರೆ ಕೊಳೆಯನ್ನು ಒರಸಿ ಬಿಡುತ್ತೇವೋ, ಅದೇ ರೀತಿ ಸುಖಸ್ವರೂಪ ವನ್ನು ತಿಳಿಯ ಬಯಸಿದರೆ ವಿಷಯಗಳ ಸಂಬಂಧವನ್ನು ಬಿಡಬೇಕು. ಇಲ್ಲ ದ್ಧಿದ್ದರೆ, 'ಆತ್ಮನು ಸುಖಸ್ವರೂಪಿ' ಎನ್ನುವುದು ಸ್ಪಷ್ಟವಾಗಿ ತಿಳಿಯಲಾ ಗುವುದಿಲ್ಲ. ಹೀಗೆ ಯುಕ್ತಿಗಳನ್ನು ಹೇಳಿದ್ದಾರೆ.

ವೇದ ಏನೆಂದು ಹೇಳುತ್ತದೆ?

'ಸ ಯಚ್ಚಾಯಂ ಪುರುಷೇ ಯಚ್ಚಾಸಾವಾದಿತ್ಯೇ'—ಈ ಆತ್ಮನು ಒಬ್ಬನೇ ಈ ಶರೀರದಲ್ಲಿ, ಸೂರ್ಯನಲ್ಲಿ ಸರ್ವವ್ಯಾಪಿಯಾಗಿದ್ದಾನೆ.

ಕೇವಲ ಶಾಸ್ತ್ರವನ್ನು ಹೇಳಿಕೊಂಡಿದ್ದರೆ ಅದು ನಂಬಿಕೆಯನ್ನು ಉಂಟುಮಾಡುವುದಿಲ್ಲ. ಆದ್ದರಿಂದ ಯುಕ್ತಿ ಎನ್ನುವುದು ಅವಶ್ಯಕವಾಗು ತ್ತದೆ. ಯುಕ್ತಿಯೂ ಇರಬಹುದು. ಶಾಸ್ತ್ರವೂ ಇರಬಹುದು. ಆದರೆ ಹೋಗಿ ನೋಡಿದವನು ಯಾರೂ ಇಲ್ಲ ಎಂದರೆ ನಮಗೆ ಹೇಗೆ ನಂಬಿಕೆ ಯಾಗುತ್ತದೆ? ಅದಕ್ಕಾಗಿಯೇ ಶಂಕರರು 'ದೇಶಿಕೋಕ್ತಿಃ ಪ್ರಮಾಣಂ' ಎಂದರು. 'ದೇಶಿಕನು' ಹೇಳುವುದು ಪ್ರಮಾಣವೇ, ದೇಶಿಕನು ಯಾರು?

ಶಾಂತಾ ಮಹಾಂತೋ ನಿವಸನ್ತಿ ಸಂತೋ
ವಸಂತವಲ್ಲೋಕಹಿತಂ ಚರನ್ತಃ।
ತೀರ್ಣಾಃ ಸ್ವಯಂ ಭೀಮ ಭವಾರ್ಣವಂ ಜನಾನ್
ಅಹೇತುನಾನ್ಯಾನ್ಪಿ ತಾರಯನ್ತಃ ॥

(ವಸಂತಕಾಲದಂತೆ ಲೋಕಹಿತವನ್ನು ಮಾಡುತ್ತಾ ತಾವು ಸ್ವತಃ ದಾಟಿದವರಾಗಿದ್ದುಕೊಂಡು ಅಕಾರಣವಾಗಿಯೇ ಇತರ ಜನರನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಭಯಂಕರ ಸಂಸಾರವೆನ್ನುವ ಕಡಲಿನಿಂದ ದಾಟಿಸುವವರಾಗಿ, ಶಾಂತ ಸ್ವರೂಪರಾಗಿ ಸಾಧುಗಳಾಗಿರುವ ದೊಡ್ಡವರು (ಪ್ರಪಂಚದಲ್ಲಿ) ಇರುತ್ತಲ್ಲಿದ್ದಾರೆ.)

ಎಂದೂ ಹೇಳಿದಂತೆ ಇರುವವರು ದೇಶಿಕರು. ಅವರು ಸಂಸಾರಸಮುದ್ರವನ್ನು ದಾಟಿರುವವರು. ಅವರ ಶರೀರವಿರುವುದಕ್ಕೆ ಸ್ವಲ್ಪ ಮಟ್ಟಿಗೆ ಅವರ ಕರ್ಮ ಕಾರಣವಾಗಿದೆ. ತತ್ತ್ವವನ್ನು ಅರಿತುಕೊಳ್ಳುವ ಪುಣ್ಯ ಶಿಷ್ಯನಿಗೆ. ಇದರಿಂದ,

> ಆಚಾರ್ಯಾತ್ ಲಬ್ಧಬೋಧಾ ಅಪಿ ವಿಧಿವಶತಃ ಸನ್ನಿಧೌ ಸಂಸ್ಥಿತಾನಾಂ ।
> ತ್ರೇಧಾ ತಾಪಂ ಚ ಪಾಪಂ ಸಕರುಣ ಹೃದಯಾಃ ಸೋಕ್ತಿಭಿಃ ಕ್ಷಾಳಯನ್ತಿ ॥

(ಆಚಾರ್ಯರ ಹತ್ತಿರವಿದ್ದು, ಮೊದಲು ಮಾಡಿದ ಪುಣ್ಯಫಲವಾಗಿ ಜ್ಞಾನವನ್ನು ಪಡೆದವರು ಕೂಡ, ತಮ್ಮ ಮುಂದಿರುವರ ಮೂರು ವಿಧವಾದ ತಾಪಗಳನ್ನೂ, ಪಾಪಗಳನ್ನೂ ಸಕರುಣ ಹೃದಯರಾಗಿದ್ದು ತಮ್ಮ ಮಾತುಗಳಿಂದ ದೂರ ಮಾಡುತ್ತಾರೆ.)

ಎಂದು ಶಂಕರರು ಹೇಳುವಂತೆ, ಆಚಾರ್ಯರು ಹೇಳಿಕೊಟ್ಟು ಶಿಷ್ಯರೂ ಗುರುವಾಗುತ್ತಾರೆ.

'ವಿಧಿವಶತಃ' ಗುರುವಿಗೆ 'ಇದನ್ನು ಮಾಡಬೇಕು, ಅದನ್ನು ಮಾಡಬೇಕು' ಎನ್ನುವ ಆಸೆ ಇಲ್ಲ. ಆದರೆ ಶರೀರ ಇನ್ನೂ ಇರುವುದರಿಂದ ಪ್ರಾರಬ್ಧ ಕರ್ಮ ಇರುವುದರಿಂದಲೂ 'ಆತ್ಮ ಜ್ಞಾನಪಡೆಯುವುದು' ಎನ್ನುವ ಯೋಗದಿಂದಲೂ ಹೇಳಿಕೊಡುತ್ತಾರೆ.

'ತ್ರೇಧಾ ತಾಪಂ ಚ ಪಾಪಂ' – ಮೂರು ವಿಧವಾದ ತಾಪವೂ, ಪಾಪವೂ ಅವರ ಯುಕ್ತಿಯಿಂದ ದೂರವಾಗುತ್ತವೆ. ಇದನ್ನೇ ಶಂಕರರು 'ದೇಶಿಕೋಕ್ತಿಃ ಪ್ರಮಾಣಂ' ಎಂದು ಹೇಳುತ್ತಾರೆ. ದೇಶಿಕರು ಹೇಳು

Sri Vidyabharathi Book Centre, Sringeri

CC-0. In Public Domain. Digitized by eGangotri

ವುದನ್ನು ನಾವು ಕೇಳಿಕೊಂಡೇ ಇರಬೇಕು. ಅನಂತರವೇ - - - 'ಸ್ವಾನು ಭೂತಿ ಪ್ರಮಾಣಂ' ಎನ್ನುತ್ತಾರೆ.

ನಮಗೆ ಏಕೆ ಅನುಭೂತಿ ಉಂಟಾಗಲಿಲ್ಲವೆಂದರೆ, ನಾವು ಶಾಸ್ತ್ರವನ್ನು ಓದಲಿಲ್ಲ. ಅದನ್ನು ಸರಿಯಾಗಿ ವಿಮರ್ಶಿಸಿಲ್ಲ. ನಮಗೆಲ್ಲ, ನೀಲಕಂಠದೀಕ್ಷಿತರು ಹೇಳುವಂತೆ ಮಡಿಕೆ ಅನಿತ್ಯ, ಮಡಿಕೆಯಾಗಿರುವಿಕೆ ಅನಿತ್ಯ ಎನ್ನುವುದು ಮಾತ್ರ ಗೊತ್ತು. ಇಂಥ ವಿವೇಕ ವಿವೇಕವಲ್ಲ. ನಮ್ಮ ಅಜ್ಞಾನವನ್ನು ದೂರಮಾಡುವುದೇ ವಿವೇಕ. ಹಾಗೆ ನಾವು ಶಾಸ್ತ್ರವನ್ನು ಓದಿದರೂ, ದೇಶಿಕರ ಯುಕ್ತಿಯನ್ನು ಕೇಳಿದರೂ, ನಾವು ಅವುಗಳನ್ನು ಸಾಧನೆ ಮಾಡುವವರೆಗೆ ಅವುಗಳು ಪ್ರಯೋಜನವಾಗುವುದಿಲ್ಲ. ದೇಶಿಕರಾದವರು ತಮಗೆ ಅನುಭೂತಿಯಾದುದೆಲ್ಲವನ್ನೂ ಶಿಷ್ಯನಿಗೆ ಹೇಳಿದರೂ ಕೂಡ ಶಿಷ್ಯನು ಸಾಧನೆ ಮಾಡದೆ ಇದ್ದರೂ ಏನೂ ಪ್ರಯೋಜನವಾಗುವುದಿಲ್ಲ.

ಅದೇ ವೇದಾಂತ ಶಾಸ್ತ್ರವನ್ನು ಎಲ್ಲರೂ ಓದುತ್ತಾರೆ. ಹಾಗೆ ಓದುವುದು ಯಾರಿಗೆ ಫಲಿಸುತ್ತದೆ ಎನ್ನುವುದನ್ನು,

ಅಧೀತೇ ಜ್ಞಾತಾನವ್ರತ ಜಪಸಮಾಧಾನ ನಿಯಮೈಃ ।
ವಿಶುದ್ಧಸ್ವಾನ್ತಾನಾಂ. ಜಗದಿದಮಸಾರಂ ವಿಮೃಶತಾಮ್ ॥

ಎನ್ನುವ ಶ್ಲೋಕದಲ್ಲಿ ಹೇಳಿದ್ದಾರೆ. ನಾವು ಈ ರೀತಿಯಲ್ಲಿ ಇರಬೇಕು. ಶಾಸ್ತ್ರಗಳನ್ನು ಕಲಿತು, ಅದರಂತೆ ನಮ್ಮ ವರ್ಣಾಶ್ರಮ ಧರ್ಮಗಳನ್ನು ಚೆನ್ನಾಗಿ ಪಾಲಿಸುತ್ತಾ ಅದರಿಂದ ಭಗವಂತನ ಅನುಗ್ರಹವನ್ನು ಸಂಪಾದಿಸಬೇಕು. ಇದೇ ಅಲ್ಲದೆ, ದಾನ, ವ್ರತ, ಜಪ, ಸಮಾಧಿ ಇವುಗಳೆಲ್ಲವೂ ಕೂಡ ಇರಬೇಕೆಂದು ಈ ಶ್ಲೋಕದಲ್ಲಿ ಹೇಳಿದೆ.

ಮನಸ್ಸೆನ್ನುವುದೇ ವಿಚಿತ್ರವಾದುದು. ಸಂಸ್ಕಾರವಿರುವ ಮನಸ್ಸೆನ್ನುವುದು. ಅದು ಇಲ್ಲದಿರುವ ಮನಸ್ಸಿಗಿಂತಲೂ ಪೂರ್ತಿಯಾಗಿ ಬೇರೆಯಾಗಿರುತ್ತದೆ. ಕೃಷ್ಣನ ಕಥೆ ಓದಿದರೆ ಅವನು ಬೆಣ್ಣೆಯನ್ನು ಕದ್ದು

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಂದನೆಂದು ಬರುತ್ತದೆ. ಇದನ್ನು ಓದಿ ನಾವು ಏಕೆ ಬೆಣ್ಣೆಯನ್ನು ಕದ್ದು ತಿನ್ನಬಾರದು ಎಂದುಕೊಂಡು ಯಾರೂ ಹಾಗೆ ಮಾಡಕೂಡದು. ಹಾಗೆ ಕಥೆ ಹೇಳುವ ತಾತ್ಪರ್ಯ ವೇನೆಂದರೆ, ಜನರಿಗೆ ಭಗವಂತನನ್ನು ಬೇರೆ ಬೇರೆ ರೀತಿಯಲ್ಲಿ ವರ್ಣನೆ ಮಾಡಿದರೆ ಅದರಲ್ಲಿ ಅಭಿರುಚಿ ಉಂಟಾಗುತ್ತದೆ ಎನ್ನುವುದೇ ಆಗುತ್ತದೆ. ಸಾಧಾರಣ ಜನರಿಗೆ ಭಗವಂತನ ಬಾಲಲೀಲೆಗಳು ಭಗವಂತನ ಮೇಲೆ ಪ್ರೇಮವನ್ನು ಉಂಟುಮಾಡುತ್ತವೆ. ಅಲ್ಲದೆ, ಭಕ್ತನ ಮನಸ್ಸನ್ನು ಒಳಗೆ ಮಾರ್ಪಡಿಸುವುದಕ್ಕಾಗಿ ಭಗವಂತನ ಲೀಲೆಗಳು ತೋರಿಸಲ್ಪಟ್ಟಿರಬಹುದು. ಇದು ಬಿಟ್ಟು ಭಗವಂತನು ಮಾಡಿದ್ದೆಲ್ಲವನ್ನೂ ನಾನು ಮಾಡುತ್ತೇನೆ ಎಂದರೆ ಭಗವಂತನು ಗೋವರ್ಧನ ಪರ್ವತವನ್ನು ಎತ್ತಿದಂತೆ ನೀನು ಅದನ್ನು ಎತ್ತಿ ಹಿಡಿದು ಕೊಳ್ಳು ಎಂದರೆ ಆ ಮನುಷ್ಯನಿಗೆ ಅದು ಆಗದ ಕೆಲಸವಾಗುತ್ತದೆ. ಆದ್ದರಿಂದ ನಾವು ನಮ್ಮ ಅಂತಃಕರಣವನ್ನು ಶುದ್ಧವಾಗಿಟ್ಟುಕೊಳ್ಳ ಬೇಕು. ನಾವು ನಮ್ಮ ವರ್ಣಾಶ್ರಮ ಧರ್ಮಗಳನ್ನು ಸರಿಯಾಗಿ ಅನುಷ್ಠಾನ ಮಾಡಿದರೆ ಮನಸ್ಸು ಶುದ್ಧವಾಗಿರುತ್ತದೆ. ಆಗ ಶಾಸ್ತ್ರ ಗಳಲ್ಲಿ ಹೇಳಲ್ಪಟ್ಟ ತಾತ್ಪರ್ಯ ತಿಳಿಯುತ್ತದೆ. ಹೀಗಿಲ್ಲದಿದ್ದರೆ ಅವನು ಬೇರೆ ರೀತಿಯಾಗಿ ಅರ್ಥ ಮಾಡಿಕೊಳ್ಳುತ್ತಾನೆ.

ಒಂದು ಉದಾಹರಣೆ ನೋಡೋಣ. ಒಮ್ಮೆ ಒಬ್ಬನು ದೇವಸ್ಥಾನಕ್ಕೆ ಹೋದನು. ಅದುವರೆಗೆ ಅವನಿಗೆ ದೇವಸ್ಥಾನಕ್ಕೆ ಹೋಗಿ ಅಭ್ಯಾಸವೇ ಇಲ್ಲ. ದೇವಸ್ಥಾನದಲ್ಲಿ ಅವನಿಗೆ ತೀರ್ಥ ಕೊಟ್ಟರು. ಅವನು ಅದನ್ನು ತೆಗೆದುಕೊಂಡನು. ಆದರೆ ಬಾಯಲ್ಲಿ ಏನೋ ಸಿಕ್ಕಿಕೊಂಡಂತೆ ಇದ್ದಿತು. ನೋಡಿದರೆ, ಅದು ತೀರ್ಥದೊಡನೆ ಬಂದ ತುಳಸಿ ದಳ. ಅದನ್ನು ಅವನು ಅಲ್ಲಿಯೇ ಉಗಿದುಬಿಟ್ಟನು. ತಕ್ಷಣ ಅಲ್ಲಿದ್ದ ಒಬ್ಬನು 'ಏನಯ್ಯಾ ಇದು, ದೇವಸ್ಥಾನದಲ್ಲಿ ಉಗಳಬಹುದೆ'? ಎಂದು ಕೇಳಿದನು. ಅವನು ಒಡನೆ ಆ ತುಳಸಿದಳವನ್ನು ಅಲ್ಲಿದ್ದ ಭಗವಂತನ ವಿಗ್ರಹದ ಮೇಲೆ ಇಟ್ಟುಬಿಟ್ಟನು. ಇದನ್ನು ನೋಡಿದ ಮತ್ತೊಬ್ಬನು, 'ಇಲ್ಲಿ ಇಡಬೇಡ ಅಯೋಗ್ಯ' ಎಂದನು. ತುಳಸಿಯನ್ನು ತೆಗೆದು ಅವನು ಇನ್ನೊಂದು

Sri Vidyabharathi Book Centre, Sringeri

CC-0. In Public Domain. Digitized by eGangotri

ವಿಗ್ರಹದ ಮೇಲೆ ಇಟ್ಟನು. ಅದಕ್ಕೂ ಬೈಗುಳ ತಿಂದು ಮತ್ತೆ ಕೈನಲ್ಲೇ ಹಿಡಿದುಕೊಂಡು ಹೊರಟು ಹೋದನು.

ಸಂಸ್ಕಾರವಿಲ್ಲದವನಿಗೆ ತುಳಸಿಯನ್ನು ಉಗಳ ಬಾರದೆಂದು ಹೇಳಿದರೆ ಅವನಿಗೆ ಅದನ್ನು ಎಲ್ಲಿಡಬೇಕೆಂದು ತಿಳಿಯುವುದಿಲ್ಲ. ಸಂಸ್ಕಾರವಿರುವವನು ತುಳಸಿಯನ್ನು ತೀರ್ಥದೊಡನೆ ಸ್ವೀಕರಿಸುತ್ತಾನೆ. ಇದೇ ರೀತಿ ವೇದಾಂತ ಶಾಸ್ತ್ರ ವಿಷಯದಲ್ಲೂ,

ಸಾಂಸಾರಿಕಸುಖಾಸಕ್ತಂ ಅಹಂ ಬ್ರಹ್ಮೇತಿವಾದಿನಂ ।
ಕರ್ಮಬ್ರಹ್ಮೋಭಯಭ್ರಷ್ಟಂ ತಂ ತ್ಯಜೇತ್ ಅಂತ್ಯ ಜಂಯಥಾ॥

ಎನ್ನುವಂತೆ ಸಂಸ್ಕಾರವಿಲ್ಲದವನ ನಡವಳಿಕೆ ಇರುತ್ತದೆ. ಅಂದರೆ ಅವನು ಯಾವಾಗಲೂ ವೇದಾಂತವನ್ನು ನೋಡಿ, ಯಾರು ಬಂದರೂ ಸರಳವಾಗಿ ವೇದಾಂತಕ್ಕೆ ವಿವರವನ್ನು ಹೇಳುತ್ತಾನೆ. ಮತ್ತೊಂದು ಕಡೆ, ನನಗೆ ಸಂಬಳ ಇನ್ನೂ ಹೆಚ್ಚಾಗಲಿಲ್ಲವಲ್ಲಾ! ನಾನು ಸೋಫಾಸೆಟ್ ಕೊಂಡು ಕೊಳ್ಳಲಾಗಲಿಲ್ಲವಲ್ಲಾ? ಎಂದು ಯೋಚನೆ ಮಾಡುತ್ತಿರುತ್ತಾನೆ. ಆದ್ದರಿಂದ ಅವನಿಗೆ ಕರ್ಮವೂ ಇಲ್ಲ, ಬ್ರಹ್ಮವೂ ಇಲ್ಲ, ಅಂತಹವನನ್ನು ಬಿಟ್ಟು ಬಿಡಬೇಕೆಂದು ಶ್ಲೋಕ ಹೇಳುತ್ತದೆ. ಸಂಸ್ಕಾರವಿದ್ದರೆ ಅವನು ಜ್ಞಾನವನ್ನು ಪಡೆದೊಡನೆಯೇ

ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।
ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಪಿನ ನಿಬಧ್ಯತೇ ॥

(ತಾನಾಗಿಯೇ ದೊರೆತುದರಲ್ಲಿ ಸಂತೋಷಪಡುವವನೂ, ದ್ವಂದ್ವವಿಲ್ಲದವನೂ, ವಿಮತ್ಸರನೂ, ಜಯಾಪಜಯಗಳಲ್ಲಿ ಸಮನಾಗಿರುವವನೂ ಕರ್ಮಗಳನ್ನು ಮಾಡಿದರೂ ಅವುಗಳಿಗೆ ಒಳಗಾಗುವುದಿಲ್ಲ.)

ಎನ್ನುವಂತೆ ಪ್ರಾರಬ್ಧ ಕರ್ಮದಿಂದಾಗಿ ಅವನು ದೇಹದ ಕೆಲಸಗಳನ್ನು ಮಾಡುತ್ತಾ ಹೋಗುತ್ತಾನೆ. ಆಯಾ ಸಮಯದಲ್ಲಿ ಯಾವುದಾದರೂ ದೊರೆತರೆ ಸರಿ. ಇಲ್ಲದಿದ್ದರೆ ಅದು ಕೂಡ ಭಗವಂತನ ಸಂಕಲ್ಪವೆಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಳ್ಳುತ್ತಾನೆ. ಇವನು ತನ್ನ ಮನಸ್ಸಿನ ಶಾಂತಿ ಸ್ಥಿತಿಯನ್ನು ಬಿಟ್ಟು ಎಂದೂ ಅಸ್ಥಿರನಾಗಿರುವುದಿಲ್ಲ. ಆದ್ದರಿಂದ ವೇದಾಂತವನ್ನು ಓದಲೇಬೇಕಾದರೆ ಮನಸ್ಸು ಸಂಸಾರದಿಂದ ಕೂಡಿದ್ದು ವಿಚಾರಮಾಡಬೇಕು.

ಇಲ್ಲಿ ಇನ್ನೊಂದು ವಿಷಯವನ್ನೂ ಗಮನಿಸಬೇಕು. ವಿಚಾರವೆನ್ನುವುದನ್ನು ನಾವು ಶಾಸ್ತ್ರ ಓದಿ ಅದೇ ರೀತಿಯಲ್ಲಿ ಮಾಡಬೇಕು ಅಲ್ಲದೆ, ಯಾವ ವಿಚಾರಕ್ಕಾಗಲಿ ಮೂಲವೆನ್ನುವುದು ಬೇಕು. ಒಬ್ಬನು ಕಳ್ಳತನ ಮಾಡಿದನೆಂದು ಇಟ್ಟುಕೊಳ್ಳಿ. ಕೆಲವರು, 'ಕಳ್ಳತನ ಮಾಡುವುದು ತಪ್ಪಲ್ಲವೆಂದು ನಾವು ಭಾವಿಸುತ್ತೇವೆ' ಎಂದು ಹೇಳಿದರೆ ಅದಕ್ಕೆ ನಾವು ಏನು ಹೇಳುತ್ತೇವೆ? 'ನೀನು ಏನು ಬೇಕಾದರೂ ಹೇಳು. ಆದರೆ ಇದಕ್ಕೆಲ್ಲಾ ಕಾನೂನು ಪುಸ್ತಕವೊಂದು ಬಂದಿದೆ. ಅದರಲ್ಲಿ ಕಳ್ಳತನ ಮಾಡುವುದು ತಪ್ಪೆಂದೂ, ಅದಕ್ಕೆ ಆರು ತಿಂಗಳು ಜೈಲುಶಿಕ್ಷೆ ಉಂಟೆಂದು ಹೇಳಿದೆಯೆಂದು ಹೇಳುತ್ತೇವೆ. ಈ ಪುಸ್ತಕವನ್ನು ಮೂಲವಾಗಿಟ್ಟುಕೊಂಡು ಅವನು ನಿಜವಾಗಿಯೂ ಕಳ್ಳತನ ಮಾಡಿದನೆ ಎನ್ನುವುದನ್ನೆಲ್ಲಾ ವಿಚಾರಣೆ ಮಾಡಬಹುದು. ಆದ್ದರಿಂದ ಮೂಲವೆನ್ನುವುದು ಬೇಕು. ಅದೇ ಇಲ್ಲದೆ ವಿಚಾರವೇ ಮಾಡಲಾಗುವುದಿಲ್ಲ. ಅದೇ ರೀತಿ ಉಪನಿಷತ್ತು ಮೂಲವಾಗಿ ತಿಳಿಯಲ್ಪಡುವ ಪರವಸ್ತುವನ್ನು ಉಪನಿಷತ್ತೇ ಇಲ್ಲದೆ ವಿಚಾರ ಮಾಡಿದರೆ,

ಯತ್ನೇನಾನುಮಿತೋಽಪ್ಯರ್ಥಃ ಕುಶಲೈರನುಮಾತೃಭಿಃ ।

ಎನ್ನುವಂತೆ ಆಗುತ್ತದೆ.

ಮೊದಲು ನಾವು ವೇದಾಂತಕ್ಕೆ ಶರಣಾಗಬೇಕು. ಅದರಲ್ಲಿ ಹೇಳಿದಂತೆ ಬಾಳನ್ನು ನಡೆಸಬೇಕು. ಮನಸ್ಸು ಶುದ್ಧವಾಗುತ್ತಾ ಆಗುತ್ತಾ 'ಕರ್ಮ' ತಾನಾಗಿಯೆ ಸ್ವಲ್ಪವಾಗಿ ಬಿಟ್ಟು ಹೋಗುತ್ತದೆ. ಬಿಟ್ಟು ಹೋದ ಕರ್ಮಕ್ಕಾಗಿ ನಾವು ಅಳಬೇಕಾಗಿಲ್ಲ. ವಿಚಾರ ತೀವ್ರವಾಗುತ್ತಿದೆಯೋ ಎಂದು ಮಾತ್ರ ನಾವು ನೋಡಬೇಕು. ಹಾಗೆ ಅದು ತೀವ್ರವಾದರೆ,

Sri Vidyabharathi Book Centre, Sringeri

CC-0. In Public Domain. Digitized by eGangotri

'ಅತ್ರ ಬ್ರಹ್ಮ ಸಮಶ್ನುತೇ'

ಎನ್ನುವಂತೆ ಈ ಜನ್ಮದಲ್ಲೇ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಅದರ ಮೂಲಕ ಪುನರ್ಜನ್ಮವಿಲ್ಲದಂತೆ ಮಾಡಿಕೊಳ್ಳಬಹುದು. ಜನ್ಮವೇ ಇಲ್ಲ ಎಂದರೆ ದುಃಖವೇ ಇಲ್ಲ. ದುಃಖವಿಲ್ಲದ, ನಿತ್ಯ ಸುಖವಾಗಿರುವ ಆತ್ಮನನ್ನು ಕುರಿತ ಜ್ಞಾನವನ್ನು ಪಡೆದು 'ಬ್ರಹ್ಮವಿದಾಪ್ನೋತಿ ಪರಂ' ಎನ್ನುವಂತೆ ಇರಬೇಕು. ಬ್ರಹ್ಮವನ್ನು ಬಿಟ್ಟು ಬೇರೆ ಯಾವ ವಸ್ತುವೂ ಪರ ವಸ್ತುವಲ್ಲ. ಹೀಗೆ 'ಬ್ರಹ್ಮವಿದ್ ಬ್ರಹ್ಮೈವಭವತಿ' ಎನ್ನುವಂತೆ ನಾವು ಪರವಸ್ತುವನ್ನು ಪಡೆದು ನಮ್ಮ ಈ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕು.

ಶಂಕರಭಗವತ್ಪಾದರು ಒಂದು ಕಡೆ ಒಂದು ಉದಾಹರಣೆ ಕೊಟ್ಟಿದ್ದಾರೆ. ನಮ್ಮ ದೇಹ ಒಂದು ದೋಣಿಯಂತಿದೆ. ಇದರಲ್ಲಿ ಕುಳಿತಿರುವ ಜೀವನನ್ನು ಸೋಮಾರಿ, 'ಎಷ್ಟು ನೀರು ಬಂದರೂ ಚಿಂತೆಯೇನು ? ನಾನಾದರೂ ದೋಣಿಯಲ್ಲಿ ಕುಳಿತಿದ್ದೇನೆ' ಎಂದುಕೊಳ್ಳುತ್ತಾನೆ. ಆದರೆ

ಪರಾಂಚಿ ಕಾನಿ ವ್ಯತೃಣತ್ಸ್ವಯಂಭೂಃ ।
ತಸ್ಮಾತ್ ಪರಾಙ್ಪಶ್ಯತಿ ನಾನ್ತರಾತ್ಮನ್ ॥

(ಸ್ವಯಂಭೂ ಆದ ಪರಮೇಶ್ವರನು ಹೊರಗಿನ ವಸ್ತುಗಳನ್ನು ಕೊರೆಯುಳ್ಳದ್ದಾಗಿ ಮಾಡಿರುವುದರಿಂದ ಹೊರ ವಸ್ತುಗಳನ್ನೇ ಮನುಷ್ಯನು ಕಾಣುತ್ತಾನೆಯೇ ಹೊರತು ಆತ್ಮನನ್ನು ಅಲ್ಲ.)

ಎಂದು ಹೇಳುವಂತೆ ಇಂದ್ರಿಯಗಳು ಓಡುವ ಕಡೆಯೇ ನಾವೂ ಓಡುತ್ತೇವೆ. ಇಂದ್ರಿಯಗಳೆಲ್ಲ ನಮ್ಮ ದೋಣಿಯಲ್ಲಿರುವ ಛಿದ್ರಗಳು. ಆ ಛಿದ್ರಗಳನ್ನು ನಾವು ಮುಚ್ಚದೆ ಹೋದರೆ ಸ್ವಲ್ಪ ದೂರ ಹೋದ ಮೇಲೆ ನಮ್ಮ ದೋಣಿ ಮುಳುಗಿ ಹೋಗುತ್ತದೆ. ನಾವೂ ಮುಳುಗಿ ಹೋಗುತ್ತೇವೆ. ಆದ್ದರಿಂದ ನಾವು ಪುಣ್ಯ ಸಾಧಕವಾಗಿ, ಜ್ಞಾನಸಾಧಕವಾಗಿ ಇರುವ ಮನುಷ್ಯ ಜನ್ಮ, ಸಾಧಕವಾಗಿ ಇರುವ ಮನುಷ್ಯ ಜನ್ಮವನ್ನು ವ್ಯರ್ಥ ಮಾಡಿಕೊಳ್ಳಬಾರದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇತಃ ಕೋನ್ವಸ್ತಿ ಮೂಢಾತ್ಮಾ ಯಸ್ತು ಪ್ರಮಾದ್ಯತಿ ।
ದುರ್ಲಭಂ ಮಾನುಷಂ ದೇಹಂ ಪ್ರಾಪ್ಯತತ್ರಾಪಿ ಪೌರುಷಮ್ ॥

[ದುರ್ಲಭವಾದ ಮನುಷ್ಯ ಶರೀರವನ್ನೂ, ಆದರಲ್ಲೂ ಪುರುಷತನವನ್ನೂ ಪಡೆದ ತನ್ನ (ಆತ್ಮನ) ವಿಷಯವಾಗಿ ದಾರಿ ತಪ್ಪುವವನಿಗಿಂತಲೂ ಮೂಢಾತ್ಮನಾಗಿ ಯಾರಾದರೂ ಇರಬಹುದೇ ?]

ಕಾಲವೆನ್ನುವುದು ದೊರೆಯುವುದು ಕಷ್ಟ. ಮತ್ತೆ ಯಾವ ವಸ್ತುವಾದರೂ ದೊರೆಯಬಹುದು. ಆದರೆ ಕಾಲವೆನ್ನುವುದು ವ್ಯರ್ಥವಾಗಿ ಹೋಯಿತೆಂದರೆ ಪುನಃ ಅದನ್ನು ಸಂಪಾದಿಸಲು ಸಾಧ್ಯವಿಲ್ಲ. ಅದ್ದರಿಂದ ನಾವು ಬಹಳ ಗಮನದಿಂದಿರಬೇಕು. ನಮ್ಮ ಆಭರಣಗಳನ್ನೆಲ್ಲಾ ಕಳ್ಳನು ಕದ್ದುಕೊಂಡು ಹೋದರೆ ನಾವು ಅಳುವಂತೆ ಕಾಲ ಸ್ವಲ್ಪ ವ್ಯರ್ಥವಾದರೂ ನಾವು ಅಳಬೇಕು. ದೊರೆತಿರುವ ಮನುಷ್ಯ ಜನ್ಮ ಬಹಳ ದುರ್ಲಭವಾದುದು. ಪ್ರಪಂಚವೆನ್ನುವುದರ ಬಗ್ಗೆ ತಕ್ಕ ಮಟ್ಟಿಗೆ ನಮಗೆ ಗೊತ್ತು. ಆದ್ದರಿಂದ ಇದರಲ್ಲಿಯೇ ನಾವು ಯಾವಾಗಲೂ ಭ್ರಮಿಸಿಕೊಂಡು ಇರಬಾರದು. ನಾವು ಸಾಧಿಸಬೇಕಾದವು ಬಹಳ ಇವೆ. 'ಇತಃ ಕೋನ್ವಸ್ತಿ - - - - ಪೌರುಷಮ್' ಎನ್ನುವ ಶ್ಲೋಕದಂತೆ ಯಾರು ಮೂಢಾತ್ಮರೆಂದು ಶಂಕರರು ಹೇಳಿದರು. ಆದ್ದರಿಂದ, ನಾವು ಮನುಷ್ಯ ಜನ್ಮವನ್ನು ಪಡೆದಿರುವುದರಿಂದ ಆತ್ಮಸಾಕ್ಷಾತ್ಕಾರ ಪಡೆಯಲು ಪ್ರಯತ್ನಿಸಿ ಅದನ್ನು ಪಡೆಯಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಪ್ಪೋಲೆ

ಪುಟ	ಸಾಲು	ತಪ್ಪು	ಸರಿ
2	16	ಕೂಡಿರುತರುತ್ತದೆ	ಕೂಡಿರುತ್ತದೆ
3	24	ವಿರೋಧವಾತ	ವಿರೋಧವಾಗಿ
5	16	ಸ್ಫುಟಮೇ	ಸ್ಫುಟಮೇವ
7	19	ವೈದಿಕ್ಷ	ವೈದಿಕ
	21	ಹೇಳಿದ್ದಾರೆ	ಹೇಳಿದ್ದಾನೆ
	24	ಯೋಗ್ಯತೆಗಳೆಲ್ಲವನೂ	ಯೋಗ್ಯತೆಗಳೆಲ್ಲವನ್ನೂ
15	18-19	ಪುರೈಪೀಹ	ಅಭಿಲಷಾ ಪುನರಪೀಹ
70	10	ಭಂಡೋದರೇ	ಭಾಂಡೋದರೇ
	12	ಸಂಪೂರ್ಯೋನ	ಶಂಭುರ್ಯೋನ
71	3	ಅನೆಭವಿಸ	ಅನುಭವಿಸ
	22	ಸಂಭವಾಮ್ಯಾತ್ಮಮಾತ್ಮ ಮಾಯಯೂ	ಸಂಭವಾಮ್ಯಾತ್ಮಮಾಯಯಾ
73	1	ಸಂಪೂರ್ಯೋನ	ಶಂಭುರ್ಯೋನ
93	23	ಕ್ವೇಕೇ	ಪಕ್ವೇ
96	26	ಚಕ್ರಾದಯೋ	ಶಕ್ರಾದಯೋ
104	21	ನ್ಯತೈವ	ನ್ಯಥೈವ
105	17	ಸೇವಾತ್ಮಶಕ್ತಿಂ	ಸ್ವೈವಾತ್ಮಶಕ್ತಿಂ
110	11	ಸೋಕ್ತಿಭಿಃ	ಸ್ವೋಕ್ತಿಭಿಃ
119	14	ಪರಾಂಚಕಾನಿ	ಪರಾಂಚಿಖಾನಿ
	15	ಪರಾಜಂ ಪಶ್ಯತಿ ನಾಂತರಾತ್ಮಾನ	ಪರಾಜ ಪಶ್ಯತಿನಾಂತರಾತ್ಮನ್
116	2	ತತಾಪಿ	ತತ್ರಾಪಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri